ಅಧ್ಯಕ್ಷರು:- ಅವರು ನಿಮ್ಮನ್ನು ಕೇಳುತ್ತಿದ್ದಾರೆ.

SRI D.B. CHANDRE GOWDA:- I don't want to go beyond the decision of what we have taken. That is all. I leave it to you.

SRI M.V. VENKATAPPA:- You can take the consensus of the House at this stage.

MR. SPEAKER: That is not the way to go about deciding the opinion. I had to, you know, what I had to...

ಶ್ರೀ ವೀರೇಂದ್ರಪಾಟೀಲ್:- ನನ್ನ ಸಹೋದ್ಯೋಗಿಯಾದ ಶ್ರೀ ಬಂಗಾರಪ್ಪನವರು ನಾಡಿದ್ದು ಇರುವ ಹಾಗೆ ಇಲ್ಲ, ಇದ್ದಿದ್ದರೆ ನಾನು ಯೋಚನೆ ಮಾಡುತ್ತಿದ್ದೆ ಎಲ್ಲರೂ ನಾಡಿದ್ದು ಬೆಳಿಗ್ಗೆ 9 ಗಂಟೆಯಿಂದ 1 ಗಂಟೆಯವರೆಗೆ ಉತ್ತರ ಕೊಡುವುದು ನಂತರ ಅಪ್ರೋಪ್ರಿಯೇಷನ್ ಬಿಲ್ ಎಲ್ಲಾ ಪೂರ್ತಿಯಾದ ಮೇಲೆ ಯಾವ ದಿವಸವನ್ನು ತಾವು ನಿಗದಿ ಮಾಡುತ್ತೀರಿ ಆಗ ಕುಲದೀಪ್ ಸಿಂಗ್ ಕಮಿಷನ್ ವರದಿಯನ್ನು ತೆಗೆದುಕೊಳ್ಳೋಣವೆಂದು. ಈಗ ಶ್ರೀ ಬಂಗಾರಪ್ಪನವರು ಉತ್ತರವನ್ನು ಕೊಡಲಿ ಏತಕ್ಕೆಂದರೆ ಅವರು ನಾಡಿದ್ದು ಇರಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಅವರು ಆದಷ್ಟು ಸಂಕ್ಷಿಪ್ತವಾಗಿ ತಮ್ಮ ಉತ್ತರ ನೀಡುತ್ತಾರೆ. ಅವರು ಒಬ್ಬರು ಉತ್ತರ ಕೊಡಲು ತಾವು ಅವಕಾಶ ಮಾಡಿಕೊಟ್ಟರೆ ಉಳಿದ ನಾವು ಮೂರು ಜನರು ನಾಡಿದ್ದು ನಮ್ಮ ಉತ್ತರ ಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಶ್ರೀ ಬಂಗಾರಪ್ಪನವರ ಉತ್ತರ ಸಂಕ್ಷಿಪ್ತವಾಗುತ್ತದೆಯೋ ಎಂದು ನಮ್ಮ ಸಂಕಟ.

ಕೃಷಿ ಮತ್ತು ತೋಟಗಾರಿಕೆ ಸಚಿವರಿಂದ ಉತ್ತರ

† ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು) :- ಮಾನ್ಯ ಸಭಾಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನನ್ನ ಉತ್ತರಕ್ಕೆ ಈ ದಿನವೇ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೂ ಹಾಗೂ ವಿರೋಧ ಪಕ್ಷದ ನಾಯಕರಿಗೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಅಭಿನಂದನೆಗಳನ್ನು ಹೇಳಲೇ ಇಲ್ಲವಲ್ಲ

ಶ್ರೀ ಎಸ್. ಬಂಗಾರಪ್ಪ:- ನನಗೆ ಕೂಡಲೇ ತಮ್ಮ ಬಗ್ಗೆ ಮರವು ಬರುತ್ತದೆಂದು ನಾನು ಭಾವಿಸಿರಲಿಲ್ಲ. ನಾನು ಆದಷ್ಟು ಸಂಕ್ಷಿಪ್ತವಾಗಿ ಉತ್ತರಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಲ್ಲಾ ಮಾನ್ಯ ಸದಸ್ಯರು ಮನೆಗಳಿಗೆ ಹೋಗುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ತಡವಾಗುತ್ತಿದೆ ಎನ್ನುವ ದೃಷ್ಟಿಯಿಂದ ಈ ಅಭಿಪ್ರಾಯವನ್ನು ಹೇಳಿದ್ದಾರೆ.. ಅದಕ್ಕೆ ಸಂಕ್ಷಿಪ್ತವಾಗಿ ಉತ್ತರಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನಗೆ ಸಂಬಂಧಪಟ್ಟಿರತಕ್ಕಂತಹ ಬೇಡಿಕೆ ನಂ. 1, 2, 3 ವಾಟರ್ ಷೇರ್, ಅಗ್ರಿಕಲ್ಚರಲ್ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರುಗಳು ಏನು ಪ್ರಾಮಾಣಿಕವಾಗಿ ಹೇಳತಕ್ಕ ವಿಚಾರಗಳನ್ನು ಕೂಡ ಚರ್ಚೆಯ ಕಾಲದಲ್ಲಿ ವ್ಯಕ್ತಪಡಿಸಿದ್ದಾರೆ. ನನಗೆ ಒಂದೇ ಒಂದು ವ್ಯಥೆ ಏನೆಂದರೆ ಈ ಒಂದು ಇಲಾಖೆಯು ಮೇಲೆ ಬೇರೆ ಇಲಾಖೆಗಳು ಯಾವುವು ಇವೆ ಅವುಗಳು ಅಮುಖ್ಯವಾದವುಗಳು ಎಂದು ಹೇಳುತ್ತಿಲ್ಲ. ಎಲ್ಲಾ ಇಲಾಖೆಗಳೂ ಕೂಡ ಅಷ್ಟೇ ಮುಖ್ಯವಾದವುಗಳು. ಆದರೆ ವ್ಯವಸಾಯದ ಅರ್ಥದ ವ್ಯಾಪ್ತಿಯಲ್ಲಿ ಇರತಕ್ಕ ಇಲಾಖೆಗಳು ಕೃಷಿ ಮತ್ತು ತೋಟಗಾರಿಕೆ, ಈ ಇಲಾಖೆಗಳ ಮೇಲೆ ಹೆಚ್ಚಿನ ಕಾಲವನ್ನು ಖರ್ಚು ಮಾಡಿ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಕಾಲಾವಕಾಶದ ಅಭಾವ ಇದ್ದರೂ ಇಷ್ಟೊಂದು ಕಾಲಾವಕಾಶವನ್ನು ಮಾನ್ಯ ಸಭಾಧ್ಯಕ್ಷರು ಕಷ್ಟಪಟ್ಟು ನಿಗದಿ ಮಾಡಿಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಸದಸ್ಯರ ಪರವಾಗಿ ಅವರನ್ನು ಅಭಿನಂದಿಸುತ್ತೇನೆ. ಆದ್ದರಿಂದ ಕೊನೆಯಪಕ್ಷ ಇಷ್ಟಾದರೂ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಯಿತು. ನನಗೆ

ಗೊತ್ತಿದೆ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸತಕ್ಕ ಸಂದರ್ಭದಲ್ಲಿ ಕಡಿಮೆ ಕಾಲದಲ್ಲಿ ಬಹಳ ವಿಚಾರಗಳನ್ನು ಹೇಳತಕ್ಕದ್ದು ಬಹಳ ಕಷ್ಟ. ಶ್ರೀಮಾನ್‌ಆಚಾರ್‌ರವರು ಹೇಳತಕ್ಕ ಧಾಟಿಯನ್ನು ನೋಡಿದರೆ ಪಾಯಿಂಟ್ ನಂಬರ್ 1, ಪಾಯಿಂಟ್ ನಂಬರ್ 2, 3 ಎಂದು ಸಲಹೆಗಳನ್ನು ಮಾತ್ರ ಕೊಟ್ಟಿದ್ದಾರೆ. ಯಾವುದೇ ಒಂದು ವಿಷಯವನ್ನು ಚರ್ಚೆಗೆ ಒಳಪಡಿಸಿ ನಂತರ ಸಲಹೆಗಳನ್ನು ಕೊಡತಕ್ಕಂತದ್ದು ಸೂಕ್ತ. ಆದರೆ ಕಾಲವಕಾಶದ ಅಭಾವದಿಂದ ಬರೀ ಸಲಹೆಗಳನ್ನು ಕೊಡತಕ್ಕಂತಹದ್ದು ಸಮಾಧಾನಕರವಾದ ಕೆಲಸವಾಗಿ ಪರಿಣಮಿಸಲಾರದು. ಆದು ಅನಿವಾರ್ಯ ಸಂದರ್ಭದಲ್ಲಿ ಆ ರೀತಿ ಆಗುತ್ತಿದೆ. ಅದು ಏನೇ ಇರಲಿ, ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಚರ್ಚೆಯ ಕಾಲದಲ್ಲಿ ವ್ಯಕ್ತಪಡಿಸಿದ್ದಾರೆ. ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕೃಷಿ, ತೋಟಗಾರಿಕೆ ಇತ್ಯಾದಿ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಕೆಲವೊಮ್ಮೆ ಆಗಿರತಕ್ಕ ತಪ್ಪುಗಳನ್ನು ಎತ್ತಿ ತೋರಿಸತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಸಲಹೆಗಳನ್ನು ಕೊಟ್ಟಿದ್ದಾರೆ. ತಪ್ಪುಗಳು ಆಗಿರುತ್ತವೆ ಇಲ್ಲ ಎನ್ನುವ ಮಾತನ್ನು ಹೇಳುತ್ತಿಲ್ಲ. ನನ್ನ ಇಲಾಖೆಯಲ್ಲಿ ಒಂದೇ ಒಂದು ತಪ್ಪಾಗಿಲ್ಲ ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಒಂದು ವೇಳೆ ಅಂಥ ತಪ್ಪುಗಳಾಗಿದ್ದರೆ, ಜವಾಬ್ದಾರಿಯಿಂದ ಪ್ರಾಮಾಣಿಕತನದಿಂದ ಅವುಗಳನ್ನು ಸರಿಪಡಿಸತಕ್ಕ ಪ್ರಯತ್ನ ಮಾಡುತ್ತೇನೆಂದು ಈ ಸದನದ ಮುಖಾಂತರ ಮಾನ್ಯ ಸದಸ್ಯರುಗಳಿಗೆ ಆಶ್ವಾಸನೆ ಕೊಡುತ್ತಿದ್ದೇನೆ. ಸಲಹೆಗಳನ್ನು ಏನು ಕೊಟ್ಟಿದ್ದಾರೆ, ನಾನು ಅವರಿಗೆ ಸದಾ ಋಣಿಯಾಗಿದ್ದೇನೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕಾನೂನು ವ್ಯಾಪ್ತಿಯಲ್ಲಿ ಸರ್ಕಾರದ ಶಕ್ತಿಯ ವ್ಯಾಪ್ತಿಯಲ್ಲಿ ಯಾವ ರೀತಿಯಾಗಿ ಅವುಗಳನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವೋ ಆದಷ್ಟು ಮಟ್ಟಿಗೆ ಅವುಗಳನ್ನು ಜಾರಿಗೆ ಕೊಡತಕ್ಕ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಇವತ್ತು ಕೃಷಿ ಇಲಾಖೆಯನ್ನು ಪ್ರಮುಖವಾಗಿ ತೆಗೆದುಕೊಳ್ಳುತ್ತೇನೆ. ನಂತರ ತೋಟಗಾರಿಕೆ, ವಾಟರ್‌ಶೆಡ್ ಡೆವಲಪ್‌ಮೆಂಟ್ ಪ್ರೋಗ್ರಾಂಮ್ಸ್ ಅದನ್ನು ಮುಂದೆ ಪ್ರತ್ಯೇಕವಾಗಿ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇನೆ. ಜೊತೆಗೆ ಸಂಶೋಧನೆ ಮಾಡತಕ್ಕ ಕೃಷಿ ವಿಶ್ವವಿದ್ಯಾನಿಲಯಗಳು ಏನು ಇವೆ, ಅವುಗಳಿಗೆ ಸಂಬಂಧಪಟ್ಟ ಹಾಗೆ ವಿಚಾರವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತೇನೆ. ಅದೇ ರೀತಿ ಬೋರ್ಡ್ಸ್ ಮತ್ತು ಕಾರ್ಪೋರೇಷನ್‌ಗಳು ಏನು ನಮ್ಮ ಇಲಾಖೆಯಲ್ಲಿವೆ, ಅವುಗಳ ಬಗ್ಗೆಯೂ ಕೂಡ 5-5 ನಿಮಿಷ ಮಾತ್ರ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಐದಾರು ಬೋರ್ಡ್ ಮತ್ತು ಕಾರ್ಪೋರೇಷನ್‌ಗಳು ಇದ್ದು ಹೆಚ್ಚಿನ ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಬಿಟ್ಟರೆ ಉಳಿದ ಬೋರ್ಡ್ ಹಾಗೂ ಕಾರ್ಪೋರೇಷನ್‌ಗಳ ಬಗ್ಗೆ ತಮ್ಮ ವಿಚಾರ ವ್ಯಕ್ತ ಮಾಡಿಲ್ಲ. ಇದಕ್ಕೆ ಕಾರಣ ಕಾಲಾವಕಾಶ ಇಲ್ಲದ್ದು ಎಂದು ನನಗೂ ತಿಳಿದಿದೆ. ಆದರೂ ಆ ಬೋರ್ಡ್ ಮತ್ತು ಕಾರ್ಪೋರೇಷನ್‌ಗಳ ಬಗ್ಗೆ ನಾನು ಪ್ರಸ್ತಾಪ ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ಇವತ್ತು ಈಬಗ್ಗೆ ಮಾತನಾಡಬೇಕಾದ್ದು ಸರ್ಕಾರದ ಜವಾಬ್ದಾರಿ ಇದೆ. ಉದಾಹರಣೆಗೆ ನನಗೆ ಸಂಬಂಧ ಪಟ್ಟ ಕೃಷಿ, ತೋಟಗಾರಿಕೆ, ಕೃಷಿ ವಿಶ್ವವಿದ್ಯಾನಿಲಯ ಇತ್ಯಾದಿ ಇಲಾಖೆಗಳ ಬಗ್ಗೆ ಸದಸ್ಯರು ಏನೂ ಮಾತನಾಡಿಲ್ಲವೆಂದರೂ ಸರ್ಕಾರದ ವಿಚಾರಗಳು, ಸರ್ಕಾರದ ಪ್ರಕಟಣೆಗಳು ಇದ್ದಾಗ ನಾವು ಅದನ್ನು ಹೇಳತಕ್ಕ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದು ಹೇಳುತ್ತೇನೆ. ಈ ಒಂದು ಮೂಲಭೂತ ಅನಿಸಿಕೆಯ ಹಿನ್ನೆಲೆಯಲ್ಲಿ ನಾನು ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೃಷಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಚಿಕ್ಕೇಗೌಡರು ಮತ್ತು ಪ್ರೊಫೆಸರ್ ನಂಜುಂಡಸ್ವಾಮಿಯವರು ಸಲಹೆಗಳನ್ನು ಕೊಟ್ಟರು, ಆದರೆ ಮಾನ್ಯ ಚಿಕ್ಕೇಗೌಡರು ನನ್ನ ಉತ್ತರಕ್ಕೆ ಕಾದು ಕಾದು ಕುಳಿತಿದ್ದು ಉತ್ತರ ಕೊಡುವ ಕಾಲದಲ್ಲಿ ಸ್ವಲ್ಪ ವ್ಯತ್ಯಾಸ ಆದುದರಿಂದ ತಮಗೆ ಒಂದು ಕಾರ್ಯಕ್ರಮ ಇದೆ ಎಂದು ಹೊರಟುಹೋದರು. ಆದರೂ ಕೂಡಾ ಬರುವ ಪ್ರಯತ್ನ ಮಾಡುತ್ತೇನೆಂದು ಹೇಳಿ ಹೋದರು. ಉತ್ತರದ ಸಮಯದಲ್ಲಿ ಚರ್ಚೆಯಲ್ಲಿ

ಭಾಗವಹಿಸಿದ ಮಾನ್ಯ ಸದಸ್ಯರು ಸಭೆಯಲ್ಲಿ ಇದ್ದರೆ ಬಹಳ ಚೆನ್ನಾಗಿರುತ್ತದೆಂದು ನನ್ನ ಅಭಿಪ್ರಾಯ ಮತ್ತೆ ಪ್ರೊಫೆಸರ್‌ಜೀ ಅವರು ಈಗ ಇಲ್ಲದಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ಕೆಲವು ಯೋಗ್ಯ ಸಲಹೆಗಳನ್ನು ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾ ಅವರು, ಬಿಜಾಪುರ ಜಿಲ್ಲೆಯ ಮಾನ್ಯ ಶಾಸಕರು ಮತ್ತು ಬೇರೆ ಬೇರೆ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ನಾನು ಮತ್ತೊಮ್ಮೆ ಅಭಿನಂದಿಸುವ ಅವಶ್ಯಕತೆ ಇಲ್ಲ. ಈಗಾಗಲೇ ಅವರಿಗೆ ನಾನು ಅಭಿನಂದಿಸಿದ್ದೇನೆ. ನಾನು ಕರ್ನಾಟಕ ರಾಜ್ಯದ ಕೃಷಿ ವಿಚಾರದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಯ ಕೃಷಿ ನೀತಿ ಬಗ್ಗೆ ಒಂದೆರಡು ಮಾತನ್ನು ಪೂರ್ವ ಪೀಠಿಕೆಯಾಗಿ ಇಟ್ಟರೆ ಬಹಳ ಒಳ್ಳೆಯದೆಂದು ಭಾವಿಸುತ್ತೇನೆ. ಕೃಷಿಕ ಎಂದರೆ ಯಾರು? ರೈತ ಎಂದರೆ ಯಾರು ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ನಮ್ಮ ನಮ್ಮ ನಮೂನೆಗೆ ನಾವು ಕೃಷಿಕರನ್ನು ಕಂಡಿದ್ದೇವೆ. ಕೆಲವರ ಅಭಿಪ್ರಾಯದಲ್ಲಿ ಶೇಕಡಾ 72, 72, 77, 80ರಷ್ಟು ಕೃಷಿಕರಿಂದಲೇ ತುಂಬಿರತಕ್ಕ ನಮ್ಮ ಸಮಾಜ ಕೃಷಿಕರ ಸಮಾಜ ನಾವು ಒಬ್ಬ ರೈತ ಎಂದು ಹೇಳಿದಾಗ ಭೂಮಿಯ ಮಾಲೀಕನನ್ನು ಮಾತ್ರ ಗಮನದಲ್ಲಿಟ್ಟು ಮಾತನಾಡುತ್ತೇವೆ. ಅದು ತಪ್ಪು ಕಲ್ಪನೆ. ಅದು ಸಂಪೂರ್ಣ ಅರ್ಥ ಆಗುವುದಿಲ್ಲ.

ಒಬ್ಬ ರೈತ ಎನ್ನುವ ಪದದ ಅರ್ಥ, ಪದದ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಭೂ ಮಾಲೀಕನಿಗೆ ಎಷ್ಟೇ ಭೂಮಿ ಇರಬಹುದು ಆದರೆ ಕೃಷಿಯನ್ನೇ ನಂಬಿ ಜೀವನ ಮಾಡತಕ್ಕ ಅಗ್ರಿಕಲ್ಚರ್ ಲೇಬರರ್ ಎಂದು ಏನು ಹೇಳುತ್ತೇವೆ ಕೃಷಿ ಕಾರ್ಮಿಕ ಏನಿದ್ದಾನೆ ಅವನೂ ಕೂಡ ಅರ್ಥದ ವ್ಯಾಪ್ತಿಯಲ್ಲಿ ಬರುತ್ತಾನೆ. ಒಬ್ಬ ಮನುಷ್ಯನ, ಅವನ ಒಂದು ಆಕೃತಿ ಮಾಡಿ ನಿಲ್ಲಿಸಿದರೆ ನಾವು ಏನು ಒಬ್ಬ ರೈತ ಎಂದು ಹೇಳುತ್ತೇವೆ ಆ ರೈತನ ಹೆಸರು ಹೇಳಿದರೆ ಅದು ಕೃಷಿ ಎಂದು ಅರ್ಥ ಅಲ್ಲ. ರೈತ ಎನ್ನುವ ಅರ್ಥ ಕೃಷಿ ಕಾರ್ಮಿಕ, ಭೂಮಾಲೀಕ, ಅಷ್ಟಕ್ಕೆ ನಿಲ್ಲುವುದಿಲ್ಲ. ಅಮೇರಿಕಾ ದೇಶದಲ್ಲಿ ಹೆಚ್ಚಾಗಿ ಯಾಂತ್ರೀಕೃತ ಕೃಷಿ ಪ್ರಧಾನ್ಯತೆ ಇರತಕ್ಕ ಆ ಸಮಾಜದಲ್ಲಿ ಒಬ್ಬ ಕೃಷಿಕ ಎಂದರೆ ಅಲ್ಲಿನ ಅರ್ಥದಲ್ಲಿ ಆತನ ಟ್ರಾಕ್ಟರ್ ಸಹ ಸೇರುತ್ತದೆ ಹಾಗೂ ನೀರಿನ ಪಂಪುಸೆಟ್ಟೂ ಸೇರಬಹುದು. ಹೆಚ್ಚಿನ ಯಾಂತ್ರಿಕತೆ ಇರುವ ಆ ದೇಶಗಳಲ್ಲಿ ರೈತ ಎನ್ನುವ ಪದಕ್ಕೆ ಅರ್ಥ ಆ ಮಟ್ಟದಲ್ಲಿ ಇದೆ. ಆದರೆ ಒಬ್ಬ ರೈತನ ಅರ್ಥದ ವ್ಯಾಖ್ಯಾನ ನಮ್ಮ ದೇಶದಲ್ಲಿ, ಆ ಮನೆಯ ಯಜಮಾನ, ಅವನ ಹೆಂಡತಿ, ಮಕ್ಕಳು, ಎತ್ತು, ಎಮ್ಮೆ, ಆಕಳುಗಳು, ಗಾಡಿ, ಬೇಸಾಯದ ಉಪಕರಣಗಳು, ಗೊಬ್ಬರ, ಗದ್ದೆ–ಇತ್ಯಾದಿ ಎಲ್ಲವೂ ಕೂಡಿ ಆ ಒಂದು ಪದದ ಅರ್ಥ ಬರುತ್ತದೆ. ಈ ಒಂದು ಅರ್ಥದ ಕಲ್ಪನೆ ನಮ್ಮ ಸಮಾಜದಲ್ಲಿ ಇಲ್ಲದಿದ್ದರೆ ನಾವು ಕೃಷಿಕನನ್ನು ಅರ್ಥಮಾಡಿಕೊಳ್ಳುವ ವಿಚಾರದಲ್ಲಿ ವಿಫಲರಾಗಿದ್ದೇವೆ ಎಂದು ನನ್ನ ಒಂದು ಸ್ಪಷ್ಟವಾದ ಭಾವನೆ.

ಕೃಷಿಗೆ ಬೆಲೆ ಕೊಡದೇ ಇರತಕ್ಕ ಕಾಲ ಒಂದಿತ್ತು. ನಾನು ರಾಷ್ಟ್ರ ಕವಿ ಕುವೆಂಪುರವರು ಹೇಳಿರತಕ್ಕ ಮಾತನ್ನು ಇಲ್ಲಿ ನೆನಸಿಕೊಳ್ಳಲೇ ಬೇಕಾಗಿದೆ. “ಕೋಗಿಲೆ ಮತ್ತು ಸೋವಿಯತ್ ರಷ್ಯ” ಪುಸ್ತಕದಲ್ಲಿ ಅದರಲ್ಲಿ ಒಂದು ಕವನ ಇದೆ, ಅದು ಬಹಳ ಚಿಕ್ಕದು. ಅದರಲ್ಲಿ ಗೊಬ್ಬರದ ಮೇಲೆ ಕವನ ಇದೆ. "ಗೊಬ್ಬರದ ಮೇಲೆ ಕಬ್ಬಮಂ ಬರೆಯುವುದೇ?" ನಾನು ಅಷ್ಟಕ್ಕೆ ನಿಲ್ಲಿಸುತ್ತೇನೆ. ಗೊಬ್ಬರ ಅಂದರೆ ಕೃಷಿಗೆ ಸಂಬಂಧಪಟ್ಟ ವಿಚಾರ. ಗೊಬ್ಬರವನ್ನು ಭೂಮಿಗೆ ಎರಚಿ ಅಥವಾ ಚೆಲ್ಲಿ ಉತ್ತು ಬಿತ್ತು ಬೆಳೆಯತಕ್ಕ ಗೊಬ್ಬರ ‘ಗೊಬ್ಬರದ ಮೇಲೆ ಕಬ್ಬಮಂ ಬರೆಯುವುದೇ’ ಎನ್ನತಕ್ಕ ಕಾಲವೊಂದಿತ್ತು ಎನ್ನುವ ಮಾತನ್ನು ಹೇಳುತ್ತಾರೆ. ಹಾಗಲ್ಲ, ಕೃಷಿ ಪ್ರಧಾನವಾಗಿರತಕ್ಕ ನಮ್ಮ ಸಮಾಜದಲ್ಲಿ ಒಂದು ತೃಣ ಅಂದರೆ ತುಣುಕುಕೂಡ ಆ ಒಂದು ಅಭಿಪ್ರಾಯ. ಮೂಲಭೂತವಾಗಿ ಅವರು ಹೇಳತಕ್ಕ ಸಂದರ್ಭದ ಮಾತು. ಗೊಬ್ಬರದ ಮೇಲೆ ಕಬ್ಬಮಂ ಬರೆಯುವುದೇ ಅಂದರೆ ಆಶ್ಚರ್ಯಪಡತಕ್ಕ ಸಮಾಜ. ಜನ ಆ ಮಾತನ್ನು ಹೇಳುತ್ತಾರೆ. ಬಂಗಾರಕ್ಕೆ ಎಷ್ಟು ಬೆಲೆ, ವಜ್ರಕ್ಕೆ ಎಷ್ಟು ಬೆಲೆಯಿದೆ ಅಷ್ಟೇ ಬೆಲೆ ಗೊಬ್ಬರಕ್ಕೆ ಇದೆ ಎನ್ನುವ ಮಾತನ್ನು ಹೇಳಿದ್ದಾರೆ, ರೈತ ಅಥವಾ ಕೃಷಿಕ ದೇಶದ ಮೂಲೆ ಮೂಲೆಯಲ್ಲಿ ಹಾಗೆಯೇ ಉಳಿದುಕೊಂಡಿದ್ದಾನೆ ಅದೇ ನಮ್ಮ ದುರದೃಷ್ಟ. ಸಮಾಜದಲ್ಲಿ ಪ್ಯಾಂಟು ಶರಟು ಹಾಕಿಕೊಂಡು ಜಬರದಸ್ತಾಗಿ ಓಡಾಡಿದರೆ ಸಮಾಜದಲ್ಲಿ ಗೌರವ ಸಿಗುತ್ತದೆ. ಆ

ಪರಿಸ್ಥಿತಿಯಿಂದ ದೂರವಾಗದ ಹೊರತು ರೈತನ ಮುಖಾಂತರ ದೇಶವೂ ಉದ್ಧಾರವಾಗುವುದಿಲ್ಲ ಎನ್ನುವ ಸ್ಪಷ್ಟ ಕಲ್ಪನೆಯ ಅರ್ಥವೂ ಕೂಡ ಹೌದು. ಹೆಬ್ಬೆಟ್ಟನ್ನು ಒತ್ತುವ ವರ್ಗ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ಈ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಗ್ರಾಮೀಣ ಭಾಗದಲ್ಲಿರತಕ್ಕ ಜನರಿಗೆ ಅನ್ವಯಿಸತಕ್ಕ ವಿಚಾರ ಇದು. ನಮ್ಮಲ್ಲಿ ಆಂಗ್ಲರ ಆಳ್ವಿಕೆಯಿಂದ ಹಿಡಿದು ನಮ್ಮ ರಾಷ್ಟ್ರದಲ್ಲಿ ಅಕ್ಷರ ಜ್ಞಾನವನ್ನು ಪಡೆದಿರತಕ್ಕವರು ಶೇಕಡ 18ರಷ್ಟು ಮಾತ್ರ. ನಾವು ಇಷ್ಟೊಂದು ಪ್ರಮಾಣದಲ್ಲಿ ಸ್ಕೂಲ್‌ಗಳು ಕಟ್ಟಡಗಳು ಉಪಾಧ್ಯಾಯರುಗಳನ್ನು ನೇಮಕ ಮಾಡಿದರೂ ಕೂಡ ಶೇಕಡ 61-62 ರಷ್ಟು ಜನ ಕರಿಯಪ್ಪನ ಎಡಗೈ ಹೆಬ್ಬೆಟ್ಟಿನ ಗುರುತಿಗೆ ಮರಿಯಪ್ಪನ ಬರಹ ಎಂದು ಬರೆಯಿಸತಕ್ಕದ್ದನ್ನು ಇನ್ನು ಮರೆಯಲಾಗಿಲ್ಲ. ಶೇಕಡ 37-38 ರಷ್ಟು ಮಾತ್ರ ಅಕ್ಷರಸ್ಥರು ಇದ್ದಾರೆ. ಉಳಿದ ಶೇಕಡ 62 ರಷ್ಟು ಜನ ಸಾಕ್ಷರತೆಯ ಮಟ್ಟವನ್ನು ತಲುಪದೇ ಇರತಕ್ಕ ಜನ ನಮ್ಮಲ್ಲಿದ್ದಾರೆ. ಇಂತಹ ವರ್ಗದವರ ಜೊತೆ ನಾವು ವ್ಯವಹಾರ ಮಾಡಬೇಕಾದ ಸಂದರ್ಭವಿದೆ. ಇವತ್ತು ಗ್ರಾಮೀಣ ಭಾಗದಿಂದ ಬರತಕ್ಕ ರೈತನಿಗೆ ಯಾವ ರೀತಿಯ ಗೌರವ ಸಿಗುತ್ತದೆ ಎನ್ನುವುದು ಮುಖ್ಯವಾಗಿರತಕ್ಕ ವಿಚಾರ. ಕಛೇರಿಗಳಲ್ಲಿ ಕೋರ್ಟ್‌ಗಳಲ್ಲಿ ಅಥವಾ ಯಾವುದೇ ಸರ್ಕಾರದ ಕಛೇರಿಗಳಿಗೆ ವಿಧಾನ ಸೌಧಕ್ಕೆ ಒಬ್ಬ ರೈತ ಬಂದರೆ ಅವನ ಸ್ಥಾನಮಾನವನ್ನು ಈ ಸಮಾಜದಲ್ಲಿ ಗುರುತಿಸುವುದಿಲ್ಲ. ಇದು ಸ್ಪಷ್ಟವಾಗಿರತಕ್ಕ ವಿಚಾರ ಇದನ್ನು ಸರಿಪಡಿಸಬೇಕು. ರೈತವರ್ಗಕ್ಕೆ ಇಡೀ ಸಮಾಜ ನಮನ ಮಾಡಬೇಕು.ಅನ್ನ ಕೊಡತಕ್ಕ ಕೈ, ಈ ಕೈಗೆ ಸಮಾಜದಲ್ಲಿ ಸ್ಥಾನಮಾನ ಸಿಗುತ್ತಿಲ್ಲ. ಅದಕ್ಕೋಸ್ಕರ ಇವತ್ತು ಈ ಸಮಾಜದಲ್ಲಿ ಇಷ್ಟೊಂದು ತೊಂದರೆಯನ್ನು ರೈತ ಪಡುತ್ತಿದ್ದಾನೆ. ಈ ಮೂಲ ವಿಚಾರವನ್ನು ನಾವು ಮರೆತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ, ರಾಷ್ಟ್ರದ ಹಿತದೃಷ್ಟಿಯಿಂದ ರೈತನಿಗೆ ಎಲ್ಲಿಯವರೆಗೆ ಸ್ಥಾನಮಾನವನ್ನು ಕೊಡತಕ್ಕ ವಿಚಾರವನ್ನು ಮಾಡುವುದಿಲ್ಲವೋ, ಎಲ್ಲಿಯವರೆಗೆ ಘನತೆ ಗೌರವಗಳನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಈ ರಾಷ್ಟ್ರ ಮತ್ತು ಸಮಾಜ ಉದ್ಧಾರವಾಗುವುದಿಲ್ಲ. ಅದರ ಬಗ್ಗೆ ನಾನು ತಪ್ಪು ಮಾಡಿದ್ದರೂ ನಾನೂ ಸಹ ತಲೆಬಾಗಬೇಕಾಗುತ್ತದೆ. ಇಲ್ಲಿ ಯಾರ್ಯಾರು ಸಂಬಂಧಪಟ್ಟಿದ್ದಾರೆ ಅವರೆಲ್ಲರೂ ತಲೆಭಾಗಬೇಕಾಗುತ್ತದೆ. I think it is high time that we should realise this hard reality. ಈ ಭಾವನೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಒಂದು ಕಾಲವಿತ್ತು, ಆ ಕಾಲದಿಂದ ಬಿಡುಗಡೆಯಾಗತಕ್ಕ ಕಾಲ ಬರುತ್ತಾ ಇದೆ. ನಾವು ಈಗಾಗಲೇ 7ನೇ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿದ್ದೇವೆ. ಎಂಟನೆಯ ಪಂಚವಾರ್ಷಿಕ ಯೋಜನೆಗೆ ಗಮನಕೊಡತಕ್ಕಂಥ ಸಂದರ್ಭದಲ್ಲಿ ಒಂದು ವಾದ ಇದೆ. ಒಟ್ಟು ರಾಷ್ಟ್ರದಲ್ಲಿ ಪ್ಲಾನ್ ಔಟ್‌ಲೇ ಏನಿದೆ ಅದರಲ್ಲಿ ಶೇಕಡಾ 50 ರಷ್ಟು ಹಣವನ್ನು ಕೃಷಿ ಕ್ಷೇತ್ರಕ್ಕೆ ನಾವು ಆಧ್ಯತೆ ಆಧಾರದ ಮೇಲೆ ಅಂದರೆ ಪ್ರಯಾರಿಟಿ ಸೆಕ್ಟರ್ ಎಂದು ಗಮನದಲ್ಲಿಟ್ಟುಕೊಂಡು ಹಣ ಇಡಬೇಕೆಂದು ಒಂದು ಅಭಿಪ್ರಾಯ ಇದೆ. ಹಿಂದಿದ್ದ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಕೃಷಿಗೆ ಗಮನ ಕೊಟ್ಟಿದ್ದೇವೆ. ಹೀಗೆ ಕೊಟ್ಟಿದ್ದರಿಂದ ಈ ಉತ್ಪಾದನೆಯ ವಿಚಾರದಲ್ಲಿ ನಾವು ಸ್ವಾವಲಂಬನೆಯನ್ನು ಪಡೆದಿದ್ದೇವೆ. ಗೋಧಿಯನ್ನು ಅಮೇರಿಕಾ ದೇಶದಿಂದ ಪಡೆಯುತ್ತಿದ್ದೆವು ಅಥವಾ ಮತ್ತೊಂದು ರಾಷ್ಟ್ರದಿಂದ ಪಡೆಯತಕ್ಕಂಥ ಸಂದರ್ಭವನ್ನು ಕಂಡಿದ್ದೆವು. ನಾನು ಎಂ.ಎಲ್. ಎ. ಆದಮೇಲೂ ಕಣ್ಣಾರೆ ನೋಡಿದ್ದು ಮತ್ತು ಚರ್ಚೆಗೆ ಬಂದಿರತಕ್ಕ ವಿಚಾರ ಇದು. ಈಗ ನಾವು ಆಹಾರೋತ್ಪಾದನೆಯ ವಿಚಾರದಲ್ಲಿ ಸ್ವಾವಲಂಬನೆಯನ್ನು ಸಾಧನೆ ಮಾಡಿದ್ದೇವೆ. ಇದಕ್ಕೆ ಯಾರು ಕಾರಣಕರ್ತರು ಎನ್ನುವುದಕ್ಕಿಂತ ಪಂಚವಾರ್ಷಿಕ ಯೋಜನೆಗಳಲ್ಲಿ ಇದನ್ನು ಮಾಡಿದ್ದೇವೆ ಎಂಬುದು ಮುಖ್ಯ. ನಿಜವಾಗಿ ಹೇಳಬೇಕೆಂದರೆ, ಇಥಿಯೋಪಿಯಾ ದೇಶದಲ್ಲಿ ಮೂರು-ನಾಲ್ಕು ವರ್ಷಗಳ ಹಿಂದೆ ಭಾರಿ ಕ್ಷಾಮ ಬಿದ್ದಾಗ ಆಹಾರವನ್ನು ನಾವು ಅಲ್ಲಿಗೆ ಕಳಿಸಿಕೊಟ್ಟರೂ ಕೂಡ ನಮಗೆ ಕೊರತೆ ಬೀಳದ ಹಾಗೆ ನೋಡತಕ್ಕಂಥ ಸ್ವಶಕ್ತಿಯನ್ನು ಆಹಾರ ಉತ್ಪಾದನ ವಿಚಾರದಲ್ಲಿ ಬೇಕಾದಷ್ಟು ಪ್ರಕಟಮಾಡಿದ್ದೇವೆ. ಇದು ಅಂಕಿ ಅಂಶ ಅಷ್ಟೇ ಅಲ್ಲ, ವಾಸ್ತವಾಂಶ ಕೂಡ ಹೌದು. ಇದೇನು ಪಾರ್ಲಿಮೆಂಟಿನಲ್ಲಿ ಹೇಳಬೇಕಾದ ಉತ್ತರವನ್ನು ಇಲ್ಲಿ ಹೇಳುತ್ತಿದ್ದೀರಿ ಎಂದು ತಾವು ಅಂದುಬಿಡಬಹುದೆಂದುಕೊಂಡು ಇದನ್ನು ಇಲ್ಲಿಗೇ ನಿಲ್ಲಿಸಿ, ಅದಕ್ಕೆ ಪೂರಕವಾಗಿ ನಮ್ಮ ಕೊಡುಗೆಯನ್ನು ಏನು ರಾಜ್ಯದಿಂದ ಕೊಟ್ಟಿದ್ದೇವೆ ಅದರ ಬಗ್ಗೆಯೂ ನಾನು

ಪ್ರಸ್ತಾಪಿಸಬಯಸುತ್ತೇನೆ. ಇಂತಹ ಪಂಚವಾರ್ಷಿಕ ಯೋಜನೆಗಳಲ್ಲಿ ಇಂತಿಂಥ ವಿಚಾರದಲ್ಲಿ ಅದು ದ್ವಿದಳ ಧಾನ್ಯ ಇರಬಹುದು, ಆಯಿಲ್ ಸೀಡ್ಸ್ ಇರಬಹುದು, ಸಿಲ್ಕ್ ಪ್ರೊಡಕ್ಷನ್ ಇರಬಹುದು, ಯಾವುದೇ ವಿಚಾರ ಇದ್ದರೂ ಕೂಡ ನಮಗೆ ಏನು ಟಾರ್ಜೆಟ್ ಫಿಕ್ಸ್ ಮಾಡಿದ್ದಾರೆ, ಅದನ್ನು ಕೆಲವೊಮ್ಮೆ ಪ್ರಕೃತಿ ವಿಕೋಪದಿಂದ, ಅನಾವೃಷ್ಟಿಯ ಕಾರಣದಿಂದ ಕಡಿಮೆ ಸಾಧನೆ ಮಾಡಿದರೂ ಕೂಡ ಕರ್ನಾಟಕದ ಕೊಡುಗೆ ಅತಿ ಕಡಿಮೆ ಅಲ್ಲವೆನ್ನುವ ಅಂಶದ ಹಿನ್ನಲೆಯಲ್ಲಿ ನಾನು ಈ ಮಾತನಾಡುತ್ತಿದ್ದೇನೆ, ಅಂದರೆ ಸ್ವಾವಲಂಬನೆಯ ಅರ್ಥದ ವ್ಯಾಪ್ತಿಗೆ ರಾಷ್ಟ್ರಮಟ್ಟಕ್ಕೆ ಕರ್ನಾಟಕದಿಂದ ಕೂಡ ಕೊಡುಗೆ ಉಂಟು ಎನ್ನುವ ಮಾತನ್ನು ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಹಲವಾರು ವಿಚಾರಗಳಲ್ಲಿ ನಾವು ಎಡವಿದ್ದೇವೆ. ತಪ್ಪುಗಳನ್ನು ಅನುಮಾನದಿಂದ ಮಾಡಿದ್ದೇವೆ. ನಿಜ ಹೇಳಬೇಕೆಂದರೆ ಮುಂಬರುವ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ನಾವು ರೈತರಿಗೆ ಹೆಚ್ಚು ಕುಮ್ಮಕ್ಕು ಕೊಡಬೇಕಾಗಿದೆ, ಇದು ಅನಿವಾರ್ಯ. ಉಪ ಪ್ರಧಾನ ಮಂತ್ರಿಗಳಾದ ಶ್ರೀ ದೇವಿಲಾಲ್‌ರನ್ನು ಈ ಸಂದರ್ಭದಲ್ಲಿ ನೆನಸಿಕೊಂಡರೆ ತಪ್ಪಾಗಲಾರದು ಎಂದು ನಾನು ಭಾವಿಸಿದ್ದೇನೆ. ಕೃಷಿ ಖಾತೆಯ ಕೇಂದ್ರದ ಸಚಿವರು ಬಹಳ ಒತ್ತಡ ತಂದಿದ್ದಾರೆ. 50% of the total plan outlay under the coming 8th Five Year Plan should be set apart for agriculture. ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರು ಅಷ್ಟೇ ಅಲ್ಲ, ಯಾವ ಮಟ್ಟಕ್ಕೆ ಹೋದರು ಅಂದರೆ, ಯೋಜನಾ ಆಯೋಗದಲ್ಲಿರತಕ್ಕಂಥ ಸದಸ್ಯರು ಬದಲಾವಣೆ ಆಗಬೇಕು. ಕೃಷಿ ವಿಚಾರದಲ್ಲಿ ಹೆಚ್ಚಿನ ಪರಿಜ್ಞಾನ ಇರತಕ್ಕಂಥವರು ಅಲ್ಲಿ ಇರಬೇಕು ಎನ್ನತಕ್ಕಂಥ ವಿಚಾರವನ್ನು ಅವರು ಹೇಳಿದ್ದಾರೆ. ಇಲ್ಲಿ ಯಾವುದೇ ವಿಷಯವನ್ನು ರಾಜಕೀಯವಾಗಿ ಮಿಕ್ಸ್ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಏಕೆಂದರೆ ಕೃಷಿ ವಿಚಾರ ಬಗ್ಗೆ ಹೆಚ್ಚಿನ ಆಸ್ತೆ ಇರತಕ್ಕಂಥವರು ಅಲ್ಲಿ ಸದಸ್ಯರಾಗಿ ಇದ್ದರೆ ಅದು ರಾಷ್ಟ್ರಕ್ಕೆ ಕ್ಷೇಮ ಎಂದರೆ ಆದರ ಅರ್ಥ ಬಹಳ ಇದೆ. ಇದೇ ಮಾತನ್ನು ಹಿಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದರು. ನಾನು ಈಗಿನ ಪ್ರಧಾನಮಂತ್ರಿಗಳನ್ನೂ ನೆನೆಸಿಕೊಳ್ಳುತ್ತೇನೆ. ಶ್ರೀ ವಿ.ಪಿ. ಸಿಂಗ್ ಅವರೂ ಕೂಡ ಪದೇ ಪದೇ ಹೇಳುತ್ತಿದ್ದಾರೆ. ಕೃಷಿಗೆ ಹೆಚ್ಚಿನ ಒತ್ತನ್ನು ಕೊಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ 'ಒತ್ತು' ಎನ್ನುವುದು ಇತ್ತೀಚಿನ ದಿವಸಗಳಲ್ಲಿ ಹೆಚ್ಚಾಗಿ ಬರುತ್ತಿದೆ. ಸುಮಾರಾಗಿ ಮೊನ್ನೆ ನಡೆದಂಥ National Development Council that was held in Delhi recently ಅಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೂಡ ಒಂದು ಮಾತನ್ನು ಹೇಳಿದರು. 18% is for the institutional finance for the country including our state. ಇದು ಸಾಲದು ಕೊನೆಯಪಕ್ಷ 25 ಪರ್ಸೆಂಟ್‌ನಷ್ಟು ಮಾಡಬೇಕೆಂಬ ತಮ್ಮ ಅಭಿಪ್ರಾಯವನ್ನು ಮುಖ್ಯಮಂತ್ರಿ ಗಳು ಹೇಳಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಕೋಆಪರೇಟಿವ್ ಬ್ಯಾಂಕ್ ಮೂಲಕ ಇರಬಹುದು, ನಬಾರ್ಡ್ ಮುಖಾಂತರ ಇರಬಹುದು, ಯಾವುದೇ ಇರಬಹುದು. ಯಾವ್ಯಾವ ಇನ್ಸ್ಟಿಟ್ಯೂಶನ್ಸ್ ಇವೆ ಈ ಫೈನಾನ್ಸಿಂಗ್ ಪ್ರಮಾಣವನ್ನು ಆರ್ಥಿಕ ಸಹಾಯದ ಪ್ರಮಾಣವನ್ನು ಏತ್ತರಿಸದೇ ಇದ್ದರೆ ರೈತರು ಮೇಲಕ್ಕೆ ಏಳುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ನಿಜ ಹೇಳಬೇಕೆಂದರೆ, ನಾನು ಮುಖ್ಯಮಂತ್ರಿಗಳಿಗೂ ಒತ್ತಡ ತರುತ್ತಿದ್ದೇನೆ. ಈಗ 18 ರಿಂದ 25 ಎಂದು ಏನು ಹೇಳಿದ್ದಾರೆ, ಇದು ಇನ್ನೂ ಸ್ವಲ್ಪ ಮುಂದಕ್ಕೆ ಹೋದರೆ ಒಳ್ಳೆಯದು ಎನ್ನತಕ್ಕಂಥ ಭಾವನೆ ನನ್ನದು. ಇಷ್ಟು ಎನ್ನತಕ್ಕಂಥ ಪ್ರಮಾಣ ಇನ್ನು ಸ್ವಲ್ಪ ಜಾಸ್ತಿಯಾದರೆ ಒಳ್ಳೆಯದೆಂದು ನನ್ನ ಭಾವನೆ. ಈ ತೊಂದರೆಗಳನ್ನು ಏತಕ್ಕಾಗಿ ಅನುಭವಿಸುತ್ತಿದ್ದೇವೆಂದರೆ, ಇದಕ್ಕೆ ಒಂದೇ ಒಂದು ಉತ್ತರ, ಒಂದೇ ಮಾತಿನಲ್ಲಿ ಹೇಳುವುದಾದರೆ, ಇಷ್ಟ ಮಾತ್ರ ನಿಜ, ವಿವರಗಳನ್ನು ಅನಂತರ ನೋಡೋಣ. ಈ ರಾಷ್ಟ್ರಕ್ಕೆ ಇವತ್ತಿನವರೆಗೂ ಒಂದು ಕೃಷಿ ನೀತಿ ಇಲ್ಲ. There is no Policy on Agriculture? Where is the Policy on Agriculture? 19ನೇ ಶತಮಾನದ ಉತ್ತರಾರ್ಧದಲ್ಲಿ ಭಾರಿ ಕ್ಷಾಮ, ಈ ರಾಷ್ಟ್ರಕ್ಕೆ, ರಾಜ್ಯಕ್ಕೆ ಒದಗಿದಾಗ, ನಾನು ಓದಿ ತಿಳಿದುಕೊಂಡಿರತಕ್ಕ ವಿಚಾರ. There was a Commission called Royal Commission on Agriculture appointed by the then

Government of Britan. ಅವರು ಒಂದು ಕಮಿಷನ್ ಅಪಾಯಿಂಟ್ ಮಾಡಿದರು. ಏಕೆಂದರೆ, ಪದೇಪದೇ ಕ್ಷಾಮಡಾಮರಗಳು ಈ ರಾಷ್ಟ್ರಕ್ಕೆ ಬರುವುದರಿಂದ, ಆಹಾರದ ಉತ್ಪಾದನೆ ಕಡಿಮೆಯಾಗುವುದರಿಂದ ಯಾವುದೇ ಆಳ್ವಿಕೆ ಇದ್ದರೂ, ರಾಷ್ಟ್ರದ ಜನತೆಯನ್ನು ಸಂಪೂರ್ಣವಾಗಿ ನಿಭಾಯಿಸುವ ವಿಚಾರದಲ್ಲಿ ಪ್ರತಿವರ್ಷವೂ ವಿಫಲರಾಗಿದ್ದರು. ಅದಕ್ಕಾಗಿ, They wanted to go deep into the matter on all aspects of this subject called Agriculture.

ಅವರು ಈ ಒಂದು ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರ್ ಮಾಡಿದ ಮೇಲೆ, ಅದರ ಶಿಫಾರಸ್ಸಿನುಗುಣವಾಗಿ ಕೆಲವು ತೀರ್ಮಾನಗಳನ್ನು ಮಾಡತಕ್ಕ ಪ್ರಯತ್ನವನ್ನು ಆಗಿನ ಆಂಗ್ಲ ಸರ್ಕಾರ ಮಾಡದರೂ ಕೂಡ ಸಾಕಷ್ಟು ಪ್ರಗತಿ ಬರಲಿಲ್ಲವೆಂದು ಕೇಳಿದ ಮೇಲೆ ಇವತ್ತಿನವರೆಗೂ ಕೂಡ ರಾಷ್ಟ್ರದ ಕೃಷಿ ವಿಚಾರದಲ್ಲಿ ಒಂದು ನೀತಿಯನ್ನು ಪ್ರಕಟ ಮಾಡಿ, ಆ ನೀತಿಯ ಅರ್ಥದ ವ್ಯಾಪ್ತಿಯಲ್ಲಿ ಏನೇನು ಇರಬೇಕೆಂದು ಪ್ರಕಟ ಮಾಡದೇ ಇರುವುದು ಇವತ್ತಿನ ದುರಾದೃಷ್ಟಕರ ಪರಿಸ್ಥಿತಿಗೆ ಕಾರಣ ಎನ್ನತಕ್ಕಂತಾದ್ದನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಉದಾಹರಣೆ ಕೈಗಾರಿಕೆಯನ್ನೇ ತೆಗೆದುಕೊಳ್ಳೋಣ. Parliament adopted a Resolution on Industrial Policy in both the Houses of Parliament in 1956. ಇದನ್ನು ಮಾಡಿದ ಮೇಲೆ ಹೇಗೆ ಕೈಗಾರಿಕೆಗಳು, ಎಲ್ಲಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಣ್ಣ, ಮಧ್ಯಮ, ಅತಿ ಸಣ್ಣ, ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನೊಳಗೊಂಡಂತೆ, ನಮ್ಮ ರಾಷ್ಟ್ರದ ಕೈಗಾರಿಕೆಗಳನ್ನು ಬೆಳವಣಿಗೆ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಒಂದು ನೀತಿಯನ್ನು ಹಾಕಿರತಕ್ಕ ವಿಚಾರದಲ್ಲಿ, ಬ್ಯಾಂಕುಗಳ ಸಹಾಯ ಮತ್ತು ಬೇರೆ ಬೇರೆ ಸೆಕ್ಟಾರ್‌ಗಳನ್ನು ಅನುಸರಿಸಿ, ಒಂದು ಸ್ಪಷ್ಟೀಕರಣವನ್ನು ಪಡೆದರು, ನಂತರ ಒಂದು ನೀತಿಯನ್ನು ಪ್ರಕಟಣೆ ಮಾಡಿದರು. ಅದಕ್ಕಾಗಿ ಕೈಗಾರಿಕೆ ವ್ಯಾಪಕವಾಗಿ ಬೆಳೆಯಿತು ಎನ್ನುವುದನ್ನು ಮರೆಯುವ ಹಾಗಿಲ್ಲ. ಇತ್ತೀಚಿನ ವರ್ಷಗಳಲ್ಲಿ ಒಂದು ಒತ್ತಡ ರಾಷ್ಟ್ರಮಟ್ಟದಲ್ಲಿ ಬರುತ್ತಿದೆ. ಆದ್ದರಿಂದ ಕೂಡಲೇ ಕೃಷಿ ನೀತಿಯನ್ನು ಪಾರ್ಲಿಮೆಂಟ್‌ನಲ್ಲಿ ಅಡಾಪ್ಟ್ ಮಾಡಬೇಕು, ಪ್ರಕಟಣೆ ಮೊಡಬೇಕು. ಈ ಅರ್ಥದ ವ್ಯಾಪ್ತಿಯಲ್ಲಿ ರಾಷ್ಟ್ರದ, ರಾಜ್ಯದ ಕೃಷಿಕ ರೈತರನ್ನು ತರಬೇಕು. ಎಲ್ಲೆಲ್ಲಿ ತಪ್ಪು ಮಾಡಿದ್ದೇವೆಂಬುದನ್ನು ಗುರುತಿಸಿ, ಲೂಪ್‌ಹೋಲ್ಸನ್ನು ಕಂಡುಹಿಡಿಯಬೇಕು ಮತ್ತು ಕೃಷಿ ನೀತಿಗೆ ಸಂಪೂರ್ಣವಾಗಿ ಬೆಂಬಲ ಕೊಡತಕ್ಕ ವಿಚಾರವನ್ನು ಇಟ್ಟುಕೊಂಡಿದ್ದಾರೆ. ನಾನು ಕೇಂದ್ರಸರ್ಕಾರಕ್ಕೆ ಈ ವಿಚಾರದಲ್ಲಿ ಅಭಿನಂದಿಸುತ್ತೇನೆ. ನಿಜ ಹೇಳಬೇಕೆಂದರೆ, Policy on agriculture ಏನಾದರೂ ಮಾಡಿ, ಮಾಡಲೇಬೇಕೆಂದು ಹೆಚ್ಚಿನ ಗಮನವನ್ನು ಇಟ್ಟುಕೊಂಡಿರುವುದರಿಂದ, ನಾವು ಒಂದು ನೀತಿಯನ್ನು ಪ್ರಕಟ ಮಾಡತಕ್ಕ ವಿಚಾರದಲ್ಲಿ ಕಾರಣಗಳು, ಕಾನೂನುಗಳು ಏನೇನು ಎನ್ನುವುದು ಬೇಕಾದಷ್ಟು ಇದೆ. ಕಳೆದ 7ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು 7,500 ಕೋಟಿ ಬೆಲೆ ಬಾಳುವಷ್ಟು ಅಗ್ರಿಕಲ್ಚರ್ ಕಮಾಡಿಟೀಸ್ ಪ್ರಕ್ಯೂರ್ ಮಾಡಿದ್ದೇವೆ. ಬೇರೆ ಬೇರೆ ರೂಪದಲ್ಲಿ, ಅದು ಉಪಕರಣ ಬರಬಹುದು ಮತ್ತೊಂದು ಇರಬಹುದು, ಎಲ್ಲವನ್ನೂ ಕೂಡ ಮಾಡಿಕೊಂಡಿದ್ದೇವೆ. ಬೇರೆ ಬೇರೆ ರೂಪದಲ್ಲಿ ಉಪಕರಣ ಇರಬಹುದು ಮತ್ತೊಂದಿರಬಹುದು, ಅದರಲ್ಲಿ ನಾವು ಸ್ವಾವಲಂಬನೆ ಮಾಡಬೇಕು. ಸ್ವಾವಲಂಬನೆ ಆಗಿದ್ದರೆ 7ನೇ ಪಂಚವಾರ್ಷಿಕ ಯೋಜನೆಯಲ್ಲಿ 7500 ಕೋಟಿ ರೂಪಾಯಿ ಅಲ್ಲದಿದ್ದರೂ, ಅದರಲ್ಲಿ ಮುಕ್ಕಾಲು ವಾಸಿ ಹಣವನ್ನು, ಫಾರಿನ್ ಎಕ್ಸ್‌ಚೇಂಜನ ಮೂಲಕ ಉಳಿಸಬಹುದಾಗಿತ್ತು ಎಂಬುದನ್ನು ಮರೆಯುವುದಕ್ಕೆ ಸಾಧ್ಯ ಇಲ್ಲ. ನಾವು ಅದಕ್ಕಾಗಿ ಈ ಸಂದರ್ಭದಲ್ಲಿ ಒತ್ತಡ ಮಾಡಬೇಕಾಗಿದೆ. ರಾಜ್ಯ ಸರಕಾರದ ವತಿಯಿಂದ, ಈ ಸದನದ ವತಿಯಿಂದ, ಈ ಸದನದ ಎಲ್ಲಾ ಮಾನ್ಯ ಸದಸ್ಯರಿಗೆ ನಾನು ತಮ್ಮ ಮುಖೇನ ವಿನಂತಿ ಮಾಡುತ್ತೇನೆ. ಹೊಸ ಕೃಷಿ ನೀತಿಯನ್ನು ಪ್ರಕಟ ಮಾಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯ ಮಾಡೋಣ. ಕೃಷಿ ನೀತಿಯನ್ನು ಪ್ರಕಟ ಮಾಡತಕ್ಕ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲೂ ಕೂಡಲೇ ಒತ್ತಡ ತರಬೇಕು. ಒಂದು ನಿರ್ಣಯದ ಮುಖಾಂತರ ಒತ್ತಾಯ ತಂದು ಪ್ರಕಟ ಮಾಡಬೇಕು, ಕೂಡಲೇ ಕಾರ್ಯಕ್ರಮ ಹಾಕಬೇಕೆಂಬ ಒತ್ತಡವನ್ನು ತರುತ್ತೇನೆ. ನಮ್ಮ ರಾಷ್ಟ್ರದಲ್ಲಿ ಅಗ್ರೇರಿಯನ್ ರಿಫಾರ್ಮ್ಸ್ ಆಗಬೇಕು. ಎಲ್ಲಾ ರಾಜ್ಯಗಳಲ್ಲಿ ಬೇರೆ ಬೇರೆ ರೂಪದಲ್ಲಿ ಆಗಿದೆ. ಗ್ರೋಮೋರ್ ಫುಡ್ ಮುಂತಾಗಿ ಬೇಕಾದಷ್ಟು ಮಾಡಿರುವುದನ್ನು ನಾವು ನೋಡಿದ್ದೇವೆ. 1946ರಲ್ಲೇ settlement of agriculture food policy in India ಅದರ ಬಗ್ಗೆ ಆಗಿದೆ ಎಂಬ ವಿಚಾರ ಕೂಡ ನಾವುಗಮನದಲ್ಲಿಟ್ಟು ಕೊಳ್ಳಬೇಕು. ಜಮೀನುದಾರಿಕೆ ರದ್ದು, ಜಾಗಿರುದಾರಿಕೆ ರದ್ದು, ಹೀಗೆ ಹಲವಾರು ಲ್ಯಾಂಡ್ ರಿಫಾರ್ಮ್ಸ್ ಬಂದಮೇಲೆ, ಬಡ ಜನತೆಗೆ ನಮ್ಮ ಸಮಾಜದಲ್ಲಿ ಏನು ಲ್ಯಾಂಡ್ ಬಂದಿದೆ ಇದನ್ನುಸರಕಾರ productivity culminating in production ಅಲ್ಲಿಗೆ ಹೋಗಿ ನಿಲ್ಲಬೇಕಾಗುತ್ತದೆ. ಏತಕ್ಕೆಂದರೆ ನಾವು ಉತ್ಪಾದನೆ ಮಾಡುತ್ತಾ ಮಾಡುತ್ತಾ ಹೋಗಿ ಬಿಟ್ಟಿದ್ದೇವೆ. ಇಷ್ಟಾದರೂ ಕೂಡಾ ಸಮಾಜದಲ್ಲಿರತಕ್ಕ ಕಡುಬಡವರು, ಬಡತನದ ರೇಖೆಯ ಕೆಳಗಿರತಕ್ಕಂಥ ಜನ ಮತ್ತು ಬಡವರ್ಗದ ಅರ್ಥದ ವ್ಯಾಪ್ತಿಯಲ್ಲಿ ಬರತಕ್ಕಂಥ ಜನಕ್ಕೆ ಒಪ್ಪೊತ್ತಿನ ಊಟ ಇಲ್ಲ ಎಂಬುದನ್ನು ನಾವು ವಿಶೇಷವಾಗಿ ನೋಡಬೇಕು. ಒಂದುಕಡೆ ನಾವು ಆಹಾರ ಉತ್ಪಾದನೆ ಜಾಸ್ತಿ ಮಾಡಿದ್ದೇವ ಎಂಬ ಮಾತನ್ನು ಆಡಿದ್ದೇವೆ. ಆ ಉತ್ಪಾದನೆಯನ್ನು ಸಮಾಜದಲ್ಲಿರತಕ್ಕಂಥ ಕಡು ಬಡವ ಏನಿದ್ದಾನೆ ಅವನಿಗೆ ಹೋಗಿ ತಲುಪಿಸಿದ್ದೇವೆಯೋ ಎಂಬ ಪ್ರಶ್ನೆ ಇದೆ. ಎರಡು ಹೊತ್ತಿನ ಊಟಕ್ಕೂ, ರೊಟ್ಟಿಗೆ, ರಾಗಿ ಹಿಟ್ಟಿಗೆ ಸಾಧ್ಯತೆ ಮಾಡಿಕೊಟ್ಟಿದ್ದೇವೆಯೇ, ಜವಾಬ್ದಾರಿ ವಹಿಸಿಕೊಂಡಿದ್ದೇವೆಯೇ ಎಂಬ ವಿಚಾರ ಇದೆ. ಅದು ಫುಡ್ ಅಂಡ್ ಸಿವಿಲ್ ಸಪ್ಲೈಸ್‌ಗೆ ಬರುತ್ತದೆ ಎಂದು ತಾವು ಹೇಳಬಹುದು. ಅದಕ್ಕಾಗಿ ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆಹಾರ ಸ್ವಾವಲಂಬನೆ ಹಾಗೂ ಬೆಳೆ ಇವುಗಳ ಬಗ್ಗೆ ನನ್ನ ಇಲಾಖೆಗೆ ಸಂಬಂಧ ಪಟ್ಟ ಹಾಗೆ ಹೇಳುವುದಾದರೆ I will have to confine myself to the productivity and production. ಅಲ್ಲಿಗೆ ಹೋಗಿ ನಿಂತು ಬಿಡುತ್ತೇನೆ. ನಮ್ಮ ಹತ್ತಿರ ಇರತಕ್ಕಂಥ ಭೂಮಿ ಯಾವುದು ಇದೆ ಅಂತಹದಕ್ಕೆ there are ten agro-climatic zones ಹವಾಮಾನಕ್ಕೆ ಭೂ ಗುಣಕ್ಕೆ ಸಂಬಂಧಪಟ್ಟ ಹಾಗೆ ಏನು ಬೆಳೆ ಬೆಳೆಯಬಹುದು ಹಿಂದೆ ಹೇಗೆ ಬೆಳೆಯುತ್ತಿದ್ದರು, 1989-90 ರಲ್ಲಿ ಏನು ಟಾರ್ಜೆಟ್ ಇತ್ತು, 1990-91 ರಲ್ಲಿ ಏನು ಟಾರ್ಜೆಟ್ ಇದೆ, ಗೌರ್ನ್‌ಮೆಂಟ್ ಆಫ್ ಇಂಡಿಯಾದ ಪ್ಲಾನಿಂಗ್ ಕಮಿಷನ್‌ನವರು ಏನು ಟಾರ್ಜೆಟ್ ಫಿಕ್ಸ್ ಮಾಡುತ್ತಾರೆ, Now the Planning paper has not yet been approved by the Government of India. Approach paper to seventh Five Year Plan was presented before the National Development Council and the same has now been approved. ಮುಂದಿನ ತಿಂಗಳು 4-5ನೇ ತಾರೀಖಿಗೆ ಬೆಂಗಳೂರಿನಲ್ಲಿ ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್ ಒಂದು ದಿವಸ ಇನ್ನೊಂದು ದಿವಸ ಎನ್.ಡಿ.ಸಿ. ಸೇರುತ್ತದೆ ಎಂದು ಗೊತ್ತಾಗಿದೆ. ಈ ರೀತಿ ಸೇರಿದಾಗ ಮತ್ತೆ ಏನಾದರೂ ಫೈವ್ ಇಯರ್ ಪ್ಲಾನ್ ಸಬ್ಜೆಕ್ಟ್ ಇಟ್ಟುಕೊಂಡಿದ್ದಾರೋ ಏನೋ ಗೊತ್ತಿಲ್ಲ. Approach paper to 8th Five Year Plan ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಏನು ಅಕ್ಸೆಪ್ಟ್ ಮಾಡಿದೆ ಎನ್.ಡಿ.ಸಿ. ಇದರ ಮೇಲೆ ಗೌರ್ನ್‌ಮೆಂಟ್ ಆಫ್ ಇಂಡಿಯಾ ಯಾವ ರೀತಿ ತೀರ್ಮಾನ ಮಾಡುತ್ತದೆ. The total outlays under the coming 8th Five Year Plan period constitute all income allocations of priority sector, second sector and third sector. ಎಷ್ಟು ಏನು, ಯಾವ ಯಾವ ಬಾಬಿಗೆ ಏನೇನು ಎಷ್ಟೆಷ್ಟು ಅಲೋಕೇಷನ್ ಇದೆ, ಪ್ರಿಯಾರಿಟಿ ಸೆಕ್ಟರ್ ಯಾವುದು, ಸೆಕೆಂಡ್ ಸೆಕ್ಟರ್ ಯಾವುದು, ಥರ್ಡ್ ಸೆಕ್ಟರ್ ಯಾವುದು ಎಂದು ತಿಳಿಸಬೇಕಾಗಿರುವಂತಹ ಸಂದರ್ಭದಲ್ಲಿ, ನಾನು ವಿವರಗಳಿಗೆ ಹೋಗುವುದಿಲ್ಲ. ಅಂತಿಮ ಚಿತ್ರ ಇನ್ನೂ ಸಿಕ್ಕಲ್ಲ. ಆದರೆ ಇಷ್ಟು ಮಾತ್ರ ನಿಜ.

(ಶ್ರೀ ಜಿ.ಎಸ್. ಆಚಾರ್ ಅವರು ಅಧ್ಯಕ್ಷರ ಪೀಠದಲ್ಲಿದ್ದರು)

ಈಗ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಒತ್ತು ಕೃಷಿಗೆ ಬರತಕ್ಕಂಥ ಸೂಚನೆ, ಚಿಹ್ನೆಗಳು, ಲಕ್ಷಣಗಳು ಎದ್ದು ಕಾಣುತ್ತಿವೆ. ಎದ್ದು ಕಾಣತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಈಗ ಇರತಕ್ಕಂಥ 10 ಅಗ್ರೋ ಕ್ಲೈಮೆಟ್ಸ್ ಕಂಡೀಷನ್ಸ್ ಅಥವಾ ಜೋನ್ಸ್ ಏನೇನು ಇವೆ ಅದರಿಂದ ನಾವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆಗಳನ್ನು ಮಾಡಿಕೊಳ್ಳಲೇಬೇಕು. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಎಷ್ಟೇ ಪ್ರಯತ್ನ ಮಾಡಿದರೂ ಕೂಡ, ಅಂಡರ್ ಗ್ರೌಂಡ್ ವಾಟರ್ ಅದರಲ್ಲಿ

ಬೋರ್‌ವೆಲ್ಸ್ ಸೇರಿಸಿ ಮೈನರ್ ಇರಿಗೇಶನ್ ಅದು ಫ್ಲೋ ಇರಿಗೇಶನ್ ಸೇರಿ ಟ್ಯಾಂಕ್ಸ್ ಎಲ್ಲಾ ಇದರಲ್ಲಿ ಬರುತ್ತದೆ ಮೈನರ್ ಇರಿಗೇಶನ್ ಮೇಜರ್ ಇರಿಗೇಶನ್ ನಾವೇನು ಡ್ಯಾಮ್ಸ್‌ಕಟ್ಟಿದ್ದೇವೆ ಆ ಡ್ಯಾಮ್ಸ್ ಸೇರಿಸಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ಕೆಲವು ಕೃಷ್ಣಮೇಲ್ದಂಡೆ ಯೋಜನೆಯಲ್ಲಿ ಬರತಕ್ಕಂಥ ಕೆಲವು ಮಲಪ್ರಭಾ ಘಟಪ್ರಭಾ ತುಂಗಾ, ಭದ್ರಾ, ತುಂಗಭದ್ರ, ಇವು ಎಲ್ಲಾ ಸೇರಿ ಮೇಜರ್ ನೀರಾವರಿ ಯೋಜನೆಗಳು ಅಲ್ಲದೆ ನಮ್ಮ ಬೇರೆ-ಬೇರೆ ಸಣ್ಣ ಪುಟ್ಟ ಇವನ್ ಕೆಲವು ಫಿಕ್ ಅಪ್ಸ್ ಇದರಲ್ಲಿ ಬರುತ್ತವೆ ಎಷ್ಟು ಮಾಡಿದರೂ ಇಲ್ಲಿ ಒಟ್ಟು 20 ಪರ್ಸೆಂಟ್ 21 ಪಸೆಂಟ್ 22 ಪರ್ಸೆಂಟ್‌ಗೆ ಮೇಲೆ ನಾವು ಇರಿಗೇಶನ್ ಮಾಡುವುದಕ್ಕೆ ಆಗಿಲ್ಲ. ಇದಕ್ಕೆ ಕಾರಣವೇನು? ಕಾರಣ ಇದೆ. ಭದ್ರಾ ಪ್ರಾಜೆಕ್ಟ್‌ನ್ನು ನಾವು ಕಟ್ಟಿದ್ದೇವೆ. ನೀರು ಭದ್ರಾ ಡ್ಯಾಮ್‌ನಿಂದ ದಾವಣಗೆರೆ ಏರಿಯಾ ಭಾಗಕ್ಕೆ ಹೋಗುತ್ತವೆ. ಈ ಡ್ಯಾಮ್‌ಗಳು ನೀರು ಎಷ್ಟು ವರ್ಷ ತುಂಬಿದೆ? ಎನ್ನತಕ್ಕಂಥಾದ್ದು ಒಂದು ಪ್ರಶ್ನೆ.ಆ ವೇಳೆಯಲ್ಲಿ ಮಳೆ ಬರಬೇಕಲ್ಲ. ವರುಣ ದೇವರು ಕಣ್ಣುಬಿಡಬೇಕು ಆಗಲೇ ನಮ್ಮ ಜಲಾಶಯಗಳು ತುಂಬಬೇಕು ಬರೀ ನೀರಾವರಿಯನ್ನು ನನ್ನ ದೃಷ್ಟಿಯಲ್ಲಿ ಇಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ಇವತ್ತು ನಮ್ಮ ಪವರ್ ಜನರೇಶನ್ ಆಗಿರಬಹುದು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಿ ನಮ್ಮ ಕಾಳೀ ಪ್ರಾಜೆಕ್ಟ್ ಇರಬಹುದು ನಾವು ಇಲ್ಲಿ ಡ್ಯಾಮ್‌ಗಳನ್ನು ಕಟ್ಟಿದ್ದೇವೆ. ನಾವು ಡ್ಯಾಮ್‌ಗಳನ್ನು ಕಟ್ಟಿದ ಮೇಲೆ 4 ವರ್ಷ 6 ವರ್ಷ 8 ವರ್ಷ ತುಂಬಿದ್ದು ಇಲ್ಲ. ನಾವು ಡ್ಯಾಮ್‌ಗಳನ್ನು ಕಟ್ಟಿರತಕ್ಕಂಥ 30 ವರ್ಷಗಳಲ್ಲಿ 3 ವರ್ಷ 5 ವರ್ಷ 6 ವರ್ಷ ತುಂಬಿಕೊಂಡಿದ್ದರೆ ಸಾಕಿತ್ತು ನಮ್ಮ ಪರಿಸ್ಥಿತಿ ಚೆನ್ನಾಗಿರುತ್ತಿತ್ತು. ಅದು ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿರಬಹುದು ನೀರಾವರಿಯಿಂದ ನಮ್ಮ ಆಹಾರ ಉತ್ಪಾದನೆ ಇರಬಹುದು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಆಗುತ್ತಿತ್ತು. ಆದರೆ ನಮ್ಮ ಜಲಾಶಯಗಳು ತುಂಬಿದೆ ನಾವು ಈ ಕ್ಷೇತ್ರಗಳಲ್ಲಿ ಪೆಟ್ಟು ತಿನ್ನುತ್ತಿದ್ದೇವೆ. ಆದರೆ ನಮ್ಮಂತಹ ರಾಷ್ಟ್ರಗಳಲ್ಲಿ ನಮ್ಮಂತಹ ರಾಜ್ಯಗಳಲ್ಲಿ ಭೂಲಕ್ಷಣಗಳ ಬಗ್ಗೆ ನಾವು ವಿಚಾರ ಮಾಡಿದರೆ, I think we are having one of the best soils ಎನ್ನತಕ್ಕಂಥ ಮಾತನ್ನು ನಾನು ಆಡಲೇಬೇಕು. ಒಳ್ಳೆಯ ಭೂ ಲಕ್ಷಣಗಳು ನಮ್ಮಲ್ಲಿ ಇವೆ. ನೀರಾವರಿ ಕ್ಷೇತ್ರ ಪ್ರಮಾಣದಿಂದ ಕಡಿಮೆ ಆಯಿತು. ಆದರೂ ಕೂಡ ನಿಜ ತಾವು ಸಹ ತಮ್ಮ ಭಾಷಣದಲ್ಲಿ ಹೇಳಿದಿರಿ. ಅನೇಕ ಜನ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇವತ್ತು ನಮ್ಮ 4ಭಾಗಗಳಲ್ಲಿ 3ಭಾಗ ಒಣ ಬೇಸಾಯಕ್ಕೆ ಸಂಬಂಧ ಪಟ್ಟಿರತಕ್ಕಂಥಾದ್ದು. ದಿ ರೈನ್ ವೆಟ್ ಲ್ಯಾಂಡ್. ಅದಕ್ಕೆ ನಾವು ಮಳೆ ಬಂದರೆ ಇವನ್ ನಮ್ಮ ಕಡೆ ನಮ್ಮ ಭಾಗಗಳನ್ನು ಸೇರಿಸಿ ವೆಸ್ಟ್ರನ್ ಘಾಟ್ಸ್ ಸುಮಾರಾಗಿ ಕೊಡಗು ದಕ್ಷಿಣ ಕನ್ನಡ ಜಿಲ್ಲೆ ಸಕಲೇಶಪುರ ಭಾಗಗಳು ಮತ್ತು ಮಾನ್ಯ ಸದಸ್ಯರಾದ ಗುರುದೇವ್‌ರವರ ಕ್ಷೇತ್ರಗಳು ಕೆಲವು ಸೇರಿ ಹಾಸನ ಚಿಕ್ಕಮಗಳೂರು ತರೀಕೆರೆ, ಬೀರೂರು, ಕಡೂರು ತಾಲ್ಲೂಕುಗಳು ಕೆಲವುಸೇರಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳು ಕೆಲವು ಭಾಗಗಳು ಭದ್ರಾವತಿ ತಾಲ್ಲೂಕು ಬಿಟ್ಟು, ಕಾರವಾರ ಜಿಲ್ಲೆಯ ಮುಂಡಗೋಡು ಸ್ವಲ್ಪ ಭಾಗ ಬಿಟ್ಟು ಹಳಿಯಾರ ತಾಲ್ಲೂಕು ಸ್ವಲ್ಪ ಭಾಗ ಬಿಟ್ಟು ಉಳಿದಿರತಕ್ಕಂಥ ಎಲ್ಲಾ ಭಾಗಗಳು ಬೆಳಗಾಂ ಜಿಲ್ಲೆ ಸೇರಿ ಮಹಾರಾಷ್ಟ್ರಕ್ಕೆ ಹಾದು ಹೊರಟು ಹೋಗುತ್ತದೆ. ಮಾನ್ಯ ಅಧ್ಯಕ್ಷರೇ ನನಗನ್ನಿಸುತ್ತದೆ. ಯಾವ ಹತ್ತಿಯನ್ನು ನಾವು ಬರೀ ಬಯಲುಸೀಮೆ ಪ್ರದೇಶದಲ್ಲಿ ನೋಡುತ್ತಿದ್ದೆವು ಅದು ಡಿ.ಸಿ.ಎಚ್ ಆಗಲಿ ಲಕ್ಷ್ಮಿ ಹತ್ತಿ ಆಗಲಿ ಅದು ಯಾವುದೇ ಇರಲಿ ನಾವು ಹತ್ತಿಯನ್ನು ಬಯಲುಸೀಮೆ ಪ್ರದೇಶದಲ್ಲಿ ನೋಡುತ್ತಿದ್ದೆವು: ಅದು ಈಗ ನಮ್ಮ ಮಲೆನಾಡು ಪ್ರದೇಶದಲ್ಲಿ ಬೆಳೆಯುತ್ತಿದ್ದೇವೆ. ನಮಗೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ನಾವು ಮೊದಲು ಹತ್ತಿಯನ್ನು ರಾಣೆಬೆನ್ನೂರು ಹಾವೇರಿ ಆ ಕಡೆ ರಸ್ತೆಗಳಲ್ಲಿ ಹೋಗುತ್ತಿದ್ದಾಗ ಹತ್ತಿ ಕಮಿಷನ್ ಏಜೆಂಟ್ಸ್ ಇರತಕ್ಕಂಥಾದ್ದನ್ನು ನೋಡಿದರೆ ಕಾಣುತ್ತಿತ್ತು. ಆದರೆ ಈಗ ಹತ್ತಿಯನ್ನು ನನ್ನ ಸ್ವಂತ ತಾಲ್ಲೂಕು ಆದ ಸೊರಬದಲ್ಲಿ ಲಾರಿ ಲೋಡ್ ಗಟ್ಟಲೆ ಬೆಳೆದು ಸುಮಾರು 3 ಕೋಟಿ ರೂಪಾಯಿಗಳಷ್ಟು ಹತ್ತಿಯನ್ನು ನಮ್ಮ ಒಂದೇ ಒಂದು ತಾಲ್ಲೂಕಿನಲ್ಲಿ ಮಾರಾಟ ಮಾಡಿದ್ದಾರೆ. ಒಂದು ಕ್ವಿಂಟಾಲ್‌ಗೆ ಸುಮಾರು 1200 ರೂಪಾಯಿಗಳಿಂದ 1800 ರೂಪಾಯಿಗಳವರೆಗೆ [illegible] [illegible] ಇತ್ತು. ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ.

ಆದರೆ ಈ ಹತ್ತಿ ಬೆಲೆ ಸಡನ್ ಆಗಿ ಬಿದ್ದು ಹೋಗಿದೆ. ನಾನು ಈ ಅಗ್ರಿಕಲ್ಚರ್ ಪ್ರೈಜ್ ಕಮಾಂಡಿಟೀಸ್ ಬಗ್ಗೆ ಆ ನಂತರ ಬರುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ಸಹ ಈ ಬಗ್ಗೆ ವಿವರವಾಗಿ ಮಾತನಾಡಿದ್ದಾರೆ. ಯಾವ ಒಂದು ಬೆಂಬಲ ಬೆಲೆ ಕೊಡಬೇಕೆಂದು ಕೇಳುತ್ತಿದ್ದಾರೆ ಅದರ ಬಗ್ಗೆ ಅವರು ಹೇಳಿದ್ದಾರೆ. ಇಲ್ಲಿ ಇರತಕ್ಕಂಥ ಪ್ರಶ್ನೆ ಇಷ್ಟೇ ನಾವು ಮಳೆ ಪ್ರಮಾಣವನ್ನು ಆದರಿಸಿ ಬೆಳೆಗಳನ್ನು ಬೆಳೆಯಬೇಕು. ಇವತ್ತು ಬೆಳೆಗಳು ಕೂಡ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹಾರಿಕೊಂಡು ಹೋಗುತ್ತಿವೆ

ಹತ್ತಿ ಈಗ ಎಲ್ಲಿಂದ ಎಲ್ಲಿಗೆ ಹೋಗಿದೆ. ನಮ್ಮ ರಾಯಚೂರು ಭಾಗದಲ್ಲಿ ಇವತ್ತು ಭತ್ತ ಬೆಳೆಯುತ್ತಿದ್ದಾರೆ. ತುಂಗ ಡ್ಯಾಮ್ ಬಂದ ಮೇಲೆ. ನಮ್ಮ ಜಯ ಭತ್ತ ಹೆವಿ ಹೀಲ್ಡ್ ವೈರೈಟಿ ಅಲ್ಲಿಗೆ ಹೋಗಿದೆ. ಅವರಿಗೆ ಆಶ್ಚರ್ಯ ನಮ್ಮ ಜಮೀನುಗಳಲ್ಲಿ ಭತ್ತ ಬೆಳೆಯುವ ಕಾಲ ಬಂತಲ್ಲ ಎಂದು ನಮ್ಮ ಜಮೀನುಗಳಲ್ಲಿ ಹತ್ತಿ ಬೆಳೆಯುವ ಕಾಲ ಬಂತಲ್ಲ ಎಂದು ನಾವು ವಿಚಾರ ಮಾಡತಕ್ಕಂಥ ಕಾಲ ಬಂದಿದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಇವತ್ತು ನಾವು ಬಂದಿದ್ದೇವೆ. ಆದಕ್ಕೆ ಮಳೆ ಪ್ರಮಾಣ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಸೀಮಿತಗೊಂಡಿಲ್ಲ. ಆ ಬಗ್ಗೆ ನಾನು ಹೇಳುತ್ತಲೂ ಇಲ್ಲ. ಇದು ಇಡೀ ರಾಷ್ಟ್ರಕ್ಕೆ, ಅಂತರರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಪರಿಣತರು ಅದೂ ಮಳೆ ಪರಿಣಿತರು ಈ ರೀತಿಯ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಳೆ ಪರಿಣಿತರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುತ್ತಿದೆ. ಅದಕ್ಕಾಗಿ ವರ್ಲ್ಡ್ ಬ್ಯಾಂಕ್ ಏಡೆಡ್ ವಾಟರ್‌ಷೆಡ್ ಪ್ರೋಗ್ರಾಂಸ್, ಜಲಾನಯನ ಪ್ರದೇಶ ಅಭಿವೃದ್ಧಿ ಮಾಡತಕ್ಕಂಥ ಕೆಲವು ಯೋಜನೆಗಳು ಬಂದಿವೆ. ಜನರಲ್ ಆಗಿ ಪೀಠಿಕೆಯ ರೂಪದಲ್ಲಿ ಇದನ್ನು ಕೊಟ್ಟರೆ ಒಳ್ಳೆಯದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಒಣ ಬೇಸಾಯಕ್ಕೆ ಅನುಕೂಲವಾಗಿರತಕ್ಕಂಥ ಕೃಷಿ ಮಾಡಬೇಕು, ಅದಕ್ಕಾಗಿ ಕಡಿಮೆ ಮಳೆ ಆದರೂ ತೇವಾಂಶವನ್ನು ಅಲ್ಲಿ ಕಾಪಾಡಬೇಕೆಂಬ ಬಗ್ಗೆ ತಾವು ವಿವರವಾಗಿ ಕನಕಪುರ ತಾಲ್ಲೂಕಿನ ಕಬ್ಬನ್ ನಾಲಾ ಪ್ರಾಜೆಕ್ಟ್‌ನ ಉದಾಹರಣೆ ಕೊಟ್ಟು ಹೇಳಿದ್ದೀರಿ. ತೇವಾಂಶ ಉಳಿಸಿಕೊಳ್ಳಬೇಕು ನೀರು, ವೇಸ್ಟ್ ಆಗದಹಾಗೆ ಅಲ್ಲಿ ಪಾಂಡ್ ಮತ್ತೊಂದು ಮಾಡಬೇಕು. ಈಗ ಮೂರು ತಿಂಗಳಲ್ಲಿ ಬೆಳೆಯುತಕ್ಕಂಥ ಮೀನುಗಳು ಬಂದಿವೆ. ಕೃಷಿಗೆ ಸಂಬಂಧ ಪಟ್ಟಹಾಗೆ, ಕೃಷಿ, ಅನಿಮಲ್ ಹಸ್ಬೆಂಡ್ರಿ, ಫಿಷರೀಸ್, ಸೆರಿಕಲ್ಚರ್, ಹಾರ್ಟಿಕಲ್ಚರ್, ಜೇನು ಸಾಕಾಣಿಕೆ, ವಾಟರ್ ಮ್ಯಾನೇಜ್‌ಮೆಂಟ್ ಇತ್ಯಾದಿ ಇತ್ಯಾದಿ ಇವೆಲ್ಲವೂ ಕೂಡ ಒಟ್ಟಿಗೆ ಹೋಗಬೇಕೆಂಬ ಭಾವನೆ ನನಗೆ ಬರುತ್ತದೆ. ಅಲ್ಲದೇ ಯಾವುದೇ ಪಕ್ಷದ ಸರಕಾರ ಇದ್ದರೂ ಅನಿವಾರ್ಯವಾಗಿ ಇವುಗಳು ಬೇರ್ಪಟ್ಟಿರುತ್ತವೆ. ಇವೆಲ್ಲವನ್ನು ಒಬ್ಬರೇ ಇಟ್ಟುಕೊಳ್ಳುವುದಕ್ಕೆ ಆಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಬೇಡಿ. ನಾನು ಹೇಳಿದೆ ಇದೊಂದು ಅನಿವಾರ್ಯವಾದ ಪ್ರಸಂಗ. ಇವತ್ತುರೈತ ಸಮುದಾಯದ ಮಧ್ಯೆ ಇದ್ದಾಗ ನಾನು ನೀರಿನ ಬಗ್ಗೆ ಒಂದು ಮಾತನ್ನು ಹೇಳುತ್ತಿರುತ್ತೇನೆ. ನಿಮ್ಮ ಜೋಬಿನಲ್ಲಿ ಪಾಕೆಟ್‌ನಲ್ಲಿ ನೂರು ರೂಪಾಯಿ ಇದ್ದರೆ ಎಷ್ಟು ಖುಷಿಯಾಗುತ್ತದೆಯೋ, ಅದೇ ರೀತಿ ನೀರುನಿಮ್ಮಕೆರೆಯಲ್ಲಿ, ಕುಂಟೆಯಲ್ಲಿ ಬಾವಿಯಲ್ಲಿ ಹಾಳಾಗದ ಹಾಗೆ ನೋಡಿಕೊಂಡುಬಿಟ್ಟರೆ, ಭೂಮಿಗೆ ನೀರನ್ನು ಫ್ಲೋ ಇರಿಗೇಷನ್ ಮುಖಾಂತರ ಬಿಟ್ಟಾಗ ಅದು ವೇಸ್ಟ್ ಆಗದ ಹಾಗೆ ನೋಡಿಕೊಂಡು ಬಿಟ್ಟರೆ ಅಷ್ಟೇ ಖುಷಿ ಆಗುತ್ತದೆ. ಅಷ್ಟೇ ರೇಟ್ ನೀರಿಗೆ ಇರುತ್ತದೆ, ಇದರ ಬಗ್ಗೆ ಕಾಳಜಿ ವಹಿಸಬೇಕು ಎಂಬ ಮಾತನ್ನು ಪದೇ ಪದೇ ನಾನು ಹೇಳುತ್ತಿರುತ್ತೇನೆ. ಹಿಂದೆ ನಾವು ನೋಡುತ್ತಿದ್ದೆವು. ಕೆರೆಯ ತೂಬನ್ನು ತೆಗೆದುಬಿಟ್ಟರೆ, ಅದು ಹೋಗುತ್ತಲೇ ಇರುತ್ತಿತ್ತು. ರೈತ ಕೆರೆಯ ತೂಬನ್ನು ತೆಗೆದುಬಿಟ್ಟು, ಅರ್ಧ ಬೀಡಿ ಹಚ್ಚಿಕೊಂಡು ಕುಳಿತುಬಿಡುವುದು, ಬೀಡಿ ಸೇದುತ್ತಲೇ ಇರುತ್ತಾನೆ, ನೀರು ಹೊಲ ದಾಟಿ ಹೋಗುತ್ತಲೇ ಇರುತ್ತದೆ. ಅವನು ತೂಕಡಿಸಿಕೊಂಡು, ಎಲ್ಲೆಲ್ಲೋ ಮಾತುಕತೆಗಳು, ಇವನ ಬಡತನ ಬಗೆಹರಿಯುವ ಹಾಗೆ ಇಲ್ಲ, ಇವನ ಮಾತುಗಳು ಮುಗಿಯುವ ಹಾಗೆ ಇಲ್ಲ, ಒಂದಾದ ಮೇಲೊಂದು ಬೀಡಿಗಳು ಇವನ ಬಾಯಿಗೆ ಬರುತ್ತಲೇ ಇರುತ್ತವೆ, ಕಾಸ್ಟ್ಲಿಯಾದ ನೀರು ಮಾತ್ರ ಎಲ್ಲಾ ಹಾಳಾಗಿ ಹೋಗುತ್ತಿರುತ್ತದೆ. ವೇಸ್ಟ್ ಆಗಿ ಹೋಗುತ್ತದೆ. ಒಂದು ಸಂತೋಷದ ವಿಚಾರ ಇದೆ. ನಿಜ ಹೇಳಬೇಕೆಂದರೆ ಇತ್ತೀಚಿನ ವರ್ಷಗಳಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ತಜ್ಞರು ಏನಿದ್ದಾರೆ ಅವರು ಒಳ್ಳೆಯ ಕೆಲಸ

ಮಾಡುತ್ತಿದ್ದಾರೆ. ನಾನು ಅವರ ಹ್ಯಾಂಡ್ಸ್ ಅಪ್ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಇರಲಿ, ನಮ್ಮ ರಾಷ್ಟ್ರದಲ್ಲಿ ಇರಲಿ, ಮತ್ತೊಂದು ರಾಷ್ಟ್ರದಲ್ಲೇ ಇರಲಿ, ನೀರಿನ ವಿಚಾರದಲ್ಲಿ ತಜ್ಞರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಅಮೇರಿಕಾ ದೇಶದ ಟೆನಿಸಿ ಸ್ಟೇಟ್‌ನಲ್ಲಿ ಡ್ರಿಪ್ ಇರಿಗೇಷನ್ ಬಂದಿದೆ. ಈ ರೀತಿಯು ಲೇಟೆಸ್ಟ್ ಇರಿಗೇಷನ್ ಮೆಥಡ್‌ಗಳು ಬಂದಿವೆ. ಮೊದಲು ಏನಿತ್ತು ಎಂದರೆ ಸುಮ್ಮನೆ ಡ್ಯಾಮ್ ತೂಬು ಎತ್ತುವುದು, ಎಷ್ಟೋ ನೀರು ವೇಸ್ಟ್ ಆಗಿ ಹೋಗುತ್ತಿತ್ತು. ತುಂಗಭದ್ರಾ ಡ್ಯಾಮ್‌ನಲ್ಲೂ ನೀರು ವೇಸ್ಟ್ ಆಗಿ ಹೋಗುತ್ತಿದೆ. ಅದು ಗಮನಕ್ಕೇ ಬರುವುದಿಲ್ಲ. ಆ ನೀರು ಎಲ್ಲಿ ಹೋಗುತ್ತದೆಯೋ ಗೊತ್ತಿಲ್ಲ. ಪ್ರಾಪರ್ ಮ್ಯಾನೇಜ್‌ಮೆಂಟ್ ಕೂಡಾ ಇರುವುದಿಲ್ಲ. ನೀರಿನ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕರ್ನಾಟಕ ರಾಜ್ಯದ ರೈತರಿಗೆ ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿದೆ. ನಾವು ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್ ಸೇರಿ ಆ ವ್ಯವಸ್ಥೆ ಮಾಡುತ್ತೇವೆ. ನಾವೆಲ್ಲಾ ಸಿಸ್ಟರ್ ಡಿಪಾಟ್‌ಮೆಂಟ್ಸ್ ಒಟ್ಟಿಗೆ ಸೇರಿಕೊಂಡು ಮಾಡತಕ್ಕಂಥ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇವೆ. ತಮ್ಮ ಮುಖಾಂತರ ಕರ್ನಾಟಕ ರಾಜ್ಯದ ರೈತರಿಗೆ, ನಾನೊಬ್ಬ ಕೃಷಿ ಸಚಿವನಾಗಿ, ಜವಾಬ್ದಾರಿಯಿಂದ ವಿನಂತಿ ಮಾಡುತ್ತೇನೆ, ನೀರಿನ ಬಗ್ಗೆ ಗಮನ ಹೆಚ್ಚಾಗಿರಲಿ, ಮಳೆಯ ಪ್ರಮಾಣ ಕಡಿಮೆ ಇದೆ, ಡ್ಯಾಮ್ ಇರಬಹುದು, ಬಾವಿ ಇರಬಹುದು, ನಿಮ್ಮ ಭೂಮಿಯಲ್ಲಿರುವ ನೀರಿರಬಹುದು, ಹೆಚ್ಚಿನ ಗಮನ ಇದರ ಬಗ್ಗೆ ವಹಿಸಬೇಕು. ಮಳೆ ಪ್ರಮಾಣ ವರ್ಷೇ ವರ್ಷೇ ಕಡಿಮೆಯಾಗುತ್ತಿದೆ ಎಲ್ಲಾ ಕಡೆ ಮಳೆಯಾಗಿದೆ, ಬಿತ್ತನೆಯಾಗಿದೆ ಎಂಬ ಮಾತನ್ನು ನಾವು ಕೇಳುತ್ತಿದ್ದೇವೆ. ಆದರೆ ನಮ್ಮ ಮೈಸೂರು ಹಾಗೂ ಇತರ ಜಿಲ್ಲೆಗಳಲ್ಲಿ ಮಳೆಯೇ ಆಗಿಲ್ಲ, ಬಿತ್ತನೆಯಾಗಿಲ್ಲ ಎಂಬ ವರ್ತಮಾನ ಬರುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಕೃಷಿಗೆ ಯೋಗ್ಯವಾಗಿರತಕ್ಕಂಥ ಜಮೀನಿನಲ್ಲಿ ಮಳೆ ಎಲ್ಲೆಲ್ಲಿ ಬಿತ್ತು, ಎಲ್ಲೆಲ್ಲಿ ಬಿತ್ತನೆಯಾಗಿದೆ, ಯಾವ ಯಾವ ದಿವಸ ಬಿತ್ತನೆಯಾಗಿದೆ ಯಾವ ಯಾವ ಬೀಜ ಬಿತ್ತನೆ ಮಾಡಿದ್ದಾರೆ, ಯಾವ ಯಾವ ಬೆಳೆ ಬಂತು, ಚೆನ್ನಾಗಿ ಇದೆಯೇ ಇಲ್ಲವೇ ಎಂಬುದನ್ನು ನೋಡಬೇಕಾದುದು ನಮ್ಮ ಜವಾಬ್ದಾರಿ, ಮುಂದೇನಾಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದು ಪರಮಾತ್ಮನಿಗೆ ಬಿಟ್ಟ ವಿಚಾರ. ಆದರೂ ಕೂಡ ಮಳೆಕಡಿಮೆ ಬಿದ್ದಾಗ ವಾಟರ್ ಮ್ಯಾನೇಜ್‌ಮೆಂಟ್, ವಾಟರ್ ಷೆಡ್ ಪ್ರೋಗ್ರಾಂ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧತೆಗಳನ್ನು ಮಾಡಿಕೊಂಡು ರೆಡಿಯಾಗಿರಬೇಕಾದುದು ನಮ್ಮ ಕೆಲಸ. ಎಷ್ಟು ಸಾಧ್ಯವೋ ಅಷ್ಟು ಶಕ್ತಿ ಮೀರಿ ಮಾಡಬೇಕಾಗುತ್ತದೆ. ಅದರಲ್ಲಿ ಕೆಲವು ನ್ಯೂನತೆಗಳು ಕೆಲವುತಪ್ಪುಗಳು ಆಗುತ್ತದೆ. ಡ್ರೈಲ್ಯಾಂಡ್ ವ್ಯವಸಾಯದ ಮೆಥಡ್‌ನಲ್ಲಿ ನಾವು ಪ್ರಯೋಗಾತ್ಮಕವಾದ ಅನೇಕ ವಿಚಾರಗಳನ್ನು ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ನಮ್ಮ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಕೆಲವು ಎಕ್ಸ್‌ಪರ್ಟ್ಸ್ ಇದ್ದಾರೆ. I am very much proud of telling this aspect about Bangalore Agricultural University. ನಮ್ಮ ಬೆಂಗಳೂರು ಅಗ್ರಿಕಲ್ಚರಲ್ ಯೂನಿವರ್ಸಿಟಿ 1946ನೇ ಇಸವಿಯಲ್ಲಿ ಪ್ರಾರಂಭವಾಯಿತು. ನಮ್ಮ ರಾಷ್ಟ್ರದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೂಡ ಹೆಮ್ಮೆ ಪಡತಕ್ಕ ಅಗ್ರಿಕಲ್ಚರಲ್ ಯೂನಿವರ್ಸಿಟಿಗಳಲ್ಲಿ ಇದೂ ಕೂಡಾ ಒಂದು. ಧಾರವಾಡದ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ತಮ್ಮ ಸರಕಾರ ಇದ್ದಾಗ, ಮೂರು ನಾಲ್ಕು ವರ್ಷಗಳ ಹಿಂದೆ ನಾವೆಲ್ಲರೂ ಒಟ್ಟಿಗೆ ಸೇರಿ ಪ್ರಾರಂಭ ಮಾಡಿದ್ದೇವೆ. ಯೂನಿವರ್ಸಿಟಿಗಳ ಬಗ್ಗೆ ನಾನು ಅನಂತರ ಬರುತ್ತೇನೆ.

ಈಗಾಗಲೇ ತಜ್ಞರು ನೀರನ್ನು ಸದುಪಯೋಗ ಮಾಡುವ ಬಗ್ಗೆ ಹೆಚ್ಚಿನ ಗಮನಕೊಡುತ್ತಿದ್ದಾರೆ. ಮೊದಲು ಸೋಲ್ ಇರಿಗೇಷನ್ ಬಂತು, ಆದಾದಮೇಲೆ ಸ್ಪ್ರಿಂಕ್ಲರ್ ಇರಿಗೇಷನ್ ಅಂದರೆ ಚಿಲ್ಲುನೀರು ಬಂತು ಅದರಲ್ಲೂ ನೀರು ಬೆಳೆ ಇಲ್ಲದ ಕಡೆ ಅನ್ಯಾಯವಾಗಿ ಬೀಳುತ್ತದೆ ಎಂದು ಬಂತು ಈಗ ಡ್ರಿಪ್ಸ್ ಇರಿಗೇಷನ್ ಇದೆಲ್ಲ ಹಾರ್ಟಿಕಲ್ಚರ್ ಪರ್ಪಸ್‌ದು. ಇಸ್ರೇಲ್ ದೇಶದಲ್ಲಿ ಇದು ಜಾಸ್ತಿ ಬೆಟ್ಟದ ಮೇಲಕ್ಕೆ ತೆಗೆದುಕೊಂಡುಹೋಗಿದ್ದಾರೆಂದು ಕೇಳಿದ್ದೇನೆ ಅಲ್ಲಿ ಹಣ್ಣುಹಂಪಲು ಬೆಳೆಯುತ್ತಾರಂತೆ. ಈ ಕೃಷಿ ಇಲಾಖೆಯನ್ನು ನನಗೆ ನೀಡಿದ್ದಕ್ಕಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಏಕೆಂದರೆ ಕಸದಿಂದ ರಸ ತೆಗೆಯುವ ಇಲಾಖೆ ಇದು, ಬಡತನ ತುಂಬಿರುವ ಸಮಾಜದಲ್ಲಿ ಮಳೆ ಪ್ರಮಾಣ ಅನುಸರಿಸಿ ಹೆಚ್ಚಿನ ಬೆಳೆ ತೆಗೆಯಲಾರದ ಸಂದರ್ಭ ಇದು ಆದರೆ ನಮ್ಮ ಕೃಷಿ ನೀತಿಯಲ್ಲಿ ಗಮನ

ಹರಿಸುತ್ತಾ ಹೋದ ಹಾಗೆ 60ರ ವರ್ಷಗಳಲ್ಲಿ ಹೈಯಿಲ್ಡಿಂಗ್ ಬಂದಾಗ ನಾವೂ ಸಂತೋಷಪಟ್ಟೆವು. ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್ ಬಂದ ಮೇಲೆ ಐಸಿಆರ್ ಬಂತು ಹಲವಾರು ವಿಚಾರದಲ್ಲಿ ನಮಗೆ ವಿಜ್ಞಾನ ಸಂಸ್ಥೆಗಳಿಂದ ಮಾರ್ಗದರ್ಶನ ಸಿಕ್ಕಿದೆ ಅದಕ್ಕಾಗಿ ಕೇಂದ್ರ ಸರ್ಕಾರವನ್ನು ಅಭಿನಂದಿಸುತ್ತೇನೆ. ನಮ್ಮ ಆರ್ಥಿಕ ಪರಿಸ್ಥಿತಿ ಹೆಚ್ಚಾಗಬೇಕೆಂದರೆ, ತಲಾ ಆದಾಯ ಜಾಸ್ತಿಯಾಗಬೇಕಾಗಿದ್ದರೆ ಅಗ್ರಿಕಲ್ಚರನ್ನು ಮದರ್ ಇಂಡಸ್ಟ್ರಿ ಎಂದು ಇಟ್ಟುಕೊಳ್ಳಬೇಕು. ಯಾವುದೇ ಕೈಗಾರಿಕೆ ತೆಗೆದುಕೊಳ್ಳಿ ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ಇದು ತಾಯಿ ಕ್ಷೇತ್ರ ಇದರಿಂದಲೇ ಹಲವಾರು ಬ್ರಾಂಚ್‌ಗಳು ಉತ್ಪನ್ನವಾಗುತ್ತದೆ. ಆದ್ಯತೆ ದೃಷ್ಟಿಯಿಂದ ಯಾವ ಸ್ಥಾನಮಾನ ಸಿಗಬೇಕಾಗಿತ್ತೋ ಅದನ್ನು ಗಮನದಲ್ಲಿಟ್ಟುಕೊಂಡು ಈ ಮಾತು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಫಾರೆಸ್ಟ್‌ನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಹೆಚ್ಚಾಗಿ ಕಾಡು ಹೋಯಿತೆಂದು ಎಲ್ಲಾ ಸದಸ್ಯರು ಹೇಳಿದ್ದಾರೆ ಆದರಿಂದ ಮಳೆ ಕಡಿಮೆಯಾಯಿತೆಂದು ಹೇಳಿದರು ಆದರೆ ಈಚಿನ ವರ್ಷಗಳಲ್ಲಿ ಹೆಚ್ಚಾಗಿ ಕಾಡು ಉಳಿಸುವುದು ನನ್ನ ಗಮನಕ್ಕೆ ಬಂದಿದೆ. ಆಮೇಲೆ ಎಕಾಲಜಿಕಲ್ ಇಂಬ್ಯಾಲೆನ್ಸ್ ಎಂದು ಏನು ಕರೆಯುತ್ತೇವೆ ಅದಕ್ಕೆ ಕಿವಿಗೊಟ್ಟು ಪ್ರಪಂಚದಲ್ಲೆಲ್ಲ ಅದನ್ನು ಸಮತೋಲನಕ್ಕೆ ತರಬೇಕೆಂದು ಪ್ರಯತ್ನ ಸಾಗಿದೆ. ಇದಕ್ಕೆ ನಮ್ಮ ರಾಷ್ಟ್ರದ ನೀತಿಯಾಧರಿಸಿ ನಾವೂ ಕಾಂಟ್ರಿಬ್ಯೂಟ್ ಮಾಡಬೇಕಾಗುತ್ತದೆ. ಅಗ್ರಿಕಲ್ಚರಲ್ ಕಮಾಡಿಟೀಸ್ ಔಟ್‌ಪುಟ್ ಏನಿದೆ ಅದನ್ನು ಹೆಚ್ಚು ಮಾಡುವ ಪ್ರಯತ್ನವನ್ನು ನಾವು ಮಾಡಬೇಕು. ಒಂದು ಅಗ್ರಿಕಲ್ಚರಲ್ ಫ್ಯಾಮಿಲಿ ಎಂದರೆ ಡ್ಯಾನಿಡಾ ಪ್ರೋಗ್ರಾಂ ಪ್ರಕಾರವೇ ಯೂತ್ಸ್, ಹೆಣ್ಣುಮಗಳು ಭಾಗವಹಿಸುವಂತ ಕಾರ್ಯಕ್ರಮ. ಇಂತಹ ಕಾರ್ಯಕ್ರಮಗಳ ಕಡೆ ಗಮನಹರಿಸಬೇಕು. ಈ ವಿಚಾರದಲ್ಲಿ ಪೌಲ್ಟ್ರಿ ಇದೆ, ಜೇನುಸಾಕಣೆ ಇದೆ ಇವೆಲ್ಲ ರೈತನಿಗೆ ಶಕ್ತಿ ಕೊಡುವ ವಿಧಾನಗಳು. ಇವೆಲ್ಲವನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗುವ ಪ್ರಯತ್ನವನ್ನು ನಾವು ಮಾಡಬೇಕು, ಇಲ್ಲದಿದ್ದರೆ ಪ್ರಯೋಜನವಿಲ್ಲ. ನಾನು ಎಕ್ಸ್‌ಪೋರ್ಟ್ ಓರಿಯಂಟೆಡ್ ಪ್ರೋಗ್ರಾಂ ಈ ರಾಷ್ಟ್ರಕ್ಕೆ ಬರಬೇಕೆನ್ನುವವನು. ರೈತನಿಗೆ ಅದಕ್ಕಾಗಿ ಕುಮ್ಮಕ್ಕು ಕೊಡಬೇಕು. ಹೆಚ್ಚಿಗೆ ಇನ್‌ಸೆಂಟೀವ್ಸ್‌ನ್ನು ಕೊಡಬೇಕು. ಕರ್ನಾಟಕದಲ್ಲಿ 300 ಕೋಟಿಗೂ ಮೀರಿ ಸಹಕಾರ ಸಂಸ್ಥೆಗಳ ಮೂಲಕ ಸಾಲ ಕೊಡುತ್ತೇವೆ. ಇನ್‌ಸೆಂಟೀವಸ್‌ನ್ನು ಕೊಡುವುದನ್ನು ಬಲಗೊಳಿಸಬೇಕು. ರೈತರ ಸಾಲದ ಬಂಧನಗಳನ್ನೆಲ್ಲಾ ಒಂದೇ ಸಲ ನಾವು ಬಗೆಹರಿಸಲೇಬೇಕು. ಅಗ್ರಿಕಲ್ಚರಲ್ ಔಟ್‌ಪುಟ್‌ಅನ್ನು ರಾಜ್ಯದಮಟ್ಟದಲ್ಲಿ ಹೆಚ್ಚುಮಾಡಲು ಸಿದ್ಧತೆಗಳನ್ನು ಮಾನಸಿಕವಾಗಿ ದೈಹಿಕವಾಗಿ ರೈತನನ್ನು ತಯಾರು ಮಾಡಬೇಕು. ಅವನಿಗೆ ವರಿ ಇಲ್ಲ, ಸಾಲ ಇಲ್ಲ ಅನಿಸಬೇಕು ಅದಕ್ಕೆ ಅವರಿಗೆ ಪೂರಕ ಬೆಲೆಗಳನ್ನು ಕೊಡಬೇಕು. ಪ್ರೈಸಸ್ ವಿಚಾರದಲ್ಲಿ 7 ನೇ ಯೋಜನೆಯಲ್ಲಿ ಎಷ್ಟು ನಿಗದಿ ಮಾಡಿದ್ದರು ರಾಗಿ ಜೋಳ ಭತ್ತ ಆ ಪ್ರಮಾಣವನ್ನು ಸಂಪೂರ್ಣವಾಗಿ ಮುಟ್ಟಲು ಆಗಿಲ್ಲ. ವಿವರಗಳನ್ನು ವರದಿಯಲ್ಲಿ ಕೊಟ್ಟಿದ್ದೇನೆ. 90-91ನೇ ಸಾಲಿನಲ್ಲಿ ಸಾಧನೆ ಮಾಡಿಲ್ಲ. ಆ ಗುರಿ ಮುಟ್ಟಬೇಕಿದ್ದರೆ ನಿಮ್ಮ ಸಲಹೆಗಳನ್ನು ಗಮನಿಸಿ ರೈತರಿಗೆ ಇನ್‌ಸೆಂಟೀವ್ಸ್‌ಅನ್ನು ಕೊಟ್ಟು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. 90-91ರ ಸಾಲಿಗೆ ಕೃಷಿ ಉತ್ಪನ್ನಗಳ ಗುರಿ ಬತ್ತ 12.11, ಜೋಳ 18, ರಾಗಿ 16 ಇವೆಲ್ಲ ಲಕ್ಷಗಳಲ್ಲಿ ಹೋಗುತ್ತವೆ. ಶುಗರ್‌ಕೇನನ್ನು ಇಟ್ಟುಕೊಂಡಿದ್ದೇವೆ. ಗುರಿ ತಲುಪಬೇಕಾದರೆ ಇದನ್ನೆಲ್ಲ ಮನಸ್ಸಿಲ್ಲಿಟ್ಟು 8 ನೇ ಯೋಜನೆಯಲ್ಲಿ ಫಿಕ್ಸ್ ಮಾಡಿರುವುದನ್ನು ಮುಟ್ಟಲು ಹೋಗಬೇಕು. ನಾವಿಟ್ಟುಕೊಂಡಿರುವ ಪ್ರೋಗ್ರಾಂಸ್ ಐಸಿಆರ್ ಗೈಡ್‌ಲೈನ್ಸ್ ನಾವು ಹಾಕಿರುವ ಕೆಲವು ಗೈಡ್‌ಲೈನ್ಸ್, ಯೋಜನೆಗಳು ಮತ್ತು ಯೂನಿವರ್ಸಿಟಿಯವರು ಕೊಟ್ಟಿರುವ ಎಜುಕೇಶನ್ ಏನಿವೆ ಅದನ್ನು ರೈತರಿಗೆ ತಲುಪಿಸಬೇಕಾಗಿದೆ. ಎಎಒಗಳನ್ನು ನೀವು ಸರಿಯಾಗಿ ತಿಳಿವಳಿಕೆ ಮಾಡಿಲ್ಲ, ಮೆಟ್ರಿಕುಲೇಟ್ ಆದವರು, ಚುರುಕಿಲ್ಲ ಎಂಬ ಅಭಿಪ್ರಾಯ ಇದೆ. ಇದನ್ನು ಅನುಸರಿಸಿ ಮೊನ್ನೆ ಒಂದು ಪ್ರಶ್ನೆ ಬಂದಾಗ ಒಂದು ಮಾತು ಹೇಳಿದೆ ಅದಕ್ಕೆ ಸದನದ ಎಲ್ಲಾ ಸದಸ್ಯರೂ ಬೆಂಬಲಿಸಿದರು ಸರ್ಕಾರ ಸೀರಿಯಸ್ಸಾಗಿ ಇದನ್ನು ಯೋಚಿಸುತ್ತಿದೆ ರೈತರು ಕೂಡ ಜ್ಞಾನವಂತರಾಗುತ್ತಿದ್ದಾರೆ ಕೃಷಿ ವಿಜ್ಞಾನವನ್ನು ನಾಲ್ಕು ಗೋಡೆಗಳ ಮಧ್ಯೆಯಿಂದ ರೈತನಿಗೆ ತಲುಪಿಸಬೇಕಾಗಿದೆ ಇದು ಅನಿವಾರ್ಯ.

ಅದಕ್ಕಾಗಿ ನಾವು ಇವತ್ತಿನ ದಿವಸ ನಮ್ಮ ವಿಶ್ವವಿದ್ಯಾನಿಲಯದಿಂದ ತಯಾರು ಮಾಡಿರತಕ್ಕಂಥ ಯುವಕ ಯುವತಿಯರು ಯಾರ್‍ಯಾರು ಇರುತ್ತಾರೆ ಅವರನ್ನು ತೆಗೆದುಕೊಂಡು ಹೋಗಿ ರೈತರನ್ನು ಸಂಪರ್ಕ ಮಾಡುವ ಹಾಗೆ ಮಾಡಿ ನಾವು ಇಲ್ಲಿ ವಿಚಾರ ಮಾಡತಕ್ಕಂಥ ಜ್ಞಾನವನ್ನು ಅವರ ಮುಖಾಂತರ ಕೆಲವರಿಗೆ ತಲುಪಿಸಲೇಬೇಕಾಗಿದೆ. ಅದಕ್ಕಾಗಿ ನಾವು ಒಂದು ತೀರ್ಮಾನವನ್ನು ಮಾಡಿದ್ದೇವೆ. ಈಗ ಇರತಕ್ಕಂಥವರದು ಆಯಿತು. ಇನ್ನು ಮೇಲೆ ಯಾರು ಗ್ರಾಮೀಣ ಸೇವಕರು ಎನ್ನತಕ್ಕಂಥ ಒಂದು ಜಾಗದಲ್ಲಿ ಇದೆ. ಆ ಜಾಗಕ್ಕೆ ಬಿ.ಎಸ್‌ಸಿ. (ಎ.ಜಿ.) ಓದಿರತಕ್ಕಂಥವರನ್ನು ಮಾತ್ರ ನೇಮಕ ಮಾಡಬೇಕು ಎಂದು ಸರ್ಕಾರದವರು ತೀರ್ಮಾನವನ್ನು ಮಾಡಿದ್ದೇವೆ ಏಕೆಂದರೆ ಕಾಲ ಬದಲಾವಣೆಯಾಗಿದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಕೆಲವು ಸದಸ್ಯರು ಹೇಳುವ ಹಾಗೆ ಕೆಲವರಿಗೆ ಒ ಎಂದರೆ ಟೊ ಎನ್ನುವುದಕ್ಕೆ ಬರುವುದಿಲ್ಲ, ಅವರಿಗೆ ಏನೂ ಗೊತ್ತಿರುವುದಿಲ್ಲ ಎಂದು ಇವೆಲ್ಲಾ ಆಪಾದನೆಗಳು ಬರುತ್ತವೆ. Minimum qualification should be B.sc. (Agr). ಎನ್ನತಕ್ಕಂಥ ಅಭಿಪ್ರಾಯವನ್ನು ಇಟ್ಟುಕೊಂಡು ಅದನ್ನು ಜಾರಿಯಲ್ಲಿ ತರಬೇಕು ಎನ್ನತಕ್ಕಂಥ ಮಾತನ್ನು ಆಡಿದಾಗ ಆ ವಿಚಾರವನ್ನು ಕೂಡಾ ಇಟ್ಟುಕೊಂಡು ಒಪ್ಪಿದ್ದೇನೆ. ಮುಂದೆ ನೇಮಕಾತಿ ಸಂದರ್ಭದಲ್ಲಿ ಬರುತ್ತದೆ. ಅನೇಕ ಜಾಗಗಳು ಕೂಡಾ ಖಾಲಿ ಇವೆ. ನಿಜವಾಗಿ ಹೇಳಬೇಕಾದರೆ ಉತ್ತರ ಕರ್ನಾಟಕ ಭಾಗದಲ್ಲಿ ಹೈದರಾಬಾದ್-ಕರ್ನಾಟಕ ಬಾಂಬೆ-ಕರ್ನಾಟಕ ಭಾಗದಲ್ಲಿ ಅನೇಕ ಜಾಗಗಳು ಇಲಾಖೆಗಳಲ್ಲಿ ಹಾಗೆ ಖಾಲಿ ಬಿದ್ದಿದೆ. ಅದನ್ನು ನಾವು ಭರ್ತಿ ಮಾಡಬೇಕು. ಆರ್.ಡಿ.ಪಿ. ಆರ್. ಗೆ ಬಿ.ಡಿ.ಒಗಳನ್ನೇ ಆಗಿ ತೆಗೆದುಕೊಂಡು ಬಿಡುತ್ತಾರೆ. ನಾವು ಕೊಡದಿದ್ದರೆ ಕಷ್ಟ, ಕೊಟ್ಟರೂ ಕಷ್ಟ, ಎಲ್ಲಾ ಕಾಲದಲ್ಲಿಯೂ ನಡೆದುಕೊಂಡು ಬಂದಿರುವುದು. ನೇಮಕಾತಿಯನ್ನು ಮಾಡಿಕೊಳ್ಳಬೇಕು. ಈಗ ಆರ್ಥಿಕ ದಿಗ್ಬಂಧನ ಏನು ಇದೆ, ಇದನ್ನು ಸರಿಪಡಿಸಿಕೊಂಡು ಹೆಚ್ಚಿನ ನೇಮಕಾತಿಗಳನ್ನು ಎಲ್ಲಾ ಸ್ಥಳದಲ್ಲಿಯೂ ಮಾಡತಕ್ಕಂಥ ಪ್ರಯತ್ನವನ್ನು ಕೂಡ ಮಾಡುತ್ತೇವೆ. ಮುಂದೆ ಎಂಟನೆಯ ಪಂಚ ವಾರ್ಷಿಕ ಯೋಜನೆಯ ಸಂಪೂರ್ಣ ಚಿತ್ರ ನಮಗೆ ಸಿಗುವುದಕ್ಕಿಂತ ಮೊದಲು ನಾವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅದನ್ನು ಆದಷ್ಟು ಮಟ್ಟಿಗೆ ಮಾಡಿಕೊಳ್ಳಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ. ಸಾಧ್ಯತೆಗಳನ್ನು ಮಾಡಲೇಬೇಕಾಗಿದೆ. ಇಲ್ಲದಿದ್ದರೆ ಅವರು ಗೈಡ್‌ಲೈನ್ಸ್‌ಅನ್ನು ಹಾಕುವುದು, ಎಚ್ ಎಂದು ಫಿಕ್ಸ್ ಮಾಡುವುದು, ಅದು ತಲುಪದೇ ಇರುವುದು, ಅದರಿಂದ ಉಪಯೋಗವಾಗುವುದಿಲ್ಲ. ನಾವು ಅದಕ್ಕೆ ಅಧಿಕಾರಿಗಳನ್ನು ಕೂಡಾ ರೆಡಿ ಮಾಡಬೇಕು. ನಮ್ಮ ಇಲಾಖೆಯಲ್ಲಿ ಪ್ರಮೋಷನ್ಸ್ ಅನ್ನು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ನಾನು ಮಿನಿಸ್ಟರ್ ಇದ್ದಾಗ ಪ್ರಮೋಪನ್ಸ್ ಆಗಿದೆ, ಆಮೇಲೆ ಕೊಟ್ಟಿಲ್ಲ ಒಂದು ಮತ್ತು ಎರಡನೇ ಗ್ರೇಡ್‌ನಲ್ಲಿ ಎನ್ನತಕ್ಕಂಥ ಮಾತನ್ನು ಕೂಡಾ ಹೇಳುತ್ತಿದ್ದಾರೆ. ಅದನ್ನು ಕೂಡಾ ನಾವು ವಿಚಾರ ಮಾಡುತ್ತಿದ್ದೇವೆ. ಸಂಬಳವನ್ನು ಜಾಸ್ತಿ ಕೊಡಲಿಕ್ಕೆ, ಪ್ರಶ್ನೆಯೇ ಬರುವುದಿಲ್ಲ. ಸಂಬಳದ ಬಗ್ಗೆ ಅವರು ಆಗಲೇ ರೀಚ್ ಆಗಿಬಿಟ್ಟಿದ್ದಾರೆ. ಆ ವಿಚಾರವನ್ನು ನಾವು ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ವರ್ಗಾವರ್ಗಿ ಬಗ್ಗೆ ಹೇಳಬೇಕಾದರೆ ನೀವು ಯಾರು ಹೇಳದಿದ್ದರೂ ಕೂಡ ನನ್ನ ಮಾತನ್ನು ನಾನೇ ಆಡಿಕೊಳ್ಳಬೇಕಾಗುತ್ತದೆ. ನಾನು ಕೂಡ ಇದನ್ನು ಮಾಡಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ವರ್ಗಾವಣೆ ಬಗ್ಗೆ ತಾವು ಹೇಳಿದಿರಲ್ಲಾ, ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಇಡ್ಲಿ, ದೋಸೆಗೆ ಬೆಲೆಯನ್ನು ಫಿಕ್ಸ್ ಮಾಡಿದಂತೆ ಈ ವರ್ಗಾವಣೆ ವಿಚಾರದಲ್ಲಿ ಆಗಿದೆ. ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಆಗಿಲ್ಲ, ಅದಕೋಸ್ಕರ ನಾವು ಹೇಳಲಿಲ್ಲ.

ಶ್ರೀ ಎಸ್.ಬಂಗಾರಪ್ಪ:- ಇದರ ಬಗ್ಗೆ ನೋ ಕಾಮೆಂಟ್ಸ್. ಅದು ತಮ್ಮ ಅಭಿಪ್ರಾಯ. ಇದರ ಬಗ್ಗೆ ಅನೇಕ ಸಾರಿ ಇಲ್ಲಿ ಚರ್ಚೆಯಾಗಿರುವುದರಿಂದ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ನಾವು ಆದಷ್ಟು ಮಟ್ಟಿಗೆ ಇದನ್ನೆಲ್ಲಾ ಭರ್ತಿ ಮಾಡಿ ರೆಡಿಯಾಗಿರಬೇಕು ಎನ್ನತಕ್ಕಂಥ ವಿಚಾರವನ್ನು ನಾವು ಕೂಡಾ ಗಮನದಲ್ಲಿಟ್ಟುಕೊಂಡಿದ್ದೇವೆ. ಅದಕ್ಕಾಗಿ ಅಗ್ರಿಕಲ್ಚರ್ ಯೂನಿವರ್ಸಿಟಿ ಏನು ಇದೆ ಆ ಎರಡರಲ್ಲಿ ಅದರ ವ್ಯಾಪ್ತಿಯನ್ನು ವಿಸ್ತರಣೆ ಮಾಡಬೇಕು ಎನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ರೈತರಿಗೆ ಸಂಬಂಧಪಟ್ಟಂತೆ ರೈತರಿಗೆ ಸರಿಯಾಗಿ ಕೆಲಸಕಾರ್ಯಗಳು ಕಾಲಕ್ಕೆ

ತಕ್ಕ ಹಾಗೆ ನಡೆಯಬೇಕೆಂದು ಇದ್ದರೆ ಅವು ಉಪಕರಣಗಳು ಕೂಡಾ ಕರೆಕ್ಟ್ ಇರಬೇಕು. ಅದಕ್ಕಾಗಿ ನಾವು ವಿಚಾರ ಮಾಡಿದ್ದೇವೆ. ಈಗ ಏನು ಉಪಕರಣಗಳು ಇವೆ, ನೇಗಿಲು, ಕುಂಟೆ ಮತ್ತೊಂದು ಎತ್ತುಗಾಡಿ ಇವುಗಳ ಬಗ್ಗೆಯೂ ನೋಡಬೇಕಾಗಿದೆ. ಇದೆಲ್ಲಾ ಅವನಿಗೆ ಸರಿಯಾಗಿ ಇದೆಯೋ ಇಲ್ಲವೋ ಗೊತ್ತಿಲ್ಲ. ಒಂದು ಕೇರಿಯಲ್ಲಿ ಹತ್ತು ಮನೆಗಳು ಇದ್ದರೆ ಮಳೆ ಬಿದ್ದಾಗ, ಹದ ಬಂದಾಗ ಒಂದೇ ನೇಗಿಲು ಹತ್ತು ಮನೆಗೆ ಓಡಾಡಬೇಕಾಗುತ್ತದೆ. ಕೆಲವರಿಗೆ ಇರುವುದಿಲ್ಲ. ಆಗ ಹೋಗಿ ಕಡಕ್ಕೋ ಅಥವಾ ಬಾಡಿಗೆಗೆ ಕೇಳುತ್ತಾನೆ, ಸಾಲವನ್ನು ಕೇಳುತ್ತಾನೆ, ನಿಮ್ಮ ಮನೆಗೆ ಬಂದು ನಾನು ದುಡಿಯುತ್ತೇನೆ, ಸ್ವಲ್ಪ ನೇಗಿಲು ಕೊಡಿ ಎಂದು ಕೇಳುತ್ತಾರೆ, ಎತ್ತುಕೊಡಿ ಎಂದು ಕೇಳುತ್ತಾರೆ. ಇದಕ್ಕಾಗಿ ಸರ್ಕಾರದವರು ಏನು ತೀರ್ಮಾನ ಮಾಡಿದ್ದೇವೆ ಎಂದರೆ ಮುಂದೆ ಬರತಕ್ಕಂಥ ದಿನಗಳಲ್ಲಿ ಒಂದು ವರ್ಷದಲ್ಲಿ ಈ ಉಪಕರಣಗಳ ಬಗ್ಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಸೆನ್ಸಸ್ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಒಂದು ರೈತ ಕುಟುಂಬದಲ್ಲಿ ಎಷ್ಟೆಷ್ಟು ಉಪಕರಣಗಳು ಇದೆ, ಅವನಿಗೆ ಎಷ್ಟು ಜಮೀನು ಇಧೆ? ಎಷ್ಟು ಉಪಕರಣಗಳು ಅವರಿಗೆ ಇದೆ? ಜೊತೆಗೆ ಅಗ್ರಿಕಲ್ಚರ್ ಲೇಬರರ್ ಏನು ಇದ್ದಾರೆ, ಅವರನ್ನೂ ಕೂಡಾ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಏಕೆಂದರೆ ಅವನು ಕೂಡಾ ಹೋಗಿ ಮಣ್ಣು ಅಗೆಯಬೇಕಾಗುತ್ತದೆ. ಮತ್ತೊಂದು ಎತ್ತು ನೇಗಿಲು ಇಟ್ಟುಕೊಂಡು ಬಾಡಿಗೆಯಿಂದ ಅವನು ಜೀವನ ಮಾಡುತ್ತಿರಬಹುದು, ಅದರಿಂದ ಅದನ್ನೂ ಕೂಡಾ ಮಾಡುತ್ತಿದ್ದಾನೆಯೋ ಇಲ್ಲವೋ ಎಂದು ಕೂಡಾ ತಿಳಿದುಕೊಳ್ಳಬೇಕು.

ಸಂಪೂರ್ಣವಾಗಿ ಉಪಕರಣಗಳ ಸಂಖ್ಯೆಯನ್ನು ನಾವು ಗಣತಿ ಮಾಡಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಎಲ್ಲಾ ವ್ಯವಸ್ಥೆ ಮಾಡುತ್ತೇವೆ. ಮಾಡಿ ಅದಕ್ಕೆ ಎಷ್ಟು ಸಾಧ್ಯವಿದೆ ಅಷ್ಟು ಶಕ್ತಿ ಮೀರಿ ರೈತರಿಗೆ ಉಪಕರಣ ಒದಗಿಸುತ್ತೇವೆ. ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಇತ್ಯಾದಿ ಅಡಿಯಲ್ಲಿ ಷೆಡ್ಯೂಲ್ ಕಾಸ್ಟ್, ಷೆಡ್ಯೂಲ್ ಟ್ರೈಬ್‌ಗಳಿಗೆ ಕೆಲವು ಕಡೆ ಕಬ್ಬಿಣದ ನೇಗಿಲು ಕೊಡತಕ್ಕದ್ದು, ಔಷಧಿಗಳನ್ನು ಸಿಂಪಡಿಸತಕ್ಕದ್ದಕ್ಕೆ ಒಂದು ಪಂಪನ್ನು ಕೊಡತಕ್ಕದ್ದು. ಆದರೆ ಅವನಿಗೆ ತನ್ನದೇ ಆಗಿರತಕ್ಕ ಒಂದು ಸ್ವಂತ ಆಸ್ತಿಯನ್ನು ಮಾಡಿಕೊಳ್ಳತಕ್ಕ ಒಂದು ಸ್ವಶಕ್ತಿಯನ್ನು ಕಲಿಕೆಗೆ ಮಾಡಿಕೊಡತಕ್ಕಂಥ ವಿಚಾರ ಧಾರೆಯ ಒಂದು ಜಾಡನ್ನು ಹಿಡಿದುಕೊಡತಕ್ಕ ಒಂದು ಕೆಲಸ. ಈ ಒಂದು ದೃಷ್ಟಿಯಿಂದ ಒಂದು ಪ್ರಯತ್ನವನ್ನು ನಾವು ಮಾಡಬೇಕು ಎನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಇದಕ್ಕೆ ನಾವು ಹಲವಾರು ಕಾರ್ಯಕ್ರಮಗಳನ್ನು ಸ್ಟೇಟ್ ಸೆಕ್ಟಾರ್ ಸ್ಕೀಮ್‌ಗಳಲ್ಲಿ, ಈ ಜಾಯಿಂಟ್ ಪ್ರೋಗ್ರಾಂಗಳಲ್ಲಿ, ಆಮೇಲೆ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್‌ಗೆ ಸಬ್ಸಿಡೈಸ್ ಅನ್ನು ಎಷ್ಟು ಜನಕ್ಕೆ ಸಾಧ್ಯವೋ ಅಷ್ಟು ಜನಕ್ಕೆ ಕೊಡತಕ್ಕ ವಿಚಾರಗಳು ಇವಕ್ಕೆಲ್ಲಾ ಹೆಚ್ಚಿಗೆ ಗಮನವನ್ನು ನಾವು ಕೊಡಬೇಕೆಂಬ ವಿಚಾರವನ್ನು ಈ ಸಂದರ್ಭದಲ್ಲಿ ನಾವು ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ಕೃಷಿ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ತಪ್ಪು ಮಾಡತಕ್ಕವರು ಇದ್ದಾರೆಂದು ನನ್ನ ಗಮನಕ್ಕೆ ಬಂದಾಗ ಅವರ ಮೇಲೆ ಕಾನೂನಿನ ಚೌಕಟ್ಟಿನಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳತಕ್ಕ ವಿಚಾರವನ್ನು ನಾವು ಪ್ರಾರಂಭ ಮಾಡಿದ್ದೇವೆ. ಅವರು ಯಾರೇ ಇರಬಹುದು, ಎಷ್ಟೇ ದೊಡ್ಡವರು ಇರಬಹುದು. ತಪ್ಪು ಮಾಡಿದ ಅಧಿಕಾರಿಗಳು ಇದ್ದಾಗ ಹಾಗೆಯೇ ಬಿಡುವುದಕ್ಕೆ ಆಗುವುದಿಲ್ಲ. ಜನಹಿತವನ್ನು ಸಂಪೂರ್ಣವಾಗಿ ತುಳಿದು ಹಾಕತಕ್ಕ ಜನ, ಕಾನೂನಿನ ಚೌಕಟ್ಟಿನಲ್ಲಿ ಅನ್ಯಾಯ ಮಾಡುತ್ತಿದ್ದಾರೆ ಅಂದರೆ ಅವರನ್ನು ಹಾಗೆಯೇ ಬಿಡುವುದಕ್ಕೆ ಹೋಗುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೋಳ್ಳುತ್ತೇವೆ. ಆದರೆ ಅಷ್ಟೇ ಒಳ್ಳೆಯ ಅಧಿಕಾರಿಗಳು ಕೂಡ ನಮ್ಮ ಇಲಾಖೆಯಲ್ಲಿ ಇದ್ದಾರೆ ಎನ್ನತಕ್ಕ ತೃಪ್ತಿ ನಮಗೆ ಇದೆ. ಅದನ್ನು ತಾವೂ ಒಪ್ಪಿತ್ತೀರಿ ಎಂದು ನಾನು ಭಾವಿಸಿದ್ದೇನೆ. ನಾವು ಅವರಿಗೆ ಕೆಲವು ಬೆಂಬಲವಾಗಿ, ಇನ್‌ಸೆಂಟೀವ್ ಕೊಡತಕ್ಕದ್ದು ಯಾವ ಯಾವ ಕ್ಷೇತ್ರದಲ್ಲಿ ಹೇಗೆ ಬೆಂಬಲ ಕೊಡಬೇಕು ಎಂಬ ಬಗ್ಗೆ ನಮ್ಮ ವಿಚಾರ ಇದೆ ಯಾವುದಾದರೂ ಒಂದು ಸಾಧನೆಯನ್ನು ಒಬ್ಬ ಕೃಷಿ ತಜ್ಞ ಮಾಡಿದ ಅಂದರೆ ಅವನಿಗೆ ಯಾವ ರೀತಿ ಒಂದು ಬಹುಮಾನ ನೀಡಬೇಕು ಎಂದು ಹೇಳುವುದು. ಬಹುಮಾನ ಅಂದ ತಕ್ಷಣ ಹಣ ಎಂದು ವ್ಯಾಖ್ಯಾನ ಮಾಡಬಾರದು. ಅವರ

ಸೇವೆಯನ್ನು ನಾವು ಯಾವ ರೀತಿ ಗುರುತಿಸಬೇಕು ಎನ್ನತಕ್ಕದ್ದು. ಹೀಗೆ ಮಾಡಿದರೆ ಮಾನಸಿಕವಾಗಿ ಅವರಿಗೆ ಕೂಡ ಒಂದು ಹುರುಪು ಬರುತ್ತದೆ. ಈ ಸರ್ಕಾರ, ಈ ವಿಶ್ವವಿದ್ಯಾನಿಲಯ ನಮ್ಮನ್ನೆಲ್ಲಾ ಗುರುತಿಸಿದೆ. ನನಗೆ ಬಹಳ ಸಂತೋಷ ಆಗಿದೆ ಎಂದು ಅವರ ಮನಸ್ಸಿಗೆ ಕೂಡ ಬರಲಿ ಎನ್ನುವ ದೃಷ್ಟಿಯಿಂದ ಈ ಎರಡೂ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅಂತಹವರಿಗೆ ಸಂಪೂರ್ಣವಾಗಿ ನಾವು ಬೆಂಬಲ ಕೊಡತಕ್ಕದ್ದು ರಕ್ಷಣೆ ಕೊಡತಕ್ಕದ್ದು ಇದೆ. ಇನ್ನೂ ಅನೇಕ ವಿಚಾರದಲ್ಲಿಸಾಧನೆ ಅವರಿಂದ ಮಾಡಿಸಬೇಕು. ಅನಂತರ ಇಲಾಖೆಗಳಲ್ಲಿ ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ಇದ್ದರೆ ಇವರ ಮುಖೇನ ಕೆಲಸವನ್ನು ಮಾಡಿಸಬೇಕು. ಈ ವಿಚಾರದಲ್ಲಿ ಸರ್ಕಾರದ ಪರವಾಗಿ ಈ ಸಂದರ್ಭದಲ್ಲಿ ನಾನು ಪ್ರಕಟಣೆ ಮಾಡುತ್ತಿದ್ದೇನೆ. ಆದರೆ ಇದೇ ರೀತಿಯ ಇನ್‌ಸೆಂಟೀವ್ ಕೊಡಬೇಕು. ಬೆಂಬಲ ಕೊಡಬೇಕು ಎಂದು ಈಗ ಹೇಳಲಾರೆ. ಅದನ್ನು ಸ್ವಲ್ಪ ಚರ್ಚೆ ಮಾಡಿ ಮಾಡಬೇಕು. ಇದು ಕಾಲದ ಅಭಾವದಿಂದ ಸಾಧ್ಯ ಆಗುತ್ತಾ ಇಲ್ಲ. ದಯಮಾಡಿ ಕ್ಷಮಿಸಬೇಕು. ಒಟ್ಟಿನಲ್ಲಿ ಅಂತಹವರನ್ನು ಗುರುತಿಸಿ ಬೆಂಬಲ ಕೊಡತಕ್ಕ ವಿಚಾರವನ್ನು ಕೂಡ ನಾವಿಟ್ಟುಕೊಂಡಿದ್ದೇವೆ. ಇವೊತ್ತು ಅಧಿಕಾರಿಗಳನ್ನು ಕಂಡರೆ ಕೃಷಿಕರಿಗೆ ಒಂದೊಂದು ಸಾರಿ ಏನೋ ಬಂದರೂ ಹೇಳಿ ಹೋಗುತ್ತಾರೆ, ಎಂದು ಕೃಷಿಕ ಟವೆಲ್ ಹಾಕಿಕೊಂಡು ಹೊರಟು ಹೋಗಿಬಿಡುತ್ತಾನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗ ಇರತಕ್ಕ ರಾಜ್ಯಪಾಲರಾದ ಶ್ರೀ ಭಾನುಪ್ರತಾಪ್ ಸಿಂಗ್ ಅವರನ್ನು ನಾನು ಈ ಸಂದರ್ಭಡಲ್ಲಿ ನೆನೆಸಿಕೊಳ್ಳಬೇಕು. ಅವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ನೆನೆಸಿಕೊಳ್ಳುವುದಷ್ಟೇ ಅಲ್ಲ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ, ನಾನು ಅವರನ್ನು ಅಭಿನಂದಿಸುತ್ತೇನೆ. ನಮ್ಮ ಗವರ್ನರ್ ಅವರು ಹೇಳಿದ್ದಾರೆ ಎನ್ನುವ ಉದ್ದೇಶ ಅಲ್ಲ. ಅವರು ಸ್ವತಃ ಕೃಷಿಕರು ಆಗಿದ್ದಾರೆ ಮತ್ತು one of the famous horticulturists ನನಗೆ ಗೊತ್ತಿರುವ ಹಾಗೆ. ಅವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದ್ದಾರೆ. ಈಗಾಗಲೇ ಅವರು ಪ್ರಿಲಿಮಿನರಿ ರಿಪೋರ್ಟ್ ಕೊಟ್ಟಿದ್ದಾರೆ. ಅಂತಿಮ ವರದಿಯನ್ನು ಕೂಡ ಕೊಡತಕ್ಕ ವಿಚಾರ ಇದೆ. ಕೃಷಿ ಮತ್ತು ಕೃಷಿಕರಿಗೆ ಸಂಬಂಧಪಟ್ಟ ವಿಚಾರದಲ್ಲಿ ಅವರು ಬಹಳ ದೊಡ್ಡ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡುವವರಿದ್ದಾರೆ, ನಾನು ಇದನ್ನು ನಿರೀಕ್ಷಣೆಯನ್ನು ಕೂಡ ಮಾಡುತ್ತೇನೆ ಹಾಗೂ ಅವರಿಗೆ ಶುಭ ಹಾರೈಕೆ ಮಾಡುತ್ತೇನೆ. ತಾವೇ ಕೃಷಿಕರಾಗಿರುವುದರಿಂದ ಈ ವರದಿಯನ್ನು ತಮ್ಮ ಕೈಯಿಂದ ಬರುತ್ತಿರುವುದು ಕೃಷಿಕರಿಗೆ ವರದಾನದ ರೀತಿಯಲ್ಲಿ, ರಾಷ್ಟ್ರದ ಕೃಷಿಕರಿಗೆ, ರೈತರಿಗೆ, ರೈತ ಸಮುದಾಯಕ್ಕೆ ಬರಲಿ ಎನ್ನತಕ್ಕ ಹಾರೈಕೆಯನ್ನು ಕೂಡ ಆಸೆಯನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಒಬ್ಬ ಅಧಿಕಾರಿ ರೈತರ ಹತ್ತಿರ ಹೋದರೆ ಅವನಿಗೆ ನಂಬಿಕೆ ಬರುವುದಿಲ್ಲ. ಅದಕ್ಕೆ ಅವನು ಮತ್ತೊಬ್ಬ ರೈತ ಪಕ್ಕದಲ್ಲಿ ಏನಾದರೂ ಮಾಡಿರಬಹುದು ಎಂದು ಅದನ್ನು ಹುಡುಕುತ್ತಾನೆ. ಅದಕ್ಕೆ ಒಬ್ಬ ಮಾದರಿ ಕೃಷಿಕನನ್ನು ತಯಾರು ಮಾಡಿ ಅವನ ಮಧ್ಯೆ ಇರಬೇಕು ಎನ್ನತಕ್ಕಂಥಾದ್ದು ಒಂದು ಅಭಿಪ್ರಾಯ, ಅಂದರೆ ಮಾಡೆಲ್ ಫಾರ್ಮರ್. ಆ ಮಾಡೆಲ್ ಫಾರ್ಮರ್ ಹೀಗೆ ಇರಬೇಕು ಎಂದು ನಾವು ಸ್ವಲ್ಪ ಚರ್ಚೆ ಮಾಡಿದ್ದೇವೆ. ನಾನು ಇದರ ಬಗ್ಗೆ ವಿವರಗಳನ್ನು ಮುಂದೆ ಕೆಲವು ದಿನಗಳಲ್ಲಿ ಪ್ರಕಟಣೆ ಮಾಡುವವನಿದ್ದೇನೆ. ಮಾಡೆಲ್ ಫಾರ್ಮರ್ ಎನ್ನತಕ್ಕಂಥಾವನಿಗೆ ಸ್ವಲ್ಪವಾದರೂ ಭೂಮಿ ಇರಬೇಕಾಗುತ್ತದೆ. ಏಕೆಂದರೆ ಅವನು ಹೈನು ಮಾಡಿಕೊಳ್ಳಬೇಕಾಗುತ್ತದೆ. ಕೋಲಾರ ಜಿಲ್ಲೆಯಾದರೆ ರೇಷ್ಮೆ ಬಗ್ಗೆಯೂ ವಿಚಾರ ಮಾಡಬೇಕಾಗುತ್ತದೆ, ಫಿಷಿಂಗ್ ಬಗ್ಗೆಯೂ ವಿಚಾರ ಮಾಡಬೇಕಾಗುತ್ತದೆ. ಮಾದರಿ ರೈತ ಅಂದರೆ ಭರೀ ಬೆಳೆ ತೆಗೆಯುವವನಷ್ಟೇ ಅಲ್ಲ, ಅನಿಮಲ್ ಆಸ್ಬಂಡರಿಯೂ ಇರಬೇಕು. ಕ್ರಾಪ್ ಅಂಡ್ ಅನಿಮಲ್ ಹಸ್ಬಂಡರಿ ಇವೆರಡೂ ಕೂಡ ಆ ವ್ಯಾಪ್ತಿಯಲ್ಲಿ ಬರಬೇಕು. ಅವನು ಆದಷ್ಟು ಸ್ಮಾಲ್ ಹೋಲ್ಡರ್ ಆಗಿರಬೇಕು. ಏಕೆಂದರೆ ನಮ್ಮ ದೇಶದಲ್ಲಿ ಸಣ್ಣ ಸಣ್ಣ ಹಿಡುವಳಿಗಳೇ ಹೆಚ್ಚಾಗಿರುವುದರಿಂದ ಈ ಹಿಡುವಳಿದಾರರ ಪೈಕಿಯೇ ನಾವು ಒಬ್ಬ ಮಾಡೆಲ್ ಫಾರ್ಮರನ್ನು ತಯಾರು ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಸರ್ಕಾರ ಮಾಡಿದೆ. ಪೈಲೆಟ್

ಪ್ರಾಜೆಕ್ಟ್‌ನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಒಂದೇ ಸಾರಿಗೆ ಎಲ್ಲವನ್ನೂ ಅನೌನ್ಸ್‌ಮಾಡಿ ನಾಳೆ ನಪಾಸಾಗಿ ಬಿಟ್ಟರೆ ಒಳ್ಳೆಯದಲ್ಲ ಎನ್ನತಕ್ಕಂತ ದೃಷ್ಟಿಯಿಂದ ಇದನ್ನೊಂದು ಪ್ರಾಯೋಗವಾಗಿ ನಾನು ಮಾಡುತ್ತಾ ಇದ್ದೇನೆ. ತಮಗೆ ಗೊತ್ತಿರುವಹಾಗೆ ಮೈಸೂರು, ಬೆಂಗಳೂರು, ಗುಲ್ಬರ್ಗ ಮತ್ತು ಬೆಳಗಾಂ ಜಿಲ್ಲೆಗಳಿವೆ. ಈ 4 ಡಿವಿಜನ್‌ಗಳಲ್ಲಿ ನಾಲ್ಕು ಜಿಲ್ಲೆಗಳನ್ನು ನಾವು ಆರಿಸಿಕೊಂಡಿದ್ದೇವೆ. ಗುಲ್ಬರ್ಗ ಡಿವಿಜನ್‌ಗೆ ಸಂಬಂಧಪಟ್ಟ ಹಾಗೆ ಗುಲ್ಬರ್ಗಾ ಜಿಲ್ಲೆಯನ್ನು ನಾವು ಆರಿಸಿಕೊಂಡಿದ್ದೇವೆ.

ಶ್ರಿ ಪಿ.ಜಿ. ಆರ್. ಸಿಂಧ್ಯ: ಆದು ಮುಖ್ಯ ಮಂತ್ರಿಗಳ ಜಿಲ್ಲೆ.

ಶ್ರೀ ಎಸ್. ಬಂಗಾರಪ್ಪ:- ಆದಲ್ಲ, ಒಣ ಬೇಸಾಯ ಮತ್ತು ನೀರಾವರಿ ಎರಡೂ ಕೂಡ ಇದೆ. ಇದು ಯಾರನ್ನೂ ಸಮಾಧಾನ ಮಾಡುವುದಲ್ಲ. ಆದು ಸಕ್ಸಸ್ ಆಗಿಬಿಟ್ಟರೆ ಮುಂದಿನ ವರ್ಷ ಬರುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಸಭಾಧ್ಯಕ್ಷರೇ ಈ ಸರ್ಕಾರದಲ್ಲಿ ಎಲ್ಲಾ ಮಂತ್ರಿಗಳೂ ಸಹಿತ ಯಾವುದೇ ಒಂದು ಹೊಸ ಯೋಜನೆ ಮಾಡಿದರೂ ಸಹ ತಪ್ಪದೆ ಗುಲ್ಬರ್ಗ ಎಂದು ಹೇಳುತ್ತಾರೆ. ಆದಾದ ನಂತರ ಮೈಸೂರು ಮಾನ್ಯ ಮೊಯ್ಲಿಯವರಂತೂ ಪಾಪ ಹೇಳಿಯೇ ಬಿಟ್ಟರು.

ಶ್ರೀ ಎಸ್. ಬಂಗಾರಪ್ಪ:- ನಮ್ಮ ಶಿವಮೊಗ್ಗ ಜಿಲ್ಲೆ ಬರುತ್ತದೆ ಎಂತಲೇ ನೀವು ಹೇಳುವುದು. ಮಾನ್ಯ ಸಭಾಧ್ಯಕ್ಷರೆ, ಈ ಜಿಲ್ಲೆಗಳನ್ನು ನಾವು ಆರಿಸಿಕೊಂಡಿದ್ದೇವೆ ಗುಲ್ಬರ್ಗ ಡಿವಿಜನ್‌ಗೆ ಗುಲ್ಬರ್ಗ ಜಿಲ್ಲೆ, ಬೆಳಗಾಂ ಡಿವಿಜನ್‌ನಲ್ಲಿ ಕಾರವಾರ ಜಿಲ್ಲೆಯನ್ನು ಆರಿಸಿಕೊಂಡಿದ್ದೇವೆ. ಮೈಸೂರು ಡಿವಿಜನ್‌ನಲ್ಲಿ ಮೈಸೂರನ್ನು ಆರಿಸಿಕೊಂಡಿದ್ದೇವೆ. ಬೆಂಗಳೂರು ಡಿವಿಜನ್‌ನಲ್ಲಿ ಕೋಲಾರ ಜಿಲ್ಲೆಯನ್ನು ಆರಿಸಿಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆದು ಒಂದೇ ಎಕ್ಸೆಪ್‌ಷನ್.

ಶ್ರೀ ಎಸ್. ಬಂಗಾರಪ್ಪ: ಮತ್ತೆ ಎಕ್ಸೆಪ್‌ಷನ್ ಎಂದು ಹೇಳುತ್ತೀರಿ. ನಾನು ನಮ್ಮ ಜಿಲ್ಲೆಯನ್ನು ಮುಟ್ಟುವುದಕ್ಕೆ ಹೋಗಿಲ್ಲ. ಏಕೆಂದರೆ ಕೋಲಾರ ಜಿಲ್ಲೆ ಬಗ್ಗೆ ಸ್ಪೆಷಲ್ಲಾಗಿ ವಿಚಾರ ಮಾಡುತ್ತಿದ್ದೇವೆ. ಇದು ಪೈಲಟ್ ಪ್ರಾಜೆಕ್ಟಾಗಿ ಬರುವುದರಿಂದ ಅಲ್ಲಿ ರೇಷ್ಮೆ ವಿಚಾರ ಪ್ರಾಮುಖ್ಯವಾಗಿರುವುದರಿಂದ ಆದನ್ನು I myself selected it ಏಕೆಂದರೆ ಬಾವಿ, ನೀರು, ಏತ ನೀರು ಸಣ್ಣ ಸಣ್ಣ ಪಂಪುಸೆಟ್ಟುಗಳು ಇರತಕ್ಕದ್ದು. ಆಮೇಲೆ ಅದು ಮಳೆಯಿಂದ ಪೆಟ್ಟು ತಿಂದಿರತಕ್ಕ ಭಾಗ ಅದು, ಆದುದರಿಂದ ಅದು ಪ್ರಮುಖವಾಗಿರತಕ್ಕಂಥಾದ್ದು, ನಾನು ಶಾಸಕನಾಗಿದ್ದಾಗ ನೋಡಿರತಕ್ಕ ಜಿಲ್ಲೆ ಅದು. ನಾನು ಕೋಲಾರ ಜಿಲ್ಲೆಯನ್ನು ತೆಗೆದುಕೊಂಡಿದ್ದೇವೆ. ಮೈಸೂರು, ಕೋಲಾರ, ಕಾರವಾರ ಮತ್ತು ಗುಲ್ಬರ್ಗ 4 ಜಿಲ್ಲೆಗಳನ್ನು ಪೈಲಟ್ ಪ್ರಾಜೆಕ್ಟ್‌ನಲ್ಲಿ ತೆಗೆದು ಕೊಂಡಿದ್ದೇವೆ. ಈ ಮಾಡೆಲ್ ಫಾರ್ಮರ್ ಸ್ಮಾಲ್ ಹೋಲ್ಡರ್ ಆಗಿರಬೇಕು. ಸುಮಾರಾಗಿ ಎರಡು ಹೆಕ್ಟೇರು ಎಂದು ಇಟ್ಟುಕೊಳ್ಳೋಣ, 4 ಎಕರೆ ಅಥವಾ 5 ಎಕರೆ ಒಳಗೆ ಬರತಕ್ಕಂಥ ರೈತನಾಗಿರಬೇಕು. ಆದು ಎಷ್ಟು ಏನು ಎನ್ನುವುದನ್ನು ಸರ್ಕಾರಿ ಆಜ್ಞೆ ಮುಖಾಂತರ ನಾವು ಕೊಡುತ್ತೇವೆ. ಅವನಿಗೆ ಏನೇನು ಬೆಂಬಲ ಕೊಡಬೇಕೋ ಅದನ್ನು ಸರ್ಕಾರದವರು ಕೊಡುತ್ತೇವೆ. ನಾನು ಈ ಸಂದರ್ಭದಲ್ಲಿ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಉದಾಹರಣೆಗೆ, ನೀರು, ಬೀಜ, ಗೊಬ್ಬರ, ಎಲ್ಲಾ ಅಗ್ರಿಕಲ್ಚರ್ ಇನ್‌ಪುಟ್ಸ್ ಎಂದು ಇಟ್ಟುಕೊಳ್ಳೋಣ, ಆಮೇಲೆ ಔಷಧಿ ಸಿಂಪಡಿಸತಕ್ಕ ವಿಚಾರ ಇರಬಹುದು, ಮತ್ತೊಂದು ಇರಬಹುದು. ಇದನ್ನೆಲ್ಲಾ ಕೊಟ್ಟು ಮಾಡುವುದರಿಂದ, ಅಲ್ಲಿ ಒಳ್ಳೆಯ ಬೆಳೆ ಬೆಳೆಯುವುದರಿಂದ ಅಲ್ಲಿ ಹೋಗತಕ್ಕಂಥ ಜನ ಅಕ್ಕಪಕ್ಕದ ಜನ ಅದನ್ನು ನೋಡತಕ್ಕಂಥ ವಿಚಾರವಿದೆ. ಹಾಗಾದರೆ, ಆ ರೀತಿ ಪ್ರತಿ ಹಳ್ಳಿಯಲ್ಲಿ ಆ ರೀತಿ ಇರುತ್ತದೆಯೋ ಎಂದು ಕೇಳಬಹುದು. ಇಲ್ಲ, ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಮಂಡಲ ಪಂಚಾಯಿತಿಗೆ ಒಬ್ಬೊಬ್ಬರನ್ನು ಮಾಡಿಕೊಳ್ಳಬೇಕು ಎಂದು ಮಾಡಿದ್ದೇವೆ. ಏಕೆಂದರೆ, ಇದು ಒಂದು ಪೈಲಟ್ ಪ್ರಾಜೆಕ್ಟ್ ಆಗಿರುವುದರಿಂದ ಮಂಡಲ ಪಂಚಾಯಿತಿಗೆ ಒಬ್ಬೊಬ್ಬರನ್ನು ಮಾತ್ರ ಇಟ್ಟುಕೊಂಡಿದ್ದೇವೆ. ಆದು ಸಕ್ಸಸ್ ಆಗಿಬಿಟ್ಟರೆ ಮುಂದಿನವರ್ಷ ಇಡೀ ಕರ್ನಾಟಕ ರಾಜ್ಯಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಇದ್ದೇವೆ. ಈ ಸಲಹೆಯನ್ನು

ಕೊಟ್ಟಿರತಕ್ಕಂಥಾವರು ರಾಜ್ಯಪಾಲರಾದ ಶ್ರೀಮಾನ್ ಭಾನು ಪ್ರತಾಪ ಸಿಂಗ್‌ರವರು. ಅವರಿಗೆ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಅಭಿನಂದನೆಯನ್ನೂ ಕೂಡ ಸಲ್ಲಿಸುತ್ತಾ ಇದ್ದೇನೆ.

ಇದೇ ಸಂದರ್ಭದಲ್ಲಿ ಮತ್ತೊಂದು ಸಲಹೆಯನ್ನು ಕೆಲವರು ಶಾಸಕರುಗಳು ಕೊಟ್ಟಿದ್ದಾರೆ. ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮಂಡಲ ಮಟ್ಟದಲ್ಲಿ 10-25 ಜನ ಇರತಕ್ಕ ಒಂದು ಕೌನ್ಸಿಲ್ ಮಾಡಿ, ಕಮಿಟಿನಮೂನೆಯಲ್ಲಿ ಮಾಡಿ, ಈ ಕಮಿಟಿಯಲ್ಲಿ ಮಂಡಲದಲ್ಲಿರತಕ್ಕ ಎಲ್ಲಾ ಹಳ್ಳಿಯವರು ಇರಲೇಬೇಕು, ಅವರು ತಮ್ಮ ಅಭಿಪ್ರಾಯಗಳನ್ನು ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಮಾಡಲ್ ಫಾರ್ಮರ್ ಜೊತೆಗೆ ಇದು ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾದ ಹೆಚ್.ಟಿ. ರೆಡ್ಡಿಯವರು ಇದರ ಬಗ್ಗೆ ಬಹಳ ಅಭ್ಯಾಸ ಮಾಡಿ, ದೊಡ್ಡ ಹೊತ್ತಿಗೆಯನ್ನೇ ಮಾಡಿದ್ದಾರೆ. ಕೆಲವರು ಆ ರೀತಿಮಾಡಿರುವುದರಿಂದ ಅವರನ್ನು ಕೂಡ ಅಭಿನಂದಿಸುತ್ತೇನೆ. ಸರ್ಕಾರದವರು ಕೂಡ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತದೆ. ಹೇಗೆ ಮಾಡಬೇಕು, ಏನು ಮಾಡಬೇಕೆಂಬುದರ ಬಗ್ಗೆ ಪರಿಶೀಲನೆ ಮಾಡಿ ಅಂತಿಮವಾಗಿ ತೀರ್ಮಾನವನ್ನು ಸಧ್ಯದಲ್ಲಿಯೇ ತೆಗೆದುಕೊಳ್ಳುತ್ತದೆ. ಕಾಲದ ಅಭಾವದಿಂದ ವಿವರವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಮಾಡಲ್ ಫಾರ್ಮರ್‌ಗೆ ಏನೇನು ಸೌಕರ್ಯ ಕೊಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ:- ಮಾಡಲ್ ಫಾರ್ಮರ್‌ಗೆ ಭೂಮಿ ಇರಲೇಬೇಕು. ಪಂಪುಸೆಟ್ಟು ಇರಬಹುದು, ಬೋರ್‌ವೆಲ್ ಹಾಕಿಸತಕ್ಕ ವಿಚಾರ ಬರಬಹುದು, ಇನ್‌ಪುಟ್ಸ್ ಅಂದರೆ, ಬೀಜ ಗೊಬ್ಬರ ಕ್ರಿಮಿನಾಶಕ ಔಷಧಿಗಳು ಇತ್ಯಾದಿ, ಇತ್ಯಾದಿ. ಇದರಲ್ಲಿ ಒಂದು ವಿಚಾರ ಮಾರ್ಕೆಟಿಂಗ್ ಫೆಸಿಲಿಟೀಸ್ ಬರುತ್ತದೆ. ನಾನು ಪ್ರೈಸಸ್ ವಿಚಾರ ಬಂದಾಗ ಅನಂತರ ಮಾತನಾಡುತ್ತೇನೆಂದು ಹೇಳಿದೆ, ಇದು ದೊಡ್ಡ ಸಬ್ಜೆಕ್ಟ್. ಏಕೆಂದರೆ, ಸರ್ಕಾರ ಹಣವನ್ನುಹಾಕಿ, ರೈತನು ತನ್ನ ಸ್ವಂತ ಹಣ ಹಾಕಿ, ತಾನು ಬೆಳೆದ ಬೆಳೆಗೆ ಸರಿಯಾದ ರೇಟ್ ಸಿಗದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಕೆಲವು ನ್ಯೂನತೆಗಳು ಇವೆ ಎನ್ನುವುದಕ್ಕೆ ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಯಾವ ಯಾವ ಮಂಡಲ ಪಂಚಾಯಿತಿ, ವ್ಯಾಪ್ತಿಯಲ್ಲಿ ಜನಗಳಿದ್ದಾರೆ, ಅವರು ಇದನ್ನು ಅನುಸರಿಸಿ ನೋಡಿ ಸರ್ಕಾರ ಕೊಡತಕ್ಕ ವಿಚಾರದಲ್ಲಿ ನ್ಯೂನತೆಗಳು ಇದ್ದರೆ ಇನ್ನು ಚೆನ್ನಾಗಿ ಮಾಡತಕ್ಕ ಸಲಹೆಗಳನ್ನು ಕೊಡಬೇಕೆನ್ನುವ ಬಯಕೆಯನ್ನು ವ್ಯಕ್ತಪಡಿಸುತ್ತೇನೆ. ಈ ಬಗ್ಗೆ ನಾನು ರೈತರಲ್ಲಿ ವಿನಂತಿಸುತ್ತೇನೆ. ಸರ್ಕಾರದ ತೀರ್ಮಾನವೇ ಅಂತಿಮ ಅಲ್ಲ. ಮಾಡಿಫೈ ಮಾಡಿಕೊಳ್ಳಲಾಗುವುದು ಒಳ್ಳೆಯ ಸಲಹೆಗಳು ರೈತರ ಬಾಯಿಂದ, ಅವರ ಅನುಭವದ ಆಧಾರದ ಮೇಲೆ ಬರಲಿ, ನಾವು ಇದನ್ನು ಪ್ರಾಯೋಗಿಕವಾಗಿ ಮಾಡುವುದರಿಂದ ರೈತರು ಕೊಡತಕ್ಕ ವಿಚಾರಗಳನ್ನು ತೆಗೆದುಕೊಳ್ಳುತ್ತೇವೆ.

ಇನ್ನು ರೂರಲ್ ಅಗ್ರಿಕಲ್ಚರಲ್ ಇನ್‌ಪುಟ್ಸ್ ಜಾಸ್ತಿ ಮಾಡುವ ದೃಷ್ಟಿಯಿಂದ ಕೆಲವರು ಸಲಹೆ ಕೊಟ್ಟಿದ್ದಾರೆ. ಹುಣಸೂರು ಕ್ಷೇತ್ರದ ಮಾನ್ಯ ಶಾಸಕಿಯವರಾದ ಚಂದ್ರಪ್ರಭಾ ಅರಸು ಅವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಾವಿರಾರು ಕೆರೆಗಳು ಇವೆ. ಒಂದೊಂದು ಜಿಲ್ಲೆಯಲ್ಲಿ ಸಾವಿರಾರು ಕೆರೆಗಳು ಇವೆ. ರಾಜ್ಯದಲ್ಲಿ ಲಕ್ಷಾಂತರ ಕೆರೆಗಳು ಇವೆ.

ಶ್ರೀ ಎಂ.ವಿ. ವೆಂಕಟಪ್ಪ:- ನಮ್ಮ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕೆರೆಗಳು ಇವೆ.

ಶ್ರೀ ಎಸ್. ಬಂಗಾರಪ್ಪ:- ಕೋಲಾರ ಜಿಲ್ಲೆಯಲ್ಲಿ ಮಳೆ ಬಂದು, ಕೆರೆಗಳು ಒಡೆದು ಹೋಗಬೇಕೆ. ಕೆಲವು ಭಾಗದಲ್ಲಿ ಒಡೆದು ಹೋಗಿವೆ. ಕೆರೆಗಳಲ್ಲಿ ಹಲವಾರು ವರ್ಷಗಳಿಂದ ತುಂಬಿರುವ ಮಣ್ಣನ್ನು ಹೂಳು ಎತ್ತುವ ಕಾರ್ಯವನ್ನು ಆಗತ್ಯವಾಗಿ ಮಾಡಬೇಕಾಗಿದೆ. ಹಿಂದೆ ಇದರ ಬಗೆ ಮಾತನಾಡುವಾಗ, ಇದು ಅನ್‌ಎಕನಾಮಿಕ್, ನಿರರ್ಥಕ ಎಂದು ಮಾತನಾಡಿದ್ದೇವೆ. ತಮಿಳುನಾಡಿನಲ್ಲಿ ಮಾಡಿ ಸುಮ್ಮನಾಗಿದ್ದಾರೆ ಎಂದು ಹೇಳಿದ್ದೇವೆ. "Desilting of tanks is uneconomical,' about this I beg to differ from you.

1954-56 ರಲ್ಲಿ ಸಿಲೋನ್‌ನಲ್ಲಿ ಮಾಡಿದ್ದಾರೆ, ಬಹಳ ಸಕ್ಸೆಸ್‌ಫುಲ್ ಆಗಿ ಮಾಡಿದ್ದಾರೆ. ಕೆರೆಗಳಲ್ಲಿರತಕ್ಕ ಮಣ್ಣು, ಇದಕ್ಕೆ "ಟಾಪ್ ಸಾಯಿಲ್" "ಗೋಡು" ಎಂದು ಕರೆಯುತ್ತಾರೆ. ಗೊಬ್ಬರಕ್ಕೆ

ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆ ಇದಕ್ಕೂ ಇದೆ. ಇದನ್ನು ಮಾರಾಟ ಮಾಡಿದರೂ ಉತ್ಪನ್ನ ಬರುತ್ತದೆ. ಮಳೆಗಾಲದಲ್ಲಿ ಕೆರೆಗಳು ತುಂಬಿದಂತೆ ಕಾಣುತ್ತವೆ. ಒಂದು ಸಾರಿ ತೂಬು ಎತ್ತಿದರೆ, ಸ್ವಲ್ಪ ದಿವಸದಲ್ಲಿಯೇ ಮಣ್ಣು ಕಾಣಿಸುತ್ತದೆ. ಈ ಹೂಳು ಎತ್ತುವಂಥ ಕೆಲಸವನ್ನು ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗಿದೆ. ವರ್ಲ್ಡ್ ಬ್ಯಾಂಕ್ ಇರಬಹುದು, ಏನೇ ಇರಬಹುದು....

ಅಧ್ಯಕ್ಷರು:- ಮೊನ್ನೆ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದಾಗ,ಮುಖ್ಯ ಮಂತ್ರಿಗಳು ಅವರ ಜೊತೆ ಇದ್ದಾಗ, ಇದೇ ಸಲಹೆ ಕೊಟ್ಟರು ನಮ್ಮಲ್ಲಿ ಕೆರೆಗಳನ್ನು ಕಟ್ಟಿಸತಕ್ಕ ಶಕ್ತಿ ಇಲ್ಲ. ಸಂಪನ್ಮೂಲಗಳ ಅಭಾವ ಇದೆ. ನಾವು ಮಾಡಬಹುದಾದಂಥಾದ್ದು ಇರತಕ್ಕ ಕೆರೆಗಳ ಹೂಳು ಎತ್ತಿ ಹಾಕಿಸಿ, ಅವುಗಳು ಉಪಯೋಗಕ್ಕೆ ಬರತಕ್ಕ ಹಾಗೆ ಮಾಡಿದರೆ, ಬೇಕಾದಷ್ಟು ನೀರು ರೈತಾಪಿ ಜನರಿಗೆ ಸಿಗುತ್ತದೆ. ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ, ಆದ್ಯತೆ ಕೊಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ಈ ಸಮಸ್ಯೆ ಇದೆ. ಹೊಸ ಕೆರೆಗಳನ್ನು ಕಟ್ಟಲಿಕ್ಕೆ ಜಾಗ ಇಲ್ಲ, ದುಡ್ಡೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ ತಮ್ಮ ಅಭಿಪ್ರಾಯವನ್ನು ನಾವೆಲ್ಲರೂ ಕೂಡ ಮಾನ್ಯತೆ ಮಾಡುತ್ತೇವೆ, ಏಕೆಂದರೆ ಅದು ಅನುಭವಿಸಿರತಕ್ಕಂಥ ವಿಚಾರ.

MR. SPEAKER:- I hope you are revising the policy of the Government. So far disilting was an uneconomical work.

ಶ್ರೀ ಹೆಚ್. ಏಕಾಂತಯ್ಯ:- ಹಣ ಏನು ಇಟ್ಟಿದ್ದಾರೆ ಅದನ್ನು ನೋಡಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು: ಈ ವರ್ಷವೇ ಆಗದೇ ಇರಬಹುದು...

ಶ್ರೀ ಎಸ್. ಬಂಗಾರಪ್ಪ:- ಈ ವಿಚಾರದಲ್ಲಿ ಯಾವುದೇ ರೀತಿಯ ಒಂದು ಯೋಜನೆಯನ್ನು ಹಾಕಿ, ಈ ಕೆರೆಗಳ ಹೂಳು ಎತ್ತತಕ್ಕ ಕೆಲಸವನ್ನು ಮಾಡದೇ ಇದ್ದರೆ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ನಾವು ಉತ್ತೇಜನ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ ಮಳೆ ಬಂದಾಗ ಮೇಲಿನಿಂದ ಸಿಲ್ಟ್ ಹರಿದುಕೊಂಡು ಬರತಕ್ಕ ವಿಚಾರ ಇರುತ್ತದೆ. ಅದಕ್ಕೆ ಅಡ್ಡಗೋಡೆ ಹಾಕಬೇಕಾದ್ದು ಇರುತ್ತದೆ. ಕೆರೆಗೆ ಸಿಲ್ಟ್ ಬರತಕ್ಕದ್ದನ್ನು ನಿಲ್ಲಿಸಬೇಕಾಧರೆ, ಅದಕ್ಕೆ ಒಂದು ಅಡ್ಡಗೋಡೆ ಕಟ್ಟಬೇಕು. ಅದನ್ನು ಕಟ್ಟಲಿಕ್ಕೆ ದುಡ್ಡುಬೇಕು. ಈಗ ಹೊಸ ಯೋಜನೆ ಮಾಡುವ ಬದಲು ಆ ಕೆರೆಯಲ್ಲಿರುವಂಥ ಸಿಲ್ಟ್ ತೆಗೆದು ಮೇಲೆ ಹಾಕತಕ್ಕ ವಿಚಾರ ಮಾಡುವುದರ ಬಗ್ಗೆ ಗಮನ ಕೊಡಬೇಕು. ತಮ್ಮ ಅಭಿಪ್ರಾಯದ ಆಧಾರದ ಮೇಲೆ, ಮುಂದೆ ಬರತಕ್ಕ ದಿನಗಳಲ್ಲಿ ಹೊಸ ಯೋಜನೆಯನ್ನು ಹಾಕಬೇಕು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆ ಒಂದು ಪ್ರಯತ್ನದಲ್ಲಿ ನಾವೆಲ್ಲರೂ ಸೇರಿ ಭಾಗಿಯಾಗೋಣ. ನಾವು ಈ ವಿಚಾರವನ್ನು ಗಮನದಲ್ಲಿಟ್ಟಾಗ ನಮಗನಿಸುತ್ತದೆ. ನಾವು ಕೆಲವು ವಿಚಾರದಲ್ಲಿ ತಪ್ಪು ಮಾಡಿದ್ದೇವೆಯೋ ಏನೋ ಎಂದು ನನ್ನ ಭಾವನೆ. ಹಿಂದಿನ ನಮ್ಮ ಕೆಲವು ಯೋಜನೆಗಳು, ವಿಚಾರಧಾರೆಗಳು ಇವೆಲ್ಲವನ್ನೂ ಕೂಡ ನೋಡಿದಾಗ ಕೆಲವು ವಿಚಾರದಲ್ಲಿ ಕೃಷಿಗೆ ಸಂಬಂಧಪಟ್ಟ ಹಾಗೆ ನಮಗೆ ಬೇರೆ ಕಡೆ ಅಷ್ಟೇ ತೊಂದರೆಗಳು ಅಂಟಿಕೊಂಡಿದೆ. ಇದು ಒಂದು ತರಹ ಪಾರ್ಥೇನಿಯಂ ರೋಗ ಇದ್ದಹಾಗೆ, ನಾವೇನೋ ಗೋಧಿಯನ್ನು ತರಿಸಲಿಕ್ಕೆ ಹೋಗಿ ಅದರ ಜೊತೆಗೆ ಒಂದು ಹುಲ್ಲು ಬಂದು ಎಲ್ಲಾ ಕಡೆ ಬೆಳೆದು ಕೊಂಡು ಬಿಟ್ಟಿದೆ.

ಶ್ರೀ ಹೆಚ್. ಏಕಾಂತಯ್ಯ:- ನಮ್ಮಲ್ಲಿ ಇದಕ್ಕೆ ಕಾಂಗ್ರೆಸ್ ಹುಲ್ಲು ಎಂದು ಹೇಳುತ್ತಾರೆ.

ಅಧ್ಯಕ್ಷರು:- ಒಂದೊಂದು ರಾಜ್ಯದಲ್ಲಿ ಒಂದೊಂದು ಹೆಸರು ಇದೆ.

ಶ್ರೀ ಬಿ.ಎಂ. ಇದಿನಬ್ಬ:- ಕಮ್ಯೂನಿಸ್ಟ್ ರಾಜ್ಯದಲ್ಲಿ ಕಮ್ಯೂನಿಸ್ಟ್ ಹುಲ್ಲು ಎಂದು ಹೇಳುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: ನಮ್ಮಲ್ಲಿ ಕಾಂಗ್ರೆಸ್ ಹುಲ್ಲು. ಕಾಂಗ್ರೆಸ್ ಜಾಲಿ ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ:- ಅವೆಲ್ಲಾ ಹಳೆಯ ಹುಲ್ಲು ಆಗಿದೆ, ಅದನ್ನು ಏತಕ್ಕೆ ಈಗ ಎತ್ತುತ್ತಿದ್ದೀರಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ನೀರಾವರಿಗೆ ಸಂಬಂಧಪಟ್ಟ ಹಾಗೆ ನಾವು ಹೆಚ್ಚಿನ ಉತ್ಪನ್ನ ಪರ್ ಹೆಕ್ಟೇರ್‌ಗೆ ಏನು ತೆಗೆಯಬೇಕು ಅದನ್ನು ತೆಗೆಯಲಿಕ್ಕೆ ಆಗಿಲ್ಲ. ನಮ್ಮಲ್ಲಿರತಕ್ಕ ಏರಿಯಾ ನಾವು ಟೋಟಲ್ ಲೆಕ್ಕ ಹಾಕಿದರೆ ಏಕರೇಜ್ ಇಳುವರಿ ಕಡಿಮೆಯಾಗುತ್ತದೆ. ಟೋಟಲ್ ಏರಿಯಾ ಆಫ್ ದಿ ಲ್ಯಾಂಡ್ ಜಿಯಾಗ್ರಾಫಿಕಲ್ ಏರಿಯಾ ಕರ್ನಾಟಕದ ಒಟ್ಟು ಪ್ರದೇಶ ಏನಿದೆ ಅದರಲ್ಲಿ

10,501 ಹೆಕ್ಟೇರು ಕಲ್ಟಿವೇಷನ್ ಇರತಕ್ಕಂತಾದ್ದು ಇದೆ, ಗ್ರಾಸ್ 11,800 ಚಿಲ್ಲರೆ ಹೆಕ್ಟೇರ್ಸ್ ಇದರಲ್ಲಿ 3,061 ಸಾವಿರ ಹೆಕ್ಟೇರ್ ಬರೀ ಫಾರೆಸ್ಟ್ ಬರುತ್ತದೆ, ಇದರಲ್ಲಿ ಆಗ್ರೋ ಕ್ಲೈಮಾಟಿಕ್ ಜೋನ್ ಪ್ರಕಾರ ನಾವು ನೋಡಿದರೆ ತಾಲ್ಲೂಕುಗಳು ಎಷ್ಟೆಷ್ಟೋ ಇವೆ, 16-17 ಈ ತರಹ ತಾಲ್ಲೂಕುಗಳು ಎಲ್ಲಾ ಬರುತ್ತವೆ, ಸುಮಾರಾಗಿ ಸಾಯಿಲ್ ಕಂಡೀಷನ್ ಕೂಡ ಒಳ್ಳೆಯದು ಇದೆ ಎಂದು ಇಟ್ಟು ಕೊಂಡರೂ ಕೂಡ ನನಗನಿಸುತ್ತದೆ, ಸಾಯಿಲ್ ಕಂಡೀಷನ್ ಪ್ರಕಾರ ನಾವುಭತ್ತ ಮೈನ್ ಆಗಿ ಇಟ್ಟುಕೊಂಡು ಹೋಗುತ್ತಿದ್ದೇವೆ.

ಇನ್ನೊಂದು ಕಡೆಗೆ ಜೋಳ ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಅದರ ಕಡೆಗೆ ಹೆಚ್ಚಾಗಿ ಗಮನವನ್ನು ಕೊಡುತ್ತಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ ಈಗಾಗಲೇ ಬದಲಾವಣೆಯಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಈಗ ಯಾವ ಮಟ್ಟಕ್ಕೆ ಇದು ಹೋಗಿದೆ ಬೆಳೆವಣಿಗೆ ಅಂದರೆ ಭತ್ತವನ್ನು ಒಂದು ಹೆಕ್ಟೇರ್‌ಗೆ ಎಷ್ಟು ತೆಗೆದುಕೊಳ್ಳುತ್ತೇವೆ ಅಂಧರೆ, Karnataka was the leading State among southern states. Now we have been driven back to the third position so far as southern states are concerned.

ಈಗಾಗಲೇ ಆಂಧ್ರಪ್ರದೇಶದವರು ಮತ್ತು ತಮಿಳುನಾಡಿನವರು ನಮ್ಮನ್ನು ಹಿಂದೆ ಹಾಕಿ ಮುಂದೆ ಹೋಗಿದ್ದಾರೆ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳನ್ನು ನಾವು ಬೀಟ್ ಮಾಡುವುದಕ್ಕೆ ಆಗುವುದಿಲ್ಲ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ಒಳ್ಳೆಯದೆಂದು ಭಾವನೆಯನ್ನು ಇಟ್ಟುಕೊಂಡಿದ್ದೇನೆ. ಆ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಒಳಿತು ಆಗಬಹುದೆಂದು ನನ್ನ ಭಾವನೆ. ಪ್ರೊಡೆಕ್ಟಿವಿಟಿ ಹೆಚ್ಚು ಮಾಡಿ ಪ್ರೊಡೆಕ್ಷನ್ ಜಾಸ್ತಿ ತೆಗೆದುಕೊಳ್ಳಬೇಕೆಂದು ಇದ್ದರೆ ಅದರಲ್ಲಿ ನಾವು ಎಲ್ಲಿ ಫೇಲಾಗಿದ್ದೇವೆ ಅದನ್ನು ಗುರುತಿಸತಕ್ಕದ್ದು ಅವಶ್ಯಕತೆಯಿದೆ. ಒಟ್ಟು ಆಲ್ ಇಂಡಿಯಾ ಲೆವಲ್‌ನಲ್ಲಿ ಒಟ್ಟು ಕಲ್ಟಿವೇಟಿವ್ ಲ್ಯಾಂಡ್ ಏನಿದೆ ಅದರಲ್ಲಿ 3 ಪರ್ಸೆಂಟ್ ಆಫ್ ದಿ ಟೋಟಲ್ ಏರಿಯಾ ನಮಗೆ ಬರುತ್ತದೆ. ಸುಮಾರು 1.16 ಮಿಲಿಯನ್ ಹೆಕ್ಟೇರ್ ನಮ್ಮ ಕರ್ನಾಟಕ ರಾಜ್ಯದ್ದು ರೈಸ್ ಏರಿಯಾ ಬರುತ್ತದೆ. ನಾನು ಉದಾಹರಣೆಗೆ ಹೇಳುತ್ತಿದ್ದೇನೆ ಪ್ರೊಡಕ್ಷನ್ ಅನ್ನು ಲೆಕ್ಕ ಹಾಕಿದರೆ 1.95 ಮಿಲಿಯನ್ ಟನ್ ಅಂದರೆ ಸುಮಾರು 5% ಪರ್ಸೆಂಟ್ ಆಫ್ ದಿ ಟೋಟಲ್ ಔಟ್ ಪುಟ್ ನ್ಯಾಷನಲ್ ಆವರೇಜ್ ನ್ಯಾಷನಲ್ ಲೆವೆಲ್ ಅಲ್ಲಿಗೆ ನಾವು ಬರುತ್ತೇವೆ. ಅದೇ ಆಂಧ್ರಪ್ರದೇಶದ್ದು ಏನಿದೆ ಅದು 11 ಪರ್ಸೆಂಟ್‌ಗೆ ಹೋಗಿದೆ. ಅನಂತರ ತಮಿಳುನಾಡು 13 ಪರ್ಸೆಂಟ್ ಹೋಗಿದೆ. ನಾವು ಮಾತ್ರ 5 ಪರ್ಸೆಂಟ್‌ನಲ್ಲಿ ಇದ್ದೇವೆ. ನಾವು ಪಂಜಾಬ್‌ನ್ನು ಲೆಕ್ಕ ಹಾಕಿದರೆ ಅವರು ಎಲ್ಲರನ್ನೂ ಹಿಂದಕ್ಕೆ ಹಾಕಿ ಮುಂದಕ್ಕೆ ಹೋಗಿದ್ದಾರೆಂದು ಹೇಳತಕ್ಕದ್ದು ಅವಶ್ಯಕತೆಯಿಲ್ಲ. ಯಿಲ್ಡ್ ಬಹಳ ಮುಖ್ಯವಾಗಿರತಕ್ಕ ವಿಚಾರ ಯಿಲ್ಡ್ ಎಷ್ಟು ಕೆ.ಜಿ. ಬರುತ್ತದೆ ಎನ್ನುವುದನ್ನು ಉದಾಹರಣೆ ಕೊಡುತ್ತಿದ್ದೇನೆ. ಕರ್ನಾಟಕ 1986-87ರಲ್ಲಿ 1955 ಕೆ.ಜಿ. ಪರ್ ಹೆಕ್ಟೇರ್. ನಾವು ಪಂಜಾಬನ್ನು ತೆಗೆದುಕೊಂಡರೆ 3329 ಕೆ.ಜಿ. ಪರ್ ಹೆಕ್ಟೇರ್‌ಗೆ ಬರುತ್ತದೆ. ಅಷ್ಟೊಂದು ವ್ಯತ್ಯಾಸ ಬರುತ್ತದೆ. ತಮಿಳುನಾಡು 2780 ಕೆ.ಜಿ. ಪರ್ ಹೆಕ್ಟೇರ್ ಬರುತ್ತದೆ. ಅನಂತರ ಆಂಧ್ರಪ್ರದೇಶ 1965 ಕೆ.ಜಿ. ಪರ್ ಹೆಕ್ಟೇರ್ ಬರುತ್ತದೆ.

ಅನಂತರ ಜವರ್ ಬಹಳ ಮುಖ್ಯವಾಗಿರತಕ್ಕದ್ದು. ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಬೆಳೆ ಬೆಳೆಯುತ್ತಾರೆ. ಕಾಟನ್ ಜವರ್ ಹೆಚ್ಚಾಗಿ ಅಲ್ಲಿ ಬೆಳೆಯತಕ್ಕವರು ಇದ್ದಾರೆ. ಅದು ಅಲ್ಲಿ ಪ್ರಮುಖವಾಗಿರತಕ್ಕ ಬೆಳೆಯೂ ಸಹ ಆಗಿದೆ. ಟೋಟಲ್ ಏರಿಯಾವನ್ನುನಾವು ಲೆಕ್ಕ ಹಾಕಿದರೆ ನಾವು 15 ಪರ್ಸೆಂಟ್ ಇದ್ದೇವೆ. ಅದನ್ನು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮಹಾರಾಷ್ಟ್ರದ್ದು 33 ಪರ್ಸೆಂಟ್ ಇದೆ. ಆಂಧ್ರಪ್ರದೇಶದ್ದು 15 ಪರ್ಸೆಂಟ್ ಇದೆ. ತಮಿಳುನಾಡು 4 ಪರ್ಸೆಂಟ್ ಇದೆ. ಹೀಗೆಲ್ಲ ಪರ್ಸೆಂಟೇಜ್ ಇದೆ.

ಈಗ 86-87 ರಲ್ಲಿ 15 ಪರ್ಸೆಂಟ್‌ಗೆ ನಾವಿದ್ದೇವೆ. ಜವಾರ್ ಉತ್ಪಾದನೆಯಲ್ಲಿ 86-87ರಲ್ಲಿ 21 ಪರ್ಸೆಂಟ್‌ನಲ್ಲಿದ್ದೇವೆ. ಜವಾರ್ ಕೆ.ಜಿ.ಪರ್ ಹೆಕ್ಟೇರ್ ಹೇಳುವುದಾದರೆ ನಾವು 775 ಕೆ.ಜಿ. ಇದ್ದರೆ ಪಂಜಾಬ್ 1000 ಕೆ.ಜಿ. ವರೆಗೂ ಹೋಗಿದೆ. ಇದು 86-87ರಲ್ಲಿ. ನಮ್ಮಲ್ಲಿ ರಾಗಿ

ಜೋವಾರ್, ಹತ್ತಿ, ಭತ್ತ ಏರಿಯ ಬಗ್ಗೆ ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ. ರಾಗಿಯ ವಿಚಾರದಲ್ಲಿ ನಮ್ಮ ಏರಿಯಾ ಕೂಡ ಹೆಚ್ಚು ಆಗಿಲ್ಲ. ಮೊದಲು ಎಷ್ಟು ಏರಿಯಾ ಇತ್ತೋ ಈಗಲೂ ಅಷ್ಟೇ ಇದೆ. ಇದರಲ್ಲಿ ಯಾವುದೇ ವ್ಯತ್ಯಾಸವೂ ಆಗಿಲ್ಲ. ರಾಗಿಯಲ್ಲಿ ಈಲ್ಡ್ ಪರ್ ಹೆಕ್ಟೇರ್ ಕರ್ನಾಟಕದಲ್ಲಿ 1328 ಇದ್ದರೆ ತಮಿಳುನಾಡಿನಲ್ಲಿ 1552 ಕೆ.ಜಿ.ಗೆ ಮುಟ್ಟಿದ್ದಾರೆ. ಇದೇ ರೀತಿ ಜೋಳ ಕೂಡ.

ಇನ್ನು ಏಕದಳ ಧಾನ್ಯಗಳ ವಿಚಾರದಲ್ಲಿ ಹೇಳುವುದಾದರೆ ಆಲ್ ಇಂಡಿಯಾ ಲೆವಲ್‌ನಲ್ಲಿ 6056 ಕೆ.ಜಿ. ತಮಿಳುನಾಡು 5 ಪರ್ಸೆಂಟ್, ಮಹಾರಾಷ್ಟ್ರ 10 ಪರ್ಸೆಂಟ್, ಆಂಧ್ರ 8 ಪರ್ಸೆಂಟ್ ಇದೆ. ನಾವು 70-71ನೇ ಇಸವಿಯಲ್ಲಿ ಎಷ್ಟು ಪರ್ಸೆಂಟ್ ಇದ್ದೆವೋ ಈಗಲೂ ಅಷ್ಟೇ ಪರ್ಸೆಂಟ್ ಮತ್ತು ಅಷ್ಟೇ ಏರಿಯ ಇದ್ದೇವೆ. ಯಾವ ಬದಲಾವಣೆಯೂ ಆಗಿಲ್ಲ. ಇದೇ ರೀತಿ ಪ್ರೊಡಕ್ಷನ್‌ನಲ್ಲಿ ನಾವು 70-71ರಲ್ಲಿ 6 ಪರ್ಸೆಂಟ್ ಇದ್ದರೆ, 86-87ರಲ್ಲಿ 5 ಪರ್ಸೆಂಟ್ ಆಗಿದ್ದೇವೆ. ಅಂದರೆ ಒಂದು ಪರ್ಸೆಂಟ್ ಕಡಿಮೆಯಾಗಿದೆ. ಫುಡ್‌ಗ್ರೈನ್ಸ್ ಬಗ್ಗೆ ಹೇಳುವುದಾದರೆ 86-87ರಲ್ಲಿ ಕೆ.ಜಿ.ಪರ್ ಹೆಕ್ಟೇರ್ 1100 ನಮ್ಮ ಕರ್ನಾಟಕದ್ದು ಇದ್ದರೆ, ಹರಿಯಾಣದಲ್ಲಿ 2071 ಕೆ.ಜಿ. ಪಂಜಾಬ್‌ನಲ್ಲಿ 3347 ಕೆ.ಜಿ. ಇದೆ. ನಮ್ಮೆಲ್ಲರಿಗಿಂತಲೂ ಪಂಜಾಬ್‌ನವರು ಬಹಳ ಮುಂದೆ ಹೋಗಿದ್ದಾರೆ. ತಮಿಳುನಾಡಿನವರೂ ಕೂಡ ನಮಗಿಂತ ಮುಂದೆ ಹೋಗಿದ್ದಾರೆ. ಈ ಸಾರಿ ನಾವು ಹೇಳುವುದಾದರೆ ವ್ಯವಸಾಯದಲ್ಲಿ ನಾವು ಸುವರ್ಣ ಯುಗದಲ್ಲಿದ್ದೇವೆ. ನಾನು ಈ ವಿಚಾರದಲ್ಲಿ ಕೇವಲ ಒಂದೆರಡು ಅಂಶಗಳನ್ನು ಮಾತ್ರ ಹೇಳಿದ್ದೇನೆ. ನನ್ನ ಹತ್ತಿರ ಇನ್ನೂಬಹಳ ವಿವರಗಳಿವೆ. ನಾನು ತಮಗೆ ಹೇಳುತ್ತೇನೆ, ನಾವು ಇದೇ ರೀತಿಯಲ್ಲಿ ಹೋದರೆ ಕೃಷಿ ರಂಗದಲ್ಲಿ ನಾವು ನಮ್ಮ ಗುರಿಯನ್ನು ಮುಟ್ಟುತ್ತೇವೆಯೋ ಎಂಬ ಅನುಮಾನ ಬರುತ್ತದೆ. ಕೃಷಿ ರಂಗದಲ್ಲಿ ನಾವು ಯಾವಾಗ ಸಾಧನೆಯನ್ನು ಮಾಡುತ್ತೇವೋ ಗೊತ್ತಾಗುವುದಿಲ್ಲ. ಇದಕ್ಕೆ ಒಂದು ಹೊಸ ವಿಚಾರಧಾರೆಯನ್ನು ಇಟ್ಟು ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕಾಗುತ್ತಿಲ್ಲ. ನಾನು ತಮಗೆ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದಲ್ಲಿ ಟಾಟಾ, ಬಿರ್ಲಾ, ಡಾಲ್ಮಿಯರಂಥವರು ಇರತಕ್ಕ ಸಮಾಜ ಒಂದು ಕಡೆ ಇದ್ದರೆ ಇನ್ನೊಂದು ಕಡೆ ಬಡವರಲ್ಲೂ ಅತಿ ಬಡವರಾದ ಜನ ಇರತಕ್ಕ ಸಮಾಜ. ನಾವು ಕೇವಲ ಟಾಟಾ ಬಿರ್ಲಾರವರನ್ನೇ ನೋಡಿ ಏನನ್ನೋ ಹೇಳುವುದಕ್ಕೆ ಆಗುವುದಿಲ್ಲ. ಬಡತನ ರೇಖೆಯಿಂದ ಕೆಳಗಡೆ ಇರತಕ್ಕ ವ್ಯಕ್ತಿಯಿಂದ ನಾವು ಪ್ರಾರಂಭ ಮಾಡತಕ್ಕ ವಿಚಾರಧಾರೆ ಇದು ಆಗಿರಬೇಕು. ಇಲ್ಲದಿದ್ದರೆ ನಮ್ಮ ತಕ್ಕಡಿ ಹೆಚ್ಚೂ ಕಡಿಮೆ ಹೊಡೆಯುತ್ತದೆ. ಈ ವಿಚಾರವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ. I am glad to announce that Karnataka is the leading State in sunflower cultivation. ಅತಿ ಹೆಚ್ಚಿನ ಬೆಳೆಯನ್ನು ತೆಗೆಯುತಕ್ಕ ರಾಜ್ಯ ಎಂದರೆ ನಮ್ಮ ಕರ್ನಾಟಕ ರಾಜ್ಯ ಏರಿಯಾದಲ್ಲಿಯೂ ಕೂಡ ನಮ್ಮದು ಹೆಚ್ಚು ಇದೆ. ಮುಂದಿನ 8 ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಣ್ಣೆಯ ಕೊರತೆ ನಮ್ಮ ರಾಷ್ಟ್ರದಲ್ಲಿ ಏನು ಇರಬಹುದೆಂದು ಯೋಚನೆ ಮಾಡಿ ಸೂರ್ಯಕಾಂತಿಯನ್ನು ಬೆಳೆಯುವುದಕ್ಕೆ ನಾವು ಬೆಂಬಲವನ್ನು ಕೊಡುತ್ತಿದ್ದೇವೆ. ಮಧ್ಯಪ್ರದೇಶದಲ್ಲಿ ಸೋಯಾಬೀನ್ ಬೆಳೆಯುವುದರಲ್ಲಿ ಅತಿ ಮುಂದಿದ್ದಾರೆ, ಕಡ್ಲೆಕಾಯಿಯನ್ನು ಬೆಳೆಯುವುದರಲ್ಲಿ ಗುಜರಾತ್, ಭತ್ತವನ್ನು ಬೆಳೆಯುವುದರಲ್ಲಿ ಪಂಜಾಬ್ ಮತ್ತು ಹರ್ಯಾಣ ಅತಿ ಮುಂದಿವೆ. ನಾವು ಜೋಳ, ಹತ್ತಿ, ಕಬ್ಬು, ರಾಗಿ ಮುಂತಾದುವನ್ನು ಬೆಳೆಯುವುದರ ಜೊತೆಗೆ ಸೂರ್ಯಕಾಂತಿಯನ್ನೂ ಕೂಡ ಬೆಳೆಯುವುದರಲ್ಲಿ ನಾವು ಬಹಳ ಮುಂದಿದ್ದೇವೆ. ಕಬ್ಬನ್ನು ಬೆಳೆಯುವ ವಿಚಾರದಲ್ಲಿ ಉತ್ತರ ಪ್ರದೇಶದ ಲಾಬಿ ಇದೆ, ಮಹಾರಾಷ್ಟ್ರ ಲಾಬಿ ಇದೆ. ಆದರೆ ಈ ಲಾಬಿಯ ವಿಚಾರದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ನಮ್ಮದು ಈಲ್ಡ್ ದೃಷ್ಟಿಯಿಂದ ಪರವಾಗಿಲ್ಲ. ನಮ್ಮ ಭೂಮಿಗೆ ತಕ್ಕಹಾಗೆ ಯಿಲ್ಡ್ ಜಾಸ್ತಿ ಮಾಡಬೇಕು. ಅನಂತರ ನಮ್ಮ ರೈತರದು ಪ್ರೈಯಾರಿಟಿ ಏನೇನು ಎನ್ನತಕ್ಕಂಥದ್ದು ಸರಿಯಾಗಿ ಸ್ಪಷ್ಟವಾಗಿ ಗುರುತುಮಾಡಿ ಈ ಕ್ಷೇತ್ರಕ್ಕೆ ಹೆಚ್ಚಿನ ಬೆಂಬಲವನ್ನು ನಾವು ಕೊಡುತ್ತಾ ಹೋದರೆ ನಿಜವಾಗಿಯೂ ಇಂಥ ಬೆಳೆಗಳ ಕ್ಷೇತ್ರದಲ್ಲಿ ನಾವು ಹೆಚ್ಚಿನ ಔಟ್‌ಪುಟ್ ತೆಗೆಯಲಿಕ್ಕೆ ಸಾಧ್ಯವಾಗುತ್ತದೆ. ಪ್ರೊಡೆಕ್ಟಿವಿಟಿ ನಾವು ಜಾಸ್ತಿ ತೋರಿಸಲಿಕ್ಕೆ ಸಾಧ್ಯವಾಗುತ್ತವೆನ್ನತಕ್ಕಂಥ ಒಂದು ನಂಬಿಕೆಯನ್ನು ನಾನು

ಇಟ್ಟುಕೊಳ್ಳುತ್ತೇನೆ. ಸಭಾಧ್ಯಕ್ಷರೇ ನಾವು ಯಾವ ಯಾವ ಆಕ್ಷನ್ ಪ್ಲಾನ್ ತೆಗೆದುಕೊಳ್ಳಬೇಕು, ಇನ್‌ಸೆಂಟೀವ್ಸ್ ಏನು ಕೊಡಬೇಕೆನ್ನುವುದನ್ನು ನೋಡಬೇಕಾಗುತ್ತದೆ. ನಿಜ ಹೇಳಬೇಕಾದರೆ ಈಗ ಅಗ್ರಿಕಲ್ಚರಲ್‌ನ್ನು ಇಂಡಸ್ಟ್ರೀಯಾಗಿ ಕರೆಯಬೇಕೆ ಬೇಡವೇ ಎನ್ನತಕ್ಕಂಥ ಒಂದು ಚರ್ಚೆ ಈ ದೇಶದಲ್ಲಿ ನಡೆಯುತ್ತಿದೆ. Under the 8th Five Year Plan agriculture should be treated as an industry. ಎನ್ನತಕ್ಕಂಥದ್ದನ್ನು ಕೈಗಾರಿಕೆ ಕೃಷಿ ಕೈಗಾರಿಕೆಯಾಗಿ ಇದನ್ನು ಟ್ರೀಟ್ ಮಾಡಬೇಕೆಂದು ಭಾಷಣ ಮಾಡುವಾಗ ಹೇಳಿದರು. ನಮ್ಮ ಪ್ರೊ.ನಂಜುಂಡಸ್ವಾಮಿಯವರು ಒಂದು ಮಾತನ್ನು ಹೇಳಿದರು. ಇವತ್ತು ಸಿಕ್ ಇಂಡಸ್ಟ್ರೀಸ್ ರೋಗಗ್ರಸ್ತ ಕೈಗಾರಿಕೆ ಅಂದರೆ ಕೈಗಾರಿಕೆ ರೋಗಗ್ರಸ್ತ ಇರುತ್ತದೆ. ಆದರೆ ಮ್ಯಾನ್‌ಫ್ಯಾಕ್ಚರರ್ ಮಾತ್ರ ಅವರು ಆರೋಗ್ಯವಂತರಾಗಿರುತ್ತಾರೆ. ಇದರಲ್ಲಿ ಬಹಳ ಅರ್ಥವಿರುತ್ತದೆ. ತಮ್ಮ ಮುಖಾಂತರ ನಾನು ಅವರಿಗೆ ಅಭಿನಂದಿಸುತ್ತೇನೆ. ಇಂಡಸ್ಟ್ರಿ ಸಿಕ್ ಬಿದ್ದಾಗ, ರೋಗಗ್ರಸ್ತವಾದಾಗ ಅದಕ್ಕೆ ಬೇಕಾದಷ್ಟು ಸವಲತ್ತುಗಳನ್ನು ಕೊಡುತ್ತೇವೆ. ಅದೇ ರೀತಿ ಒಬ್ಬ ಕೃಷಿಕ, ಸಿಕ್ ಆದರೆ ಅವನಿಗೆ ಯಾವ ಒಂದು ಬೆಂಬಲವನ್ನು ಕೊಡುತ್ತಾರೆನ್ನತಕ್ಕಂಥ ವಿಚಾರವೇನಿದೆ ಅದಕ್ಕೆ ಪರ ವಿರೋಧ ಎರಡು ವಿಚಾರಗಳೂ ಕೂಡ ಇದ್ದಾವೆ. ಮೆರಿಟ್ಸ್ ಅಂಡ್ ಡಿ ಮೆರಿಟ್ಸ್ ಎರಡೂ ಇದೆ. ನಾನು ಈ ಸಂದರ್ಭದಲ್ಲಿ ಅದನ್ನು ಇಂಡಸ್ಟ್ರೀಯಾಗಿ, ಟ್ರೀಟ್ ಮಾಡಬೇಕೆ ಬೇಡವೇ ಎನ್ನತಕ್ಕಂಥ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಾನು ಇನ್ನೂ ಕೂಡ ಅದನ್ನು ಸ್ಟಡಿ ಮಾಡತಕ್ಕಂಥ ಸಂದರ್ಭದಲ್ಲಿ ಇದ್ದೇನೆ. ಏತಕ್ಕೆಂದರೆ ಇಂಡಸ್ಟ್ರೀಯಾಗಿ ಇದನ್ನು ಟ್ರೀಟ್ ಮಾಡಿದರೆ, ಕೆಲವು ಸವಲತ್ತುಗಳು ರೈತರಿಂದ ಕೈಬಿಡತಕ್ಕಂಥ ವಿಚಾರಗಳನ್ನು ನಾವು ಇದರಲ್ಲಿ ನೋಡಬೇಕಾಗಿದೆ. ಇದರ ಬಗ್ಗೆ ಸರ್ಕಾರದಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಗಂಟೆಗಟ್ಟಲೇ ಚರ್ಚೆ ಮಾಡಿದ್ದೇನೆ. ಒಂದು ಉದಾಹರಣೆ ನಾನು ಕೊಡುತ್ತೇನೆ. ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದರೆ ಅವರ ಆಸ್ತಿ ಮತ್ತೊಂದು ಇವೆಲ್ಲಾ ಕೇಳುತ್ತಾರೆ. ಅದೇ ಒಬ್ಬ ರೈತನಿಗೆ ಬೆಳೆ ಸಾಲ ಮತ್ತು ಡಾಕ್ಯುಮೆಂಟ್ಸ್ ಮೇಲೆ ಸಾಲ ಕೊಟ್ಟುಬಿಡುತ್ತಾರೆ. ಆದರೆ ಇಂಡಸ್ಟ್ರೀಯಾದರೆ ಕೊಡುವುದಿಲ್ಲ. ಉದಾಹರಣೆಗೆ ನಾನು ಹೇಳುವುದು ಬೇಕಾದಷ್ಟು ಪರ ಮತ್ತು ವಿರೋಧ ಅಭಿಪ್ರಾಯಗಳು to treat this agriculture as an industry or not ಎನ್ನತಕ್ಕಂಥ ವಿಚಾರದಲ್ಲಿ ನಾನು ಹೇಳಿದೆ. ಮಾನ್ಯ ಸಭಾಧ್ಯಕ್ಷರೇ ತಮಗೆಲ್ಲಾ ಗೊತ್ತಿರುವ ಹಾಗೆ ಸೀಡ್ ಏಜನ್ಸಿ ಬಹಳ ಪ್ರಮುಖವಾದ ವಿಚಾರ. ಈಗ ಕರ್ನಾಟಕ ಸೀಡ್ ಕಾರ್ಪೊರೇಷನ್ ನಾವು ಇಟ್ಟುಕೊಂಡಿದ್ದೇವೆ. ಈ ವಿಚಾರದಲ್ಲಿ ದೊಡ್ಡ ದೊಡ್ಡ ಪ್ರೈವೇಟ್ ಜನ ಅವರು ಮಾಡತಕ್ಕಂಥದ್ದನ್ನು ನೋಡಿದರೆ ಅವರು ಇದನ್ನು ಇಂಡಸ್ಟ್ರೀಯಾಗಿ ಮಾಡಿಬಿಟ್ಟಿದ್ದಾರೆ. ಈ ಬೀಜಗಳ ವ್ಯವಹಾರ ಅಂದರೆ ಅವರು ಮಾಡತಕ್ಕಂಥದ್ದನ್ನು ನೋಡಿದರೆ ವ್ಯವಹಾರ ಅವ್ಯವಹಾರ ಎರಡು ಇದರಲ್ಲಿ ಸೇರಿಕೊಂಡಿದೆ. ಅದೇ ರೀತಿಯಲ್ಲಿ ಗೊಬ್ಬರದ್ದು ಕೂಡ ವ್ಯವಹಾರ ಅವ್ಯವಹಾರ ಇದೆಲ್ಲವೂ ಕೂಡ ಈ ರೀತಿಯಾಗಿ ನಾವು ಹೋಗಿಬಿಟ್ಟರೆ ನಾವು ಯಾವಾಗ ಅಭಿವೃದ್ಧಿಯಾಗುತ್ತೇವೆ? ಈಗ ಸಂಕರ ಬೀಜ ನಮ್ಮ ಹೈಬ್ರೀಡ್ ವೆರೈಟಿ ಎಂದು ಏನು ಹೇಳುತ್ತೇವೆ. ಅದು ಹತ್ತಿ ಬೀಜ ಇರಬಹುದು, ಭತ್ತ ಇರಬಹುದು, ರಾಗಿ ಇರಬಹುದು ಮತ್ತೊಂದು ಇರಬಹುದು. ಡಿಸಿಹೆಚ್ ಹತ್ತಿ ವಿಚಾರದ ಬಗ್ಗೆ ನಾನು ಮಾತನಾಡಿದರೆ ನಮ್ಮ ಜಮೀನಿನಲ್ಲಿಯೇ ಹಾಕಿದ್ದೇ. ಅರ್ಧ ಔಟ್ ಇನ್ನರ್ಧ ಹುಟ್ಟಲೇ ಇಲ್ಲ. ಎಷ್ಟು ಮೋಸ ಎಂದರೆ....

ಶ್ರೀ ಹೆಚ್. ಏಕಾಂತಯ್ಯ: ಗೌವರ್ನಮೆಂಟ್ ಡಿಪಾರ್ಟ್‌ಮೆಂಟ್‌ನವರು ಸಪ್ಲೈ ಮಾಡಿದ ಬೀಜ ಹುಟ್ಟಲೇ ಇಲ್ಲ. ನಾನು ಹೋದವರ್ಷ ಹತ್ತಿ ಹಾಕಿದ್ದೇನೆ. ಬೆಳೆದಿದ್ದೇನೆ. ಈ ವರ್ಷವೂ ಬೆಳೆಯುವವನಿದ್ದೇನೆ. ಬೇಕಾದರೆ ನಿಮಗೆ ತೋರಿಸುತ್ತೇನೆ ಬನ್ನಿ.

ಶ್ರೀ ಎಸ್.ಬಂಗಾರಪ್ಪ:- ನಾನು ಬರುವುದಕ್ಕೆ ರೆಡಿ ಇದ್ದೇನೆ. ಈ ವರ್ಷ ಒಳ್ಳೆಯ ಬೀಜ ರೈತರಿಗೆ ಸಿಕ್ಕಿದೆ ಎಂದು ಭಾವಿಸುತ್ತೇನೆ. ಉತ್ತಮವಾದ ಬೀಜವನ್ನು ಮುಂದಿನ ವರ್ಷವೂ ಕೊಡುತ್ತೇವೆ ಇಷ್ಟು ಮಾತ್ರ ಹೇಳುತ್ತೇನೆ. ಇಲ್ಲಿ ಒಂದು ವಿಚಾರ ಮಾನ್ಯ ಏಕಾಂತಯ್ಯನವರು ಹೇಳಿದ ಹಾಗೆ ಸರ್ಕಾರದಿಂದ ಸೀಡ್ ಪ್ರೊಡಕ್ಷನ್ ಹೆಚ್ಚು ಮಾಡಲಿಕ್ಕೆ ಇರುವ ಸಮಸ್ಯೆ ತಮಗೆ ಗೊತ್ತಿದೆ. ನಾನು 3-4 ಕ್ಷೇತ್ರಗಳನ್ನು ಇಟ್ಟುಕೊಂಡಿರುತ್ತೇವೆ. ಸೀಡ್ ಕಾರ್ಪೊರೇಷನ್ ಮುಖಾಂತರ

ಫೌಂಡೇಷನ್ ಸೀಡ್ಸ್ ಎಂದು, ಬೇರೆ ಬೇರೆ ರೈತರು ಹಾಕತಕ್ಕಂಥದ್ದು ತಮಗೆಲ್ಲ ಗೊತ್ತಿದೆ. ನಾವು ಸೀಡ್ ಕಾರ್ಪೊರೇಷನ್ ಮುಖಾಂತರ ಬೆಳೆಯುತ್ತೇವೆ. ಅದೇ ರೀತಿಯಲ್ಲಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ವ್ಯಾಪ್ತಿಗೆ ಬರತಕ್ಕಂಥ ಇಲಾಖೆಯಲ್ಲಿ ಬೆಳೆಯತಕ್ಕಂಥದ್ದನ್ನೆಲ್ಲ ನಾವು ಬೆಳೆಯುತ್ತೇವೆ. ನಾವು ಸೀಡ್ಸ್ ಕಾರ್ಪೊರೇಷನ್‌ನವರು ಬೆಳೆಯುತ್ತೇವೆ. ಅದೇ ರೀತಿ ಕೃಷಿ ನಿರ್ದೇಶಕರ ವ್ಯಾಪ್ತಿಯಲ್ಲಿ ಬರತಕ್ಕ ಕಡೆ ಬೆಳೆಯುತ್ತೇವೆ. ಅಗ್ರಿಕಲ್ಚರ್ ಯೂನಿವರ್ಸಿಟಿ ಮತ್ತು ಗೌರ್ನ್‌ಮೆಂಟ್ ಆಫ್ ಇಂಡಿಯಾದಿಂದ ಅಂದರೆ ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್‌ನವರು ಬೆಳೆಯುತ್ತಾರೆ. ಹೀಗೆ ಮೂರು ನಾಲ್ಕು ಕ್ಷೇತ್ರಗಳಿಂದ ಬೆಳೆಯುತ್ತೇವೆ. ಸರ್ಕಾರ ಕೊಡುವ ಬೀಜಗಳು ಹುಟ್ಟುವುದಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಆಡಿದರು. ಹಾಗಾದರೆ ಖಾಸಗಿಯವರು ಕೊಡತಕ್ಕ ಬೀಜಗಳು ಚೆನ್ನಾಗಿ ಹುಟ್ಟುತ್ತವೆ ಎಂಬ ಅರ್ಥ ಬರುತ್ತದೆ.

ಶ್ರೀ ಎಚ್. ಏಕಾಂತಯ್ಯ:- ಆ ಮಾತು ಹೇಳುತ್ತಿಲ್ಲ. ನೀವು ಏನು ಫೌಂಡೇಷನ್ ಸೀಡ್ಸ್ ಮಾರುತ್ತಿದ್ದೀರಿ ಅದು ರೈತರಿಗೆ ನೇರವಾಗಿ ಬರುತ್ತಿಲ್ಲ. ಅದರಲ್ಲಿ ಮೋಸ ಆಗುತ್ತಿದೆ. ನಮಗೆ ಕಳಪೆ ಬೀಜ ಕೊಟ್ಟು ಒಳ್ಳೆಯ ಬೀಜ ಬೇರೆ ಕಡೆ ಕೊಡುತ್ತಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್:-ಬೀಜದ ಬಗ್ಗೆ ಹೇಳಿದ್ದಾರೆ. ಪ್ರೈವೇಟ್ ಕಂಪನಿಯವರು ರೈತರಿಗೆ ಬೀಜ ಕೊಡುತ್ತಿದ್ದಾರೆ. ಕರ್ನಾಟಕ ಸೀಡ್ಸ್ ಕಾರ್ಪೊರೇಷನ್‌ನವರೂ ರೈತರಿಗೆ ಬೀಜ ಸ್ಯಾಂಪಲ್ ತೆಗೆದು ಸೀಲ್ ಮಾಡಿ ಕೊಡುತ್ತಾರೆ. ಇವರು ಕೊಟ್ಟಿರುವ ಬೀಜ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಸರ್ಟಿಫೈ ಮಾಡುತ್ತಾರೆ. ಪ್ರೈವೇಟ್ ಕಂಪನಿಯವರು ಹಾಗೆ ಮಾಡುವುದಿಲ್ಲ. ಉತ್ತಮವಾದ ಬೀಜವನ್ನು ಫೈಲ್ಯೂರ್ ಆಗಿದೆ ಎಂದು ಸರ್ಟಿಫೈ ಮಾಡಿ ಕೋಟ್ಯಾಂತರ ರೂಪಾಯಿ ರೈತರ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ರಾಣೆಬೆನ್ನೂರಿನಲ್ಲಿ ಈ ಘಟನೆ ನಡೆದಿದೆ. ಬಹುತೇಕ ವಿಚಾರಗಳು ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿರಬಹುದು.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಹುರುಳಿಲ್ಲ ಎಂದು ಹೇಳುವುದಿಲ್ಲ. ಕರ್ನಾಟಕ ಸ್ಟೇಟ್ ಸೀಡ್ಸ್ ಕಾರ್ಪೊರೇಷನ್ ಏನಿದೆ ಅದರ ಬಗ್ಗೆ ಒಳ್ಳೆಯ ಆಭಿಪ್ರಾಯ ಇದೆ. ತಮಿಳುನಾಡಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಕರ್ನಾಟಕ ಸ್ಟೇಟ್ ಸೀಡ್ಸ್ ಕಾರ್ಪೊರೇಷನ್ ಬೀಜ ಒಳ್ಳೆಯದು ಎಂಬ ದೃಷ್ಟಿಯಿಂದ ಕಳಪೆ ಬೀಜಗಳಿಗೆ ಸೀಲ್ ಹಾಕಿ ಮಾರಾಟ ಮಾಡದ ಹಾಗೆ ಮಾಡುತ್ತಿದ್ದಾರೆ. ಜನರಲ್ಲಿ ಇದಕ್ಕೆ ಬೇಡಿಕೆ ಇದೆ. ಅಂದರೆ ಅಷ್ಟು ಒಳ್ಳೆಯ ಹೆಸರು ನಮ್ಮ ಸೀಡ್ಸ್ ಕಾರ್ಪೊರೇಷನ್‌ಗೆ ಇದೆ. ಕೆಲವು ನ್ಯೂನತೆಗಳಿವೆ. ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಎಚ್. ಏಕಾಂತಯ್ಯ:- ನಮ್ಮ ಕಾರ್ಪೊರೇಷನ್‌ನವರು ನೀಡುವ ಬೀಜದ ಬಗ್ಗೆ ಗೌರವ ಇದೆ. ಇಲ್ಲ ಎಂದು ಹೇಳುವುದಿಲ್ಲ. ಬ್ರೀಡರ್ ಸೀಡ್ಸ್‌ನಿಂದ ಫೌಂಡೇಷನ್ ಸೀಡ್ಸ್ ಮಾಡಿ ಫೌಂಡೇಷನ್ ಸೀಡ್ಸ್ ಹಂಚುವಾಗ ಕಲಬೆರಕೆಯಾಗುತ್ತದೆ ಎಂದು ಹೇಳಿದೆ ಅಷ್ಟೆ.

ಒಬ್ಬ ಮಾನ್ಯ ಸದಸ್ಯರು:-ಕಾರ್ಪೊರೇಷನ್‌ನವರು ನೀಡುವ ಬೀಜ ಉತ್ತಮವಾಗಿರಬಹುದು. ರೈತರು ಬೀಜ ಪ್ರೊಡಕ್ಷನ್ ಕೊಟ್ಟಾಗ ಬೀಜ ನಿಗಮಕ್ಕೆ ಕೊಡುವುದಿಲ್ಲ. ಏಕೆಂದರೆ ಅಲ್ಲಿ ನಿಗದಿಪಡಿಸಿದ ಧಾರಣೆ ಏನಿರುತ್ತದೆ ಆ ಮಾರ್ಕೆಟ್ ಪ್ರೈಸ್‌ಗಿಂತ ಜಾಸ್ತಿ ಧಾರಣೆ ಹೊರಗಡೆ ಸಿಗುತ್ತದೆ. ಕಾರ್ಪೊರೇಷನ್‌ನವರು ರೈತರಿಂದ ಮಾಲನ್ನು ಖರೀದಿಸಿ ಅವರಿಗೇ ಫೌಂಡೇಷನ್ ಸೀಡ್ಸ್ ಎಂದು ಮಾರಾಟ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ:- ಈ ಸಂದರ್ಭದಲ್ಲಿ ಒಂದು ವಿಚಾರ ಹೇಳುತ್ತೇನೆ. ಆ ರೀತಿ ಕೆಲವು ದೂರುಗಳು ನನ್ನ ಗಮನಕ್ಕೆ ಬಂದಿವೆ. ಕೆಲವು ತರಹದ ಬೀಜಗಳ ಬಗ್ಗೆ ಬಂದಿವೆ. ಸರ್ಟಿಫೈಡ್ ಸೀಡ್ಸ್ ಇರಬಹುದು, ಫೈಂಡೇಷನ್ ಸೀಡ್ಸ್ ಇರಬಹುದು, ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಇಷ್ಟು ಮಾತ್ರ ನಿಜ. ಮುಂಬರತಕ್ಕ ವರ್ಷದಲ್ಲಿ ಹೆಚ್ಚಿನ ಆದ್ಯತೆಯನ್ನು ಸರ್ಕಾರದವರು ಇದಕ್ಕೆ ನೀಡುತ್ತಾರೆ. ಆದರೆ ಈ ವರ್ಷದ ಬೀಜದ ಸಪ್ಲೈ ವಿಚಾರದಲ್ಲಿ ನಮಗೆ ಕೊರತೆ ಕಂಡುಬಂತು. ರೇಟ್ ಕಡಿಮೆಯಾಗಿದ್ದಕ್ಕೋ ಏನೋ ಗೊತ್ತಿಲ್ಲ ಅಂತೂ ಎರಡು ಸಾವಿರ ಚಿಲ್ಲರೆ ಕ್ವಿಂಟಾಲ್ ಕಡಿಮೆಯಾದರೂ ಸಮಾಧಾನವಾಯಿತು ಎಂಬ ಭಾವನೆ ನಮಗೆ ಬಂತು.

ಶ್ರೀ ಡಿ.ಬಿ. ಚಂದ್ರೇಗೌಡ:- ಸೂರ್ಯಕಾಂತಿ ಬೀಜದ ಬಗ್ಗೆಯೂ ....

ಶ್ರೀ ಎಸ್. ಬಂಗಾರಪ್ಪ:- ಒಂದು ವೇಳೆ ಹಾಗೇನಾದರೂ ಬಂದಿದ್ದರೆ, ಇನ್ನೂ ಬಿತ್ತನೆ ಆಗತಕ್ಕ ವಿಚಾರದಲ್ಲಿ ಇದ್ದರೆ, ನಾವು ಎಲ್ಲಿದೆ ಅಲ್ಲಿಂದಲಾದರೂ ಅದನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾವು ಬೆಳೆಯನ್ನು ಹೆಚ್ಚಾಗಿ ತೆಗೆಯುವುದಕ್ಕೋಸ್ಕರ ಫರ್ಟಿಲೈಜರ್ಸ್ ಅನ್ನು ಚೆನ್ನಾಗಿ ಉಪಯೋಗ ಮಾಡಬೇಕು. ಯಾವ ರೀತಿ ಉಪಯೋಗ ಮಾಡಬೇಕೆಂಬುದು ಒಂದುವಿಚಾರ. ಮಾನ್ಯ ಶಿವಮೂರ್ತಿಯವರು, ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಹಾಗೂ ಬೇರೆ ಬೇರೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಕೆಮಿಕಲ್ ಮೆನ್ಯೂರ್ ಅನ್ನು ಹೆಚ್ಚೆಚ್ಚು ಹಾಕಿ ನಮ್ಮ ಭೂಮಿಯ ಗುಣ, ಫಲವತ್ತತೆ ಹೊರಟು ಹೋಗಿದೆ. ಎನ್ನತಕ್ಕ ಮಾತು 100 ಕ್ಕೆ 100ರಷ್ಟು ಸತ್ಯ. ಉದಾಹರಣೆಗೆ ದಾವಣಗೆರೆಯ ನೀರಾವರಿಯ ಭಾಗವನ್ನು ತೆಗೆದುಕೊಂಡರೆ, ನನ್ನ ಅನುಭವಕ್ಕೆ ಬಂದಿರತಕ್ಕ ವಿಚಾರ ಏನೆಂದರೆ ಭಾರಿ ಉತ್ಪನ್ನ ತೆಗೆಯುವುದಕ್ಕೋಸ್ಕರ ಸಿಕ್ಕಾಪಟ್ಟೆ ಗೊಬ್ಬರ ಹಾಕಿ ಬಿಡುವುದು. If you put more chemical manures to the land, the fertility of the soil will go away ಇಲ್ಲಿ ಏನಾಗಿದೆ ಅಂದರೆ, ಒಂದುಹಬ್ಬ, ಆ ಹಬ್ಬದಲ್ಲಿ 40-50 ಹೋಳಿಗೆಯನ್ನು ತಿಂದು, ಅದು ಅಜೀರ್ಣವಾಗುವ ಹಾಗೆ ಆಗಿದೆ. ನಾನು ಎಂ.ಎಲ್.ಎ. ಆದ ಮೇಲಿಂದ ಸರ್ಕಾರೀ ಗೊಬ್ಬರವನ್ನು ಒಬ್ಬರು ಮಾತನಾಡಿಸುವುದಕ್ಕೆ ಹೋಗುತ್ತಿರಲಿಲ್ಲ. ಇತ್ತೀಚೆಗೆ ತಿಳವಳಿಕೆ ಬಂದ ಬಂದ ಹಾಗೆ ಹಾಕುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕೆಲವು ಕಡೆಗಳಲ್ಲಿ feast and famine synchrone ಅಂತ ನಾವೇನು ಕರೆಯುತ್ತೇವೆ ಇದು ಬಂದಿದೆ. ನಾವು ಅದನ್ನು ನಿಲ್ಲಿಸಬೇಕು. ಗೊಬ್ಬರ ಹಾಕದೆ ಬಿಟ್ಟು ಬಿಡುವುದು, ಇಲ್ಲದಿದ್ದರೆ ಸಿಕ್ಕಾಪಟ್ಟೆ ಹಾಕಿಬಿಡುವುದು, ಈ ದೃಷ್ಟಿಯಿಂದ ನಾವು ನರಳುತ್ತಿದ್ದೇವೆ. ಇದಕ್ಕೆ balanced diet ಯಾವಾಗಲೂ ಕೊಡಬೇಕು. ಕೊಟ್ಟಾಗ ಮಾತ್ರ ಅದನ್ನು ಮ್ಯಾನೇಜ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ತಜ್ಞರು , ಯೂನಿವರ್ಸಿಟಿಯವರು, ಇಲಾಖೆಯವರು ನಾವು ವಿಚಾರ ಮಾಡಿದ್ದೇವೆ. ಇವತ್ತು ಹಳ್ಳಿಯಲ್ಲಿ ಸಗಣಿಗೋಸ್ಕರ cowdung ಸಿಕ್ಕಾಪಟ್ಟೆಯಾಗಿ ನೈಟ್ರೋಜಿನ್ ಗೊಬ್ಬರಕ್ಕೆ ತಯಾರು ಮಾಡತಕ್ಕದ್ದು, ಜೈವಿಕ ಗೊಬ್ಬರಗಳೆಂದು ನಾವೇನು ಕರೆಯುತ್ತೇವೆ, ಅದನ್ನೆಲ್ಲಾ ಚೆನ್ನಾಗಿ ಉಪಯೋಗ ಮಾಡುವವರು ಇದ್ದಾರೆ. ಇಲ್ಲದಿದ್ದರೆ ಅರ್ಜೆಂಟಾಗಿ ಹೋಗಿ ಸರ್ಕಾರಿ ಗೊಬ್ಬರವನ್ನು ತಂದು ಚೆಲ್ಲಿಬಿಡುವುದು. ಇದರಿಂದ ಭೂಮಿ ಹಾಳಾಗಿ ಹೋಗುತ್ತವೆ. ಇದಕ್ಕೆ ನಮ್ಮ ಸರ್ಕಾರದವರು ಒಂದು ತೀರ್ಮಾನವನ್ನು ಮಾಡಿದ್ದೇವೆ. ನಾವು ಆದಷ್ಟು ರೈತರಿಗೆ ಕೊಡತಕ್ಕ ಕಿಟ್ಸನ್ನು ಅಂದರೆ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್, ಇರಬಹುದು, ಮತ್ತೊಬ್ಬರು ಇರಬಹುದು, ಸ್ಮಾಲ್ ಫಾರ್‌ಮರ್ ಇರಬಹುದು, ಮುಂದೆ ಅದನ್ನು ಕಮರ್ಷಿಯಲಿ ಲೆಸ್ ಮಾಡಬೇಕೆಂಬ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ನೀರಾವರಿ ಪ್ರದೇಶದಲ್ಲಿ ಬೆಳೆಯುವ ಕಬ್ಬು ಇರಬಹುದು, ಭತ್ತ ಇರಬಹುದು, ಅಥವಾ ನೀರಿನಲ್ಲಿ ಬೆಳೆಯತಕ್ಕ ಕಾಟನ್ ಇರಬಹುದು, ಅಥವಾ ಒಣ ಬೇಸಾಯಕ್ಕೆ ಸಂಬಂಧಪಟ್ಟ ಹಾಗೆ ಜವಾರ್ ಇರಬಹುದು ಅಥವಾ ಕಾಟನ್ ಇರಬಹುದು, ಬೇರೆ ಬೆಳೆಗಳು ಏನೇ ಇರಬಹುದು, ಅಲ್ಲಿ ಈ ಬಯೋ ಫರ್ಟಿಲೈಸರ್ ಅನ್ನು ಉಪಯೋಗ ಮಾಡಬೇಕು. ಮುಂದೆ ಬರತಕ್ಕ ವರ್ಷಗಳಲ್ಲಿ ವ್ಯಾಪಕವಾಗಿ ಉಪಯೋಗ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಸಮಿತಿ ಮಾಡಿ, ಚರ್ಚೆ ಮಾಡಿ ತೀರ್ಮಾನ ಕೂಡ ಮಾಡಿದ್ದೇವೆ. ಹಂತಹಂತವಾಗಿ ಹೇಗೆ ಹೋಗಬೇಕೆಂದು ವಿಚಾರ ಮಾತ್ರ ಇಟ್ಟುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ ನಮ್ಮ ಭೂಮಿಯ ಗುಣಮಟ್ಟ ಏನಿದೆ ಅದು ಹಾಳಾಗಿ ಹೋಗುತ್ತಿದೆಂಬ ಯೋಚನೆ ನಮಗೆ ಇರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ರೈತರಿಗೆ ಸ್ಟೋರೇಜ್ ಫೆಸಿಲಿಟಿ ಬೇಕು. ನಾವು ಏನು ಬೆಳೆಯುತ್ತೇವೆ ಅದನ್ನು ತೆಗೆದುಕೊಂಡು distress sale ಮಾರ್ಕೆಟಿಂಗ್ ಇದನ್ನೆಲ್ಲಾ ಕ್ಲಬ್ ಮಾಡದೇ ಹೋದರೆ ಇದು ಬರುವ ಹಾಗೆ ಇಲ್ಲ. ನಾನು ಅಗ್ರಿಕಲ್ಚರಲ್ ಬಗ್ಗೆ ಮಾತನಾಡುವಾಗ, ಮಾರ್ಕೆಟಿಂಗ್ ಎಲ್ಲಾ ಕಿತ್ತುಕೊಂಡು ಹೋಗಿರುತ್ತದೆ. ಅದು ಬರುವುದಿಲ್ಲ. ಇವತ್ತು ಮಾರುಕಟ್ಟೆಯ ವ್ಯವಸ್ಥೆ ನಮ್ಮ ರೈತರಿಗೆ

ಇಲ್ಲದೆ ಇದ್ದರೆ ಬಹಳ ತೊಂದರೆಯಾಗುತ್ತದೆ. ಸ್ಟೋರೇಜ್ ಫೆಸಿಲಿಟಿ coupled with marketing ಅದಕ್ಕೆ ಕೇಂದ್ರ ಸರ್ಕಾರದ ಬೆಂಬಲ ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಮೆಣಸಿನ ಕಾಯಿ ಬೆಳೆಯುತ್ತಾರೆ. 70-80 ಎಕರೆ ಬೆಳೆದು ಮನಸ್ಸಿಗೆ ಬಂದಷ್ಟು ತೆಗೆದುಕೊಂಡು ಹೋಗಿ ಕೊಡುತ್ತಾರೆ. ನಿಪ್ಪಾಣಿಯಲ್ಲಿ ತಂಬಾಕು ಬೆಳೆಯುತ್ತಾರೆಂದು ಪ್ರಶ್ನೆ ಬಂತು. ನೀವು ತೆಗೆದುಕೊಂಡಾದರೂ ಕೊಡಿ, ಭತ್ತ ಕೊಡಿ, ತಂಬಾಕು ಕೊಡಿ, ಅಥವಾ ಜೋಳ ಕೊಡಿ, ಮೆಣಸಿನಕಾಯಿ ಏನೇ ಬೆಳೆದರೂ ಅವರು ಒಂದು ವರ್ಷದೊಳಗೆ ಕೊಡುತ್ತಾರೆ. ಬಡ್ಡಿಯು ಇಲ್ಲವೇ ಇಲ್ಲ. ಅದಕ್ಕೆ ಮತ್ತೆ ಶೇಕಡ 2,3,5,ರಷ್ಟು ಕಮಿಷನ್‌ಗಳು, ಮನಸ್ಸಿಗೆ ಬಂದ ಹಾಗೆ ಇವರು ಮಾನಮರ್ಯಾದನೆ ಬಿಟ್ಟು ತಲೆ ತಗ್ಗಿಸಿಕೊಂಡು ಹೋಗಿ ಕಮಿಷನ್ ಆಫೀಸಿನ ಮುಂದೆ ಕುಳಿತುಕೊಳ್ಳಬೇಕು. ಅವರು ಕೊಟ್ಟಾಗ ಇವರು ಬಿಟ್ಟಾಗ, ಇವರ ದುಡ್ಡು ಅವನು ಇಟ್ಟುಕೊಂಡು ಅವನೇ ದೊಡ್ಡಸ್ತಿಕೆ ಮಾಡುತ್ತಾನೆ. ನಮ್ಮ ರೈತರ ದುಡ್ಡನ್ನು ಇಟ್ಟುಕೊಂಡು ಅವನು ದೊಡ್ಡಸ್ತಿಕೆ ಮಾಡುತ್ತಾನೆ. ಇದು ನಾವೆಲ್ಲಾ ಕಣ್ಣಾರೆ ಕಂಡಿರತಕ್ಕ ವಿಚಾರ. ಇವತ್ತು ಪ್ರಾಯೋಗಿಕವಾಗಿ ಒಂದು ಸೇಲನ್ನು ಟೊಬಾಕೊ ಬೋರ್ಡ್ ಮುಖಾಂತರ ನಿಪ್ಪಾಣಿಯಲ್ಲಿ ಗೌರ್ನ್‌ಮೆಂಟ್ ಆಫ್ ಇಂಡಿಯಾದವರು ಮಾಡಿದರು. ಅಲ್ಲಿ ವರ್ತಕರೆಲ್ಲಾ ಒಂದಾಗಿಬಿಟ್ಟರು. ಯಾರೂ ಕೂಗಲೇ ಬಾರದೆಂಬ ದೃಷ್ಟಿಯಿಂದ ವಾತಾವರಣ ಸೃಷ್ಟಿ ಮಾಡಿದರು. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಇದೆ. ಹತ್ತಿ ಬೆಳೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹತ್ತಿ ಬೆಳೆ ಪರಿಸ್ಥಿತಿ ಏನಾಗಿದೆ? ಡಿ.ಸಿ.ಎಚ್. ಏನಿದೆ ಆದರ ಕೌಂಟ್ಸ್ ಕಡಿಮೆಯಾಗುತ್ತದೆ, ಇನ್ನೂ ಚೆನ್ನಾಗಿ ಬರಬೇಕು ಎಂಬ ಅಭಿಪ್ರಾಯ ಇದೆ. ನಾವು ನ್ಯಾಷನಲ್ ಮಾರ್ಕೆಟ್‌ನಲ್ಲಿ ಕಾಂಪಿಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇನ್ನೂ ಒಳ್ಳೆಯದನ್ನು ಕಂಡುಹಿಡಿಯಬೇಕು ಎಂಬ ಸಲಹೆಯನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾಕ್ಕೆ ಹೆಚ್ಚಿನ ಒತ್ತಡ ತರಬೇಕು, ಗೌರ್ನ್‌ಮೆಂಟ್ ಆಫ್ ಇಂಡಿಯಾಕ್ಕೆ ಹೆಚ್ಚಿನ ಒತ್ತಡ ತರಬೇಕು, ಗೌರ್ನ್‌ಮೆಂಟ್ ಆಫ್ ಇಂಡಿಯಾದವರು ಹತ್ತಿಗೆ ಸರಿಯಾದ ರೇಟನ್ನು ಕೊಡಬೇಕು ಎಂದು ರಾಜ್ಯ ಸರ್ಕಾರದವರು ಒತ್ತಾಯ ತರಬೇಕು ಎಂದು ಹೇಳಿದ್ದಾರೆ. ಹತ್ತಿ ಬೆಲೆ ನಿಗದಿಮಾಡತಕ್ಕ ಶಕ್ತಿ ನಮಗಿಲ್ಲ. ಅದರ ವ್ಯಾಪ್ತಿ ನಮಗೆ ಬರುವುದಿಲ್ಲ. ಯಾವುದೇ ಅಗ್ರಿಕಲ್ಚರಲ್ ಕಮಾಡಿಟೀಸ್ ಇರಬಹುದು, ಕಬ್ಬು ಇರಬಹುದು ಮತ್ತೊಂದಿರಬಹುದು. ಕನಿಷ್ಠ ಬೆಲೆ ಕಬ್ಬಿಗೆ 360 ರೂಪಾಯಿ ಎಂದು ಅನೌನ್ಸ್ ಮಾಡಿದರು, ಆದರೆ ಯಾವ ಯಾವ ಫ್ಯಾಕ್ಟರಿಯಲ್ಲಿ ಎಷ್ಟೆಷ್ಟು ಎಂಬುದನ್ನು ಹೇಳಲಿಲ್ಲ ಎಂದು ಹೇಳಿದರು. ಅದನ್ನು ವಿಚಾರ ಮಾಡಿ ಹೇಳುತ್ತಾರೆ. ಕೊಬ್ಬರಿ ಬೆಲೆ ಬಗ್ಗೆ ಶಿವರಾಮೇಗೌಡರು ಹೇಳಿ ಹೊರಗೆ ಹೋಗಿದ್ದಾರೆ. ಅವರು ಇರಬೇಕಾಗಿತ್ತು..

ಅಧ್ಯಕ್ಷರು:– ಮಾತನಾಡುವುದಷ್ಟೇ ಅವರ ಕರ್ತವ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಮಾತನಾಡಬೇಕು ಎಂದರೆ ಬೆಲ್ ಹೊಡೆಯುತ್ತೀರಿ.

ಶ್ರೀ ವಾಟಾಳ್ ನಾಗರಾಜ್:– ನನ್ನ ಮನವಿ ಏನೆಂದರೆ ಎಷ್ಟು ಹೊತ್ತು ನಾವು ಕುಳಿತಿರುತ್ತೇವೆ ಅಷ್ಟು ಹೊತ್ತು ಮಾತನಾಡುವುದಕ್ಕೆ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು: ಮಾನಸಿಕವಾಗಿ ನೀವು ನೋಟ್ ಮಾಡಿಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಆಸಕ್ತಿ ವಹಿಸಿ ಮಾತನಾಡುವ ಸದಸ್ಯರಿಗೆ ಬೆಲ್ ಹೊಡೆದರೆ ಸರಿಹೋಗುವುದಿಲ್ಲ. ಕೆಲವರು ಬಂದು ಮಾತನಾಡುತ್ತಾರೆ. ಮಾತನಾಡುವ ಚಟ ಇರುವವರಿಗೆ ಮಾತ್ರ ಅವಕಾಶ ಕೊಟ್ಟರೆ ಕಷ್ಟವಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ:–ಯಾರು ಮಾತನಾಡಲಿಲ್ಲವೋ ಅವರೇ ಇವತ್ತು ಇಲ್ಲಿ ಇರುವುದು.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ಬೆಲೆ ವಿಚಾರ ನಮ್ಮ ವ್ಯಾಪ್ತಿಯಲ್ಲಿ ಬರುತ್ತಿಲ್ಲ. ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್ ಇದೆ. ಪ್ರತಿ ವರ್ಷ ಅವರು ಪ್ರೊಫಾರ್ಮಾ ಕಳುಹಿಸಿಕೊಡುತ್ತಾರೆ. ನಾವು ರಾಜ್ಯ ಸರ್ಕಾರದವರು ಭರ್ತಿ ಮಾಡಿ ಕಳುಹಿಕೊಡುತ್ತೇವೆ. ನಂತರ ಬೆಲೆ ನಿಗದಿ ಮಾಡುತ್ತಾರೆ. ನಾವು ಸಪೋರ್ಟ್ ಪ್ರೈಸ್ ಅನೌನ್ಸ್ ಮಾಡುತ್ತೇವೆ. ಗಾಡಿ ಬಾಡಿಗೆ ಮಿಕ್ಕಿದ್ದು ಬಿಟ್ಟರೆ

ಬೆಲೆ ನಿಗದಿ ಮಾಡುವುದು ನಮಗೆ ಬರುವುದಿಲ್ಲ. ಒಂದು ಮಾತನ್ನು ಪ್ರೊಫೆಸರ್ ಅವರು ಹೇಳಿದರು. ಬೆಲೆ ನಿಗದಿ ಮಾಡುವ ವಿಚಾರ ಇದೆಯಲ್ಲ ಇದು ಸರಿಯೋ ಎಂಬ ಬಗ್ಗೆ ಉತ್ತರ ಕೊಡಬೇಕು ಎಂದು ಹೇಳಿದರು. ಕೊನೇಪಕ್ಷ ಇದು ತಪ್ಪು ಎಂದಾದರೂ ಹೇಳಿ ಎಂದು ಹೇಳಿದ್ದಾರೆ. ನಿಜ, ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಬೆಲೆ ನಿಗದಿ ಮಾಡತಕ್ಕ ವಿಧಾನ ಸರಿಯಲ್ಲ ಎಂದು ಹೇಳಿದ್ದಾರೆ. ಅವರು ಸ್ಟ್ಯಾಂಡಿಂಗ್ ಕಮಿಟಿಯನ್ನು ರಾಜ್ಯ ಸರ್ಕಾರದ ಮಟ್ಟದಲ್ಲಾದರೂ ಮಾಡಿ ಕೇಂದ್ರ ಸರ್ಕಾರಕ್ಕೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರದವರು ಅದನ್ನು ಒಪ್ಪಿದ್ದೇವೆ. 7 ಜನರ ಸ್ಟ್ಯಾಂಡಿಂಗ್ ಕಮಿಟಿಯನ್ನು ಅಡ್ವೈಸರಿ ನೇಚರ್ ಇರುವಂಥ ಕಮಿಟಿಯನ್ನು ಮಾಡುತ್ತಿದ್ದೇವೆ. ಇಬ್ಬರು ಎಕ್ಸ್‌ಪರ್ಟ್‌ಗಳು, ರೈತರ ಕಡೆಯಿಂದ ಇಬ್ಬರು ಪ್ರತಿನಿಧಿಗಳು, ಇಲಾಖೆಯಿಂದ ಮತ್ತು ಸಾರ್ವಜನಿಕವಲಯದಿಂದ ಪ್ರತಿನಿಧಿಗಳು ಇರುತ್ತಾರೆ. ಅಗ್ರಿಕಲ್ಚರ್ ಮಿನಿಸ್ಟರ್ ಯಾರೇ ಇರಬಹುದು ಅವರು ಆ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಒಟ್ಟಿನಲ್ಲಿ 7 ಜನರ ಒಂದು ಕಮಿಟಿಯನ್ನು ಮಾಡುತ್ತೇವೆ. ಇದು ಒಳ್ಳೆಯ ಸಲಹೆಯಾಗಿರುವುದರಿಂದ ಯಾರು ಏನು ಎಂಬುದನ್ನು ವಿಚಾರ ಮಾಡಿ ಸಮಿತಿ ಮಾಡಿ ಸಧ್ಯದಲ್ಲೇ ಪ್ರಕಟಣೆಯನ್ನು ಹೊರಡಿಸುತ್ತೇವೆ. ಬರೀ ಪ್ರೈಸಸ್ ಬಗ್ಗೆ ಮಾತ್ರ ಇದನ್ನು ಮಾಡುತ್ತಿಲ್ಲ. ಅದರ ವ್ಯಾಪ್ತಿಯನ್ನು ಹೆಚ್ಚು ಮಾಡಬೇಕೆಂಬುದು ನಮ್ಮ ಉದ್ದೇಶ. ಪ್ರೊಫೆಸರ್ ನಂಜುಂಡಸ್ವಾಮಿ ಅವರ ವಿಚಾರಕ್ಕಿಂತ ಇನ್ನೂ ಮುಂದೆ ಹೋಗಬೇಕೆಂಬುದು ನಮ್ಮ ಅಭಿಪ್ರಾಯ. ಹೇಗೆ? ನಮ್ಮ ನೀತಿ ಏನಿರಬೇಕು ಎಂಬುದನ್ನು ನೋಡುತ್ತೇವೆ. 8ನೇ ಪಂಚವಾರ್ಷಿಕ ಯೋಜನೆಗೆ ಸಿದ್ಧತೆ ಮಾಡುವುದಕ್ಕೆ ಸಲಹೆ ಮಾಡುವ ಬಗ್ಗೆಯೂ ಸಮಿತಿ ನೋಡುತ್ತದೆ.

ಶ್ರೀ ಎಸ್. ಬಂಗಾರಪ್ಪ:- ಪಕ್ಷ ಪಂಗಡದ ಭಿನ್ನಾಭಿಪ್ರಾಯ ಮರೆತು, ನಮ್ಮ ನೀತಿ ಹೇಗಿರಬೇಕು ಎಂಬುದನ್ನು ವಿಶ್ಲೇಷಣೆ ಮಾಡುತ್ತಿದ್ದೇವೆ. ಪ್ರೊಡಕ್ಷನ್ ಗಮನದಲ್ಲಿಟ್ಟು ಮಳೆ ಅಥವಾ ಇರಿಗೇಷನ್ ಆಧರಿಸುವವರಿಗೆ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ ಇರಬಹುದು, ಮತ್ತೊಂದು ವಿಚಾರ ಇರಬಹುದು. ಇನ್‌ಪುಟ್ಸ್ ಇರಬಹುದು, ಏನೇನೂ ವಿಚಾರ ಇದ್ದರೂ ಕೂಡ ಸಮಿತಿ ನಮ್ಮ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಬೇಕು. ಇದು ನಮ್ಮ ವ್ಯಾಪ್ತಿಯಲ್ಲಿ ಬರತಕ್ಕ ವಿಚಾರ. ರಾಜ್ಯ ಸರ್ಕಾರ ತೀರ್ಮಾನ ಮಾಡತಕ್ಕಂಥದ್ದು. ಇನ್ನು ಉಳಿದಿರತಕ್ಕಂಥದ್ದನ್ನು ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ ತೀರ್ಮಾನ ಮಾಡತಕ್ಕ ವಿಚಾರಗಳನ್ನು ಇಟ್ಟು ಕೊಂಡಿದ್ದೇವೆ. ಸಮಿತಿಯ ಬಗ್ಗೆ ಆಮೇಲೆ ಹೇಳುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಹಾರಾಷ್ಟ್ರದಲ್ಲಿ ಕಾಟನ್ ಕಾರ್ಪೊರೇಷನ್ ಆಫ್ ಮಹಾರಾಷ್ಟ್ರ ಎಂದು ಮಾಡಿದ್ದಾರೆ. ಎನ್.ಸಿ.ಡಿ.ಸಿ. ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವುದರಿಂದ ರೈತರಿಗೆ ಸರಿಯಾಗಿ ಉಪಯೋಗವಾಗುತ್ತಿಲ್ಲ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಕೂಡ ಕಾಟನ್ ಕಾರ್ಪೊರೇಷನ್ ಆಫ್ ಕರ್ನಾಟಕ ಎಂದು ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:- ಈಗ ಏನು ನಿಗಮಗಳು ಮಾಡಿದ್ದಾರೆ, ಅವುಗಳನ್ನು ಬರ್ಖಾಫ್ ಮಾಡುವುದಕ್ಕೆ ಹೊರಟಿರುವಾಗ ಹೊಸದಾಗಿ ನಿಗಮಗಳನ್ನು ಮಾಡಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ:-ಅದನ್ನು ಎಕ್ಸ್‌ಪೋರ್ಟ್ ಮಾಡಬೇಕಲ್ಲ. ರಾಜ್ಯ ಮಟ್ಟಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾಡುವುದರಿಂದ ಉಪಯೋಗವಾಗುವುದಿಲ್ಲ. ತೊಂದರೆಯಾಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಪಾಮ್ ಆಯಿಲ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಏಕೆಂದರೆ ಬರತಕ್ಕ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಬಗ್ಗೆ ಬಹಳಷ್ಟು ಉತ್ತೇಜನ ಬರುತ್ತಿದೆ. ಆ ಅವಧಿಯಲ್ಲಿ ಆಯಿಲ್ ವಿಚಾರದಲ್ಲಿ ಸಿಕ್ಕಾಪಟ್ಟೆ ಷಾರ್ಟೇಜ್ ಬರುತ್ತದೆ. ಪರದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಸಂಶೋಧನೆ ಮಾಡುವುದಕ್ಕೋಸ್ಕರ ಭೂಮಿಯನ್ನು ತುಂಗಾಭದ್ರಾ ಸಕ್ಕರೆ ಕಾರ್ಖಾನೆಯ ಪಕ್ಕದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೊಟ್ಟಿರುತ್ತಾರೆ. ಇದನ್ನು ನಾನು ಮಂತ್ರಿಯಾಗುವುದಕ್ಕಿಂತ ಮುಂಚಿತವಾಗಿಯೇ ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಕೂಡ ಬರೆದಿದ್ದಾರೆ. 250 ಎಕರೆ ಭೂಮಿಯನ್ನು ಸಂಶೋಧನೆ ಮಾಡುವುದಕ್ಕೋಸ್ಕರ ನಾವು ಕೊಟ್ಟಿದ್ದೇವೆ, ಸಾವಿರಾರು

ಫ್ಯಾಮಿಲಿಗಳನ್ನೂ ಕೂಡ ತಯಾರು ಮಾಡಿದ್ದೇವೆ. ಆ ಒಂದು ಕಾರ್ಯಕ್ರಮಕ್ಕೆ ಪ್ರಧಾನ ಮಂತ್ರಿಗಳನ್ನೇ ಆಹ್ವಾನಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಏಕೆಂದರೆ 8ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಿಕ್ಕಾಪಟ್ಟೆ ಪಾಮಾಯಿಲ್ ಬಗ್ಗೆ ಬೇಡಿಕೆ ಬರುವುದರಿಂದ ಅವರನ್ನೇ ಕರೆಯಿಸಿ ಅವರ ಕೈಯಿಂದ ರೈತರಿಗೆ ಗಿಡಗಳನ್ನು ಕೊಡಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದರಲ್ಲಿ ಕರ್ನಾಟಕ ಲೀಡ್ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಕರ್ನಾಟಕ ಸರ್ಕಾರ ಸಂಶೋಧನೆ ಮತ್ತು ವಿಸ್ತರಣೆಯ ಬಗ್ಗೆ ಯೋಜನೆಯನ್ನು ಹಮ್ಮಿಕೊಂಡಿದೆ. ಅದಕ್ಕೆ ಹೆಚ್ಚು ಒತ್ತು ಕೊಡಬೇಕೆಂಬ ಉದ್ದೇಶ ಇದೆ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕು. ಡ್ರೈಲ್ಯಾಂಡ್ ಡೆವಲಪ್ ಮೆಂಟ್ ಬೋರ್ಡ್ ಯೋಜನೆಯಡಿಯಲ್ಲಿ ಸಂಪೂರ್ಣವಾಗಿ ಭೂಮಿಯ ಬಳಕೆ ಮಾಡಬೇಕು. ಭೂಮಿಯನ್ನು ಬಳಕೆ ಮಾಡದಿದ್ದರೆ ಉಪಯೋಗವಾಗುವುದಿಲ್ಲ. ಕೃಷಿಗೆ ಯೋಗ್ಯವಾಗಿರತಕ್ಕ ಭೂಮಿ ಮಳೆ ಕಡಿಮೆ ಬಿದ್ದರೂ ಕೂಡ ಭೂಮಿಯಲ್ಲಿ ತೇವಾಂಶ ಇರತಕ್ಕ ವಿಚಾರವನ್ನು ನಾವೆಲ್ಲ ಮಾಡಿಕೊಳ್ಳಬೇಕು. ಈ ಒಂದು ಯೋಜನೆ ಒಳ್ಳೆಯದು. ಕ್ಲಂಪ್ ಎನ್ನತಕ್ಕಂಥ ಯೋಜನೆಯ ಬಗ್ಗೆ ಹಿಂದೆ ಕೂಡ, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಜಿಲ್ಲಾಪರಿಷತ್ತಿನಲ್ಲಿ ಪ್ರಸ್ತಾಪವನ್ನು ಬೇಕಾದಷ್ಟು ಸಾರಿ ಮಾಡಿದ್ದಾರೆ. ಸಂಪೂರ್ಣ ಭೂಮಿ ಬಳಕೆ ಆಗಬೇಕು. ಇದಕ್ಕಾಗಿ 190 ಕೋಟಿ ರೂಪಾಯಿಗಳ ಯೋಜನೆ ತಯಾರು ಮಾಡಿ ಜಪಾನ್‌ನ ಸರ್ಕಾರದ ಸಹಾಯಧನಕ್ಕಾಗಿ ಕಳುಹಿಸಿದ್ದೇವೆ. ಸರ್ಕಾರಕ್ಕೆ 16.05 ಬಿಲಿಯನ್ ಬರತಕ್ಕಂಥದ್ದು. ಇದರ ಬಗ್ಗೆ ಬೇಕಾದಷ್ಟು ಸಾರಿ ಚರ್ಚೆ ನಡೆದಿದೆ. ಈಗಲೇ ಬೇಡ, ಸ್ವಲ್ಪ ನಿಧಾನ ಮಾಡುವುದು ಒಳ್ಳೆಯದು ಎನ್ನತಕ್ಕ ಮಾತೂ ಇದೆ. ನನ್ನ ದೃಷ್ಟಿಯಲ್ಲಿ ನಮಗೆ ಇರತಕ್ಕ 4ರಲ್ಲಿ 3 ಭಾಗ ಒಣ ಬೇಸಾಯಕ್ಕೆ ಸಂಬಂಧಪಟ್ಟದ್ದು ಇರುವುದರಿಂದ ಆದಷ್ಟು ಬೇಗ ಇದನ್ನು ಉಪಯೋಗಿಸಿಕೊಳ್ಳಬೇಕು ಎಂಬ ಭಾವನೆ ನನ್ನದು.

ಶ್ರೀ ಎಚ್. ಏಕಾಂತಯ್ಯ:- ಜಪಾನಿನಿಂದ ಈಗಾಗಲೇ ಒಪ್ಪಿಗೆಯಾಗಿ ಬಂದಿದೆ. ಕೇಂದ್ರ ಸರ್ಕಾರದವರೂ ಒಪ್ಪಿದ್ದಾರೆ. ಆದರೆ ರಾಜ್ಯ ಸರ್ಕಾರದ ಒಪ್ಪಿಗೆ ಇದೆ ಎಂದು ಹೇಳದೇ ಇರುವುದರಿಂದ ಅಲ್ಲೇ ನಿಂತಿದೆ.

ಶ್ರೀ ಎಸ್. ಬಂಗಾರಪ್ಪ: ಹೌದು. ಒಪ್ಪಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಿದ ಮೇಲೆ, ಸಹಾಯಧನ ಸಿಕ್ಕುತ್ತದೆ ಎನ್ನುವ ಕಾರಣದಿಂದ ಒಂದೇ ಸಾರಿ ಒಪ್ಪತಕ್ಕ ವಿಚಾರ ಅಲ್ಲ. ಕೆಲವೊಂದು ವಿಚಾರವನ್ನು ವಿಚಾರ ಮಾಡಬೇಕು ಎನ್ನುವ ಭಾವನೆ ಬಂದಿರುವುದರಿಂದ ಅಲ್ಲಿಗೆ ಹಾಗೆಯೇ ನಿಲ್ಲಿಸಿದ್ದಾರೆ. ಆದರೆ ನನಗನಿಸುತ್ತದೆ ಇದನ್ನು ತೆಗೆದುಕೊಂಡು ಮುಂದಕ್ಕೆ ಹೋಗಬೇಕು ಎನ್ನತಕ್ಕಂಥ ಭಾವನೆ ನನಗೆ ಇದೆ. ಆದರೆ ಎಲ್ಲಾ ಭೂ ಪ್ರದೇಶವನ್ನು ಸಾಗುವಳಿ ಮಾಡತಕ್ಕ ರೀತಿ ಅದನ್ನು ಕೃಷಿಗೆ ಬಳಕೆ ಮಾಡುವುದಕ್ಕೆ ಆಗುವುದಿಲ್ಲ ಬೇರೆ ಬೇರೆ ಯೋಜನೆಗಳನ್ನು ನಾವು ಹಾಕಿಕೊಂಡರೂ ಸಾಧ್ಯವಾಗುತ್ತಿಲ್ಲ ಎನ್ನತಕ್ಕಂಥ ಒಂದು ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ವಿಚಾರವನ್ನು ನಾನು ಎತ್ತಿದ್ದೇನೆ. ಅದೇ ರೀತಿಯಾಗಿ ಫರ್ಟಿಲೈಜರ್ಸ್ ಇರಬಹುದು ಮತ್ತೊಂದು ಇರಬಹುದು ಅವುಗಳು ರೈತರಿಗೆ ಹೋಗಿ ಸಿಗತಕ್ಕಂಥ ವಿಚಾರಗಳು ಏನು ಇವೆ ಅವು ಆದಷ್ಟು ರೈತರಿಗೆ ತಲುಪಿಸಬೇಕು ಎನ್ನತಕ್ಕಂಥಾದ್ದು ಈ ಆಗ್ರೋ ಕೇಂದ್ರಗಳು ಏನೇನು ಇವೆ ಅವುಗಳ ಮುಖಾಂತರ ತಲುಪಿಸಬೇಕೆನ್ನತಕ್ಕಂಥ ವಿಚಾರ ನಾವು ಇಟ್ಟುಕೊಂಡಿದ್ದೇವೆ. ನಿಜ ಹೇಳಬೇಕಾದರೆ ಹಿಂದೆ ಈ ಎಲ್ಲಾ ಪ್ರಕರಣಗಳು ಬಂದಿವೆ. ನಿಮ್ಮ ಸರ್ಕಾರ ಅಧಿಕಾರದಲ್ಲಿತ್ತು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ರೈತರ ಮನೆ ಬಾಗಿಲುಗಳಿಗೆ ಬೀಜ ಗೊಬ್ಬರ ಕೊಡುತ್ತೇವೆ ಎನ್ನುವ ಕೂಗು ಯಾವುದು ಇತ್ತು ಅದರ ಅರ್ಥ ಏನು ಎನ್ನತಕ್ಕಂಥಾದ್ದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಅಧ್ಯಕ್ಷರೇ ಕರ್ನಾಟಕ ರಾಜ್ಯದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬ್ರಾಂಚ್‌ಗಳು ಏನು ಇವೆ. ಆಗ್ರೋ ಕೇಂದ್ರಗಳು ಎಂದು ನಾವು ಏನು ಕರೆಯುತ್ತೇವೆ ಅವುಗಳನ್ನು ಅನೇಕ ನಿರುದ್ಯೋಗಿ ಯುವಕರು ವಿದ್ಯಾವಂತರು ಯಾರಿದ್ದಾರೆ ಅವರಿಗೆ ಕೊಡಬೇಕು ಎನ್ನುವ ಒಂದು ಆದೇಶವನ್ನು ನಾನು ಆಲ್‌ಮೋಸ್ಟ್ ಆಲ್ ಕೊಟ್ಟಿದ್ದೇನೆ. ಯಾರ್ಯಾರು ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ ಆದಷ್ಟು ಅವರಿಗೆ ಕೊಡೋಣ ಅವರು ಮೇಲೆ ಬರಲಿ

ಎನ್ನುವ ಇಚ್ಛೆ ನಮಗೆ ಇದೆ. ಆದರೆ ಕೆಲವು ಸಾರಿ ನಾವು ಬ್ಯಾಂಕ್ ಗ್ಯಾರಂಟಿ ಕೊಟ್ಟು ಅವರು ಸರಿಯಾಗಿ ನಡೆಸದಿದ್ದರೆ ರೈತರಿಗೆ ಸಕಾಲದಲ್ಲಿ ಅನುಕೂಲತೆಗಳು ಸಿಗದಿದ್ದರೆ ಹೇಗೆ? ಈ ಬಗ್ಗೆ ಅನೇಕ ಕಂಪ್ಲೇಂಟ್‌ಗಳು ನಮ್ಮ ಕೆ.ಐ.ಸಿ.ಸಿ ಗೆ ಬಂದಿವೆ ನಮ್ಮ ಕಡೆ ಕೂಡ ಬಂದಿವೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ನಮ್ಮ ಯುವಕರನ್ನು ನಾವು ಡಿಸ್‌ಕರೇಜ್ ಮಾಡುವುದಕ್ಕೆ ಆಗುವುದಿಲ್ಲ. ಕಂಪ್ಲೇಂಟ್ಸ್ ಇದ್ದರೂ ಒಂದು 10 ಪರ್ಸೆಂಟ್ ಇರಬಹುದು. ತಪ್ಪುಗಳು ಇರಬಹುದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಷ್ಟದಲ್ಲಿದೆ. ಈ ವರ್ಷ ಈ ನಷ್ಟವನ್ನು ತುಂಬಿ ಲಾಭದ ಹೊಸಿಲು ಮುಟ್ಟತಕ್ಕಂತ ಸಂದರ್ಭಕ್ಕೆ ನಾವು ಯೋಜನೆಗಳನ್ನು ಹಾಕಿಕೊಳ್ಳುವ ಕಡೆ ಗಮನ ಹರಿಸಿದ್ದೇವೆ. ಅದಕ್ಕೆ ನಮಗೆ ಸ್ವಲ್ಪ ಕಾಲಾವಕಾಶಬೇಕು. ಮತ್ತೊಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಅದರೆ ನಮ್ಮ ಯುವಕರು ಕೂಡ ಉದ್ಯೋಗ ಮಾಡಿಕೊಳ್ಳುವುದರ ಜೊತೆಗೆ ನಮಗೆ ನಷ್ಟವಾಗದ ರೀತಿ ನೋಡಿಕೊಳ್ಳಬೇಕು. ಅವರ ಮುಖಾಂತರವೇ ಇವತ್ತು ನಾವು ರೈತರಿಗೆ ಎಲ್ಲಾ ಸೌಲಭ್ಯಗಳನ್ನು ತಲುಪಿಸಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಸ್ವಲ್ಪ ಜನರಿಂದ ಏನಾದರೂ ವ್ಯತ್ಯಾಸ ಬಂದ ತಕ್ಷಣ ನಾವು ಆ ಯುವಕರನ್ನು ತೆಗೆದುಹಾಕಬೇಕು ಎನ್ನುವ ತೀರ್ಮಾನಕ್ಕೆ ಬರಬಾರದು. ಈ ಆಗ್ರೋ ಕೇಂದ್ರಗಳ ಮುಖಾಂತರ ಈಗ ಇರತಕ್ಕಂಥ ಮತ್ತೆ ಹೊಸದಾಗಿ ಎಲ್ಲೆಲ್ಲಿ ಬೇಕು ಅಲ್ಲಿಗೆ ಕೊಡತಕ್ಕಂಥ ವಿಚಾರವನ್ನು ಸಹ ನಾವು ಇಟ್ಟುಕೊಂಡಿದ್ದೇವೆ. ಈ ದಿಸೆಯಲ್ಲಿ ನಾವು ನಮ್ಮ ಪ್ರಯತ್ನವನ್ನು ಮುಂದುವರಿಸುತ್ತೇವೆ. ಇನ್ನು ಭೂ ಸಂರಕ್ಷಣಾ ವ್ಯಾಪ್ತಿ ಏನು ಇದೆ ತಮಗೆ ಗೊತ್ತಿರುವ ಹಾಗೆ ಅದೇ ಸಾಯಿಲ್ ಕನ್‌ಸರ್‌ವೇಶನ್ ಬಗ್ಗೆ ಆಪಾದನೆಗಳು ಬಂದಿವೆ. ಅನೇಕ ಕಂಪ್ಲೆಂಟ್ಸ್ ಬಂದಿವೆ. ಜಿಲ್ಲಾ ಪರಿಷತ್ತಿನ ಮೇಲೂ ಸಹ ಕಂಪ್ಲೇಂಟ್ಸ್ ಬಂದಿವೆ. ಎಲ್ಲೆಲ್ಲಿ ಏನೇನು ಆಗಿದೆ ಎನ್ನುವುದನ್ನು ತಾವು ಸಹ ನನ್ನ ಗಮನಕ್ಕೆ ತಂದಿದ್ದೀರಿ. ನಾನು ಆ ಎಲ್ಲಾ ವಿವರಗಳನ್ನು ಇಟ್ಟುಕೊಂಡಿದ್ದೇನೆ ಅದರ ಬಗ್ಗೆ ಸಂಪೂರ್ಣವಾದ ತನಿಖೆ ಮಾಡಿಸಿ ವರದಿ ಏನು ಬರುತ್ತದೆ ಅದರ ಮೇಲೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಆ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ ಮತ್ತು ಆಪಾದನೆಗಳು ಏನು ಬಂದಿವೆ ಅವುಗಳ ಬಗ್ಗೆ ಸರಿಯಾದ ರೀತಿಯಲ್ಲಿ ವಿಚಾರ ಮಾಡಿ ಕಾರ್ಯಕ್ರಮ ಕೂಡ ಹಾಕಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ವಾಟರ್ ಷಡ್ಸ್ ಬಗ್ಗೆ ಪ್ರತ್ಯೇಕವಾಗಿ ಒಂದು ಡಿಮ್ಯಾಂಡ್ ಇದೆ. ಇದಕ್ಕೆ ವಿಶ್ವಬ್ಯಾಂಕಿನ ನೆರವು ಬರುತ್ತದೆ ಮತ್ತು ಗೌರ್ನ್‌ಮೆಂಟ್ ಆಫ್ ಇಂಡಿಯಾ ಮತ್ತು ನಮ್ಮ ರಾಜ್ಯ ಸರ್ಕಾರದ ಪ್ರೋಗ್ರಾಂಗಳು ಮತ್ತು ಡಿಸಿ ಪ್ರೋಗ್ರಾಂಗಳು ಸಹ ಬರುತ್ತವೆ. ಈ ಜಲಾನಯನ ಪ್ರದೇಶಗಳು ಏನು ಇವೆ ಆ ಬಗ್ಗೆ. ಇನ್ನು ಒಣ ಬೇಸಾಯಕ್ಕೆ ಸಂಬಂಧಪಟ್ಟ ಹಾಗೆ ಕಾರ್ಯಕ್ರಮಗಳನ್ನು ನಾವು ಪ್ರಮಾಣಿಕವಾಗಿ ಮಾಡತಕ್ಕ ಪ್ರಯತ್ನವನ್ನು ಮಾಡಿದರೂ ಕೂಡ ನೂನ್ಯತೆಗಳು ಬರುತ್ತವೆ. ಮತ್ತು ಇದು ತಮ್ಮ ಗಮನದಲ್ಲಿ ಸಹ ಇದೆ ಎಂದು ನಾನು ಭಾವಿಸಿದ್ದೇನೆ. ಆದರೆ ಪ್ರಾಮಾಣಿಕ ಪ್ರಯತ್ನದ ಪ್ರಮಾಣ ಜಾಸ್ತಿ ಆಗಲೇ ಬೇಕು. ಅದಕ್ಕೆ ಸರ್ವಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಇನ್ನೊಂದು ಮಾತು ಏನೆಂದರೆ ಕೆಲವು ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂಸ್ ಬಗ್ಗೆ ಕೂಡ ನಾವು ವಿಚಾರ ಏತಕ್ಕೆ ಮಾಡಬಾರದು? ಆ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಬಿ.ಎಸ್ಸಿ (ಎಜಿ) ಓದಿದ ಹುಡುಗರು ಇದ್ದು ಅವರು ಸುಮಾರು ಒಂದು ಸಾವಿರ ಜನರು ಇದ್ದಾರೆ ಎನ್ನುವುದು ನನ್ನ ಭಾವನೆ. ಈಗ ಶಾಲಾ ಕಾಲೇಜುಗಳನ್ನು ನಾವು ತೆರೆಯುವುದು ಕೇವಲ ಎಂಪ್ಲಾಯ್‌ಮೆಂಟ್‌ಗೆ ಅಲ್ಲ. ನಾವು ಅಕ್ಷರಜ್ಞಾನ ಕೊಡುವುದಕ್ಕೆ ಶಾಲಾ ಕಾಲೇಜುಗಳನ್ನು ತೆರೆಯುತ್ತೇವೆ. ಅಥವಾ ಒಂದು ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಅದರಲ್ಲಿ ಪರಿಣಿತಿ ಪಡೆಯಬೇಕೆನ್ನುವ ದೃಷ್ಟಿಯಿಂದ ಮತ್ತು ನಾವು ವಿದ್ಯೆ ಕೊಡತಕ್ಕಂಥ ದೃಷ್ಟಿಯಿಂದ. ನಾವು ಯಾವುದೇ ರಾಷ್ಟ್ರವನ್ನು ತೆಗೆದುಕೊಂಡರೂ ಕೂಡ ಅಲ್ಲಿ ಇರತಕ್ಕಂಥಾದ್ದು ಮೂಲಭೂತವಾದ ನೀತಿ ಪ್ರಶ್ನೆ. ಅಕ್ಷರಜ್ಞಾನ ತೊಡೆದು ಹಾಕಿ ವಿದ್ಯೆ ಕೊಡತಕ್ಕಂಥಾದ್ದು. ಅಂದರೆ ಲಿಟರೆಸಿ ಅಂಡ್ ಎಜುಕೇಶನ್ ಈ ಎರಡನ್ನು ಕೂಡ ನಾವು ವಿಚಾರ ಮಾಡತಕ್ಕಂಥಾದ್ದು ಇದೆ. ಇಲ್ಲಿ ಭೂಮಿ ವಿಚಾರದಲ್ಲಿ ಸಮಗ್ರವಾಗಿ ಅಂದರೆ ನಮ್ಮ ಮಲೆನಾಡು ಪ್ರದೇಶಕ್ಕೆ ಪ್ರಾಸ್‌ಪೆಕ್ಟ್ಸ್‌ಬೇಕಾಗುತ್ತದೆ. ಅಥವಾ ಸುಣ್ಣದ ಪ್ರಮಾಣ ಎಷ್ಟು ಪಟ್ಟು ಬೇಕಾಗುತ್ತದೆ

ಎನ್ನುವ ವಿಚಾರಗಳು ಬರುತ್ತವೆ. ಯಾರು ನೋಡಿದರೂ ಹೇಳುವುದಕ್ಕೆ ಬರುವುದಿಲ್ಲ ಅದಕ್ಕೆ ನಾನು ಹೇಳುತ್ತೇನೆ ಡಿಸ್ಟ್ರಿಕ್ಟ್‌ಗೆ ಒಂದೊಂದು ಲ್ಯಾಬ್‌ರೇಟರೀಸ್ ಇರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ನಾನು ಮೊನ್ನೆ ಲಾಲ್‌ಬಾಗ್‌ಗೆ ಆರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಹೋಗಿದ್ದೆ. ಅಲ್ಲಿ ಇಡೀ ಕರ್ನಾಟಕ ರಾಜ್ಯಕ್ಕೆ ಅಲ್ಲಿ ಒಂದು ಮತ್ತೊಂದು ಕಡೆ ಇದೆ. ಆದರೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಡಿಸ್ಟ್ರಿಕ್ಟ್‌ಗೆ ಒಂದೊಂದು ಇದೆ. ಆದರೆ ನಮ್ಮ ರೈತನಿಗೆ ಆ ಜ್ಞಾನ ಇಲ್ಲ ಅವರು ಎಷ್ಟೇ ಹೋಗಿ ನೋಡಿದರೂ ಸಹ ಅವರ ಭೂಮಿಯ ಗುಣದ ಬಗ್ಗೆ ಅವರಲ್ಲಿ ಸರ್ಟಿಫಿಕೇಟ್ ಇಲ್ಲ. ನಾವು ಒಂದು ವಿಚಾರವನ್ನು ಮಾಡಿದ್ದೇವೆ. ನಾವು ಭೂಮಿ ಎಂತಹದ್ದು, ಯಾವ ರೀತಿಯಾಗಿದೆ? ಅದನ್ನು ಏನೇನು ಮಾಡಬೇಕು ಅದನ್ನು ಪರೀಕ್ಷೆ ಸಮೀಕ್ಷೆ ಮಾಡಿಸಬೇಕು. ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಸಮೀಕ್ಷೆ ಮಾಡಿಸಬೇಕು. ನಮ್ಮಲ್ಲಿ ಬೇರೆ ಬೇರೆ ಭೌಗೋಳಿಕ ಲಕ್ಷಣಗಳನ್ನುಳ್ಳ ಪ್ರದೇಶಗಳಿವೆ. ಬೇರೆ ಬೇರೆ ಹವಾಗುಣವನ್ನುಳ್ಳ ಪ್ರದೇಶಗಳಿವೆ. ಅವರಿಗೆ ಸರ್ಟಿಫಿಕೇಟ್ಸ್ ಕೊಡಿಸಬೇಕು. ಆಗ ಅದಕ್ಕೆ ಏನು ಬೇಕೆನ್ನುವುದು. ಗೊತ್ತಾಗುತ್ತದೆ. ನಾವು ಈಗ ಡಾಕ್ಟರುಗಳ ಹತ್ತಿರ ಹೋಗುತ್ತೇವೆ, ಅವರಿಗೆ ಇಂತಹ ಖಾಯಿಲೆ ಇದೆಯೆಂದು ಹೇಳಿದರೆ ಅವರು ಇಂತಹ ಔಷಧಯೆಂದು ಬರೆದುಕೊಡುತ್ತಾರೆ. ಚೀಟಿಯಲ್ಲಿ ಗುಳಿಗೆ ಬರೆದಿರುತ್ತಾರೋ, ಇಂಜಕ್ಷನ್ ಬರೆದಿರುತ್ತಾರೋ ಆ ಪ್ರಕಾರ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕು. ಆ ಭೂಮಿಗೆ ಏನು ಕೊರತೆಯಿದೆ ಎನ್ನುವುದನ್ನು ವಿಚಾರ ಮಾಡಬಹುದು. ಆ ಮೇಲೆ ಆ ಕೊರತೆಯನ್ನು ನೀಗಬಹುದು. ಸುಮ್ಮನೆ ಯೂರಿಯಾ ಹಾಕುವುದು, ಇಲ್ಲದಿದ್ದರೆ 16:16,16:20 ಹಾಕುವುದು., 19:19 ಹಾಕುವುದು feast or famine. This is the syndrome. ಆದರಿಂದ ನಾವು ನರಳುತ್ತಿದ್ದೇವೆ. ನಾವು ಇಲಾಖೆಯಲ್ಲಿ ಒಂದು ವಿಚಾರ ಮಾಡುತ್ತಿದ್ದೇವೆ. ಯಾರ‍್ಯಾರು ಬಿಎಸ್‌ಸಿ ಗ್ರಾಜುಯೇಟ್ಸ್ ಇದ್ದಾರೆ ಅವರಿಗೆ ಇನ್ಸೆಂಟೀವ್ ಕೊಟ್ಟು ತಾಲ್ಲೂಕು ಮಟ್ಟಗಳಲ್ಲಿ ಅಗ್ರಿಕಲ್ಚರಲ್ ಭೂಮಿಯನ್ನು ನೋಡುವುದಕ್ಕೆ ಏರ್ಪಾಡು ಮಾಡಲಾಗುವುದು. ಯಾರಾದರೂ ಸ್ಯಾಂಪಲ್ ತಂದರೆ ಅದನ್ನು ಪರೀಕ್ಷೆ ಮಾಡಿ ನಿಮ್ಮ ಭೂಮಿಗೆ ಇಂಥಿಂಥ ತೊಂದರೆಯಿದೆ ಎಂದು ತಿಳಿಸತಕ್ಕ ವ್ಯವಸ್ಥೆಯನ್ನು ಮಾಡಲಾಗುವುದು. ಅವರು ಇಂತಹ ಕೆಲಸ ಮಾಡಿದರೆ ಅವರಿಗೆ ಇನ್ಸೆಂಟೀವ್ ಕೊಡಬೇಕೆಂದು ವಿಚಾರ ಮಾಡಿದ್ದೇವೆ. ತಾಲ್ಲೂಕು ಮಟ್ಟದಲ್ಲಿಯೂ ಸಹ ಒಂದೊಂದು ಲ್ಯಾಬೋರೇಟರಿ ಮಾಡಬೇಕೆನ್ನುವ ವಿಚಾರ ಇದೆ. 8ನೇ ಪಂಚವಾರ್ಷಿಕ ಯೋಜನೆಯ ಡಿಮ್ಯಾಂಡ್ ಮೀಟ್ ಮಾಡಬೇಕಾದರೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ. ಮುಂದೆ ಬರತಕ್ಕ ಯೋಜನೆಗಳನ್ನು ನಾವು ಇಟ್ಟುಕೊಂಡಿದ್ದೇವೆ. ನಮ್ಮಲ್ಲಿ ಹಣವಿಲ್ಲ, how much money we should set apart for this purpose.

ಶ್ರೀ ಬಿ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಜಿಲ್ಲೆಗೊಂದು ಮಣ್ಣು ಪರೀಕ್ಷೆ ಮಾಡುವ ಕೇಂದ್ರಗಳನ್ನು ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ನಮ್ಮ ಬಿಜಾಪುರ ಜಿಲ್ಲೆಯೊಳಗೆ ಅಂತಹ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುತ್ತೀರಾ? ಅಂತಹ ಸಂಸ್ಥೆ ನಮ್ಮ ಜಿಲ್ಲೆಯಲ್ಲಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ:- ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ. ಆದಷ್ಟು ಮಟ್ಟಿಗೆ ತಾಲ್ಲೂಕು ಮಟ್ಟಕ್ಕೂ ಇದನ್ನು ತೆಗೆದುಕೊಂಡು ಹೋಗಬೇಕೆಂದು ಇದ್ದೇವೆ.

ಅಧ್ಯಕ್ಷರುಃ ಈ ಸಾರಿ ಬಿಜಾಪುರಕ್ಕೆ ಮಾಡುತ್ತೀರಲ್ಲಾ, ಅದು ಆಗುತ್ತದೆಯೆ?

ಶ್ರೀ ಎಸ್. ಬಂಗಾರಪ್ಪ:- ಮಾಡಿಯೇ ಮಾಡುತ್ತೇವೆ ಅದರ ಬಗ್ಗೆ ಅನುಮಾನ ಬೇಕಾಗಿಲ್ಲ.

ಅಧ್ಯಕ್ಷರುಃ ಮಾನ್ಯ ಸದಸ್ಯರು ಕುಳಿತುಕೊಳ್ಳಿ ನಿಮ್ಮ ಜಿಲ್ಲೆಗೆ ಅದು ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ:- ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು ಚೆನ್ನಾಗಿ ಹೇಳಿದ್ದಾರೆ ಅವರು ಹೇಳಿದ ವಿಚಾರಗಳನ್ನು ನಾನು ಕವರ್ ಮಾಡಿದ್ದೇನೆ. ಕೆಲವು ವಿಚಾರಗಳನ್ನು ಪ್ರಕಟಣೆ ಮಾಡಬೇಕಾಗಿದೆ. ನಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಏನಿವೆ ಅವುಗಳ ವಾಸ್ತವಾಂಶಗಳೇನು ಎಂಬುದನ್ನು ತಿಳಿಸಬೇಕಾಗುತ್ತದೆ. ನಮ್ಮಲ್ಲಿ ಎರಡು ಅಗ್ರಿಕಲ್ಚರಲ್ ಯೂನಿವರ್ಸಿಟಿಗಳು ಇವೆ. ಧಾರವಾಡದಲ್ಲಿರತಕ್ಕ ಕೃಷಿ ವಿಶ್ವವಿದ್ಯಾನಿಲಯಕ್ಕೆ

ಫಂಡ್ಸ್ ಜಾಸ್ತಿ ಮಾಡಬೇಕು. ಅದು ಇನ್ನು ಬೆಳವಣಿಗೆಯಾಗಿಲ್ಲ. ಅದನ್ನು ಶಕ್ತಿಯುತವಾಗಿ ಮಾಡದಿದ್ದರೆ, ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ ಭಾಗಕ್ಕೆ ಹೆಚ್ಚು ಒತ್ತು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಗ್ರಿಕಲ್ಚರಲ್ ಯೂನಿವರ್ಸಿಟಿ ಹೆಬ್ಬಾಳದಲ್ಲಿದೆ. ಅದು ಬಹಳ ಹಳೆಯದು ಅದಕ್ಕೆ ಒಳ್ಳೆಯ ಹೆಸರು ಇದೆ. ಅಲ್ಲಿಯೂ ನ್ಯೂನತೆಗಳಿವೆ. ಕೆಲವರ ಮೇಲೆ ಆಪಾದನೆಗಳು ಬಂದಿವೆ. ಏನು ಆಪಾದನೆಗಳು ಬಂದಿವೆ ಅವುಗಳನ್ನು ಯೋಗ್ಯ ರೀತಿಯಲ್ಲಿ ವಿಚಾರಣೆ ಮಾಡಬೇಕು. ಆದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಸರ್ಕಾರ ಮಾಡುತ್ತದೆ. ನಾವು ಇವುಗಳನ್ನು ಅಟಾನಮಸ್ ಬಾಡಿಗಳೆಂದು ಕರೆಯುತ್ತೇವೆ. ಎರಡೂ ಯೂನಿವರ್ಸಿಟಿಗಳು ಆ ರೀತಿ ಇವೆ. ಎರಡೂ ಯೂನಿವರ್ಸಿಟಿಗಳು ಕೋ-ಆಪರೇಷನ್‌ನಿಂದ ಕೆಲಸ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಅಗ್ರಿಕಲ್ಚರ್ ಮಿನಿಸ್ಟರ್ ಎರಡೂ ಯೂನಿವರ್ಸಿಟಿಗಳಿಗೆ ಪ್ರೊಚಾನ್ಸಲರ್ ಇರುತ್ತಾರೆ. ರಾಜ್ಯಪಾಲರು ಚಾನ್ಸಲರ್ ಇದ್ದು, ಎರಡು ಯೂನಿವರ್ಸಿಟಿಗಳಿಗೆ ವೈಸ್‌ಚಾನ್ಸಲರ್ ಇರುತ್ತಾರೆ. ಎರಡೂ ಯೂನಿವರ್ಸಿಟಿಗಳನ್ನು ಒಟ್ಟಿಗೆ ಹೇಗೆ ತರಬೇಕೆನ್ನುವ ಬಗ್ಗೆ ಒಂದು ಚಿಕ್ಕ ಸಮಿತಿಯನ್ನು ಅಧಿಕಾರಿಗಳ ಮಟ್ಟದಲ್ಲಿ ಮಾಡಿದ್ದೇವೆ. ಅವರು ಈ ಬಗ್ಗೆ ಸ್ಟಡಿ ಮಾಡಿ ಒಂದೇ ಚೌಕಟ್ಟಿನೊಳಗೆ ತರುವ ಬಗ್ಗೆ ಗಮನಹರಿಸುತ್ತೇವೆ. ಹಳ್ಳಿಯ ಮಕ್ಕಳನ್ನು ಬಿಎಸ್‌ಸಿ (ಎಜಿ)ಗೆ ಹೇಗೆ ಸೆಲೆಕ್ಟ್ ಮಾಡಿಸಬೇಕು, ರೈತರ ಮಕ್ಕಳಿಗೆ ಹೇಗೆ ಉತ್ತೇಜನ ಕೊಡಬೇಕು ಎಂಬ ಬಗ್ಗೆ 1980ರಲ್ಲಿ 10 ಮಾರ್ಕ್ಸ್ ಹೆಚ್ಚಿಗೆ ಕೊಡಬೇಕೆಂದು ಆಗಿರತಕ್ಕ ವಿಚಾರ ತಮಗೆ ಗೊತ್ತಿದೆ. ಈಗ ಎರಡೂ ವಿಧಾನದಲ್ಲಿದೆ. ಈ ರೀತಿ ಇದೆ. ಹತ್ತು ಮಾರ್ಕ್ಸ್ ಸೇರಿಸುವುದು ಒಂದು ರೀತಿ. ಇನ್ನೊಂದು 15% for those who come from the rural areas ಅಂದರೆ 1ರಿಂದ 7 ಕ್ಲಾಸಿನಲ್ಲಿ ಯಾರು ಓದಿರುತ್ತಾರೆ, ಅವರು ಎಂದು ಇಟ್ಟುಕೊಳ್ಳೋಣ ಒಂದು ಸಲಹೆ ಬಂದಿತ್ತು 1ರಿಂದ 10 ಮಾಡೋಣ ಎಂದು ಅಂದರೆ ಎಸ್.ಎಸ್.ಎಲ್.ಸಿ. ವರೆಗೆ ಓದುವುದು ಗ್ಯಾರಂಟಿ ಆಗಲಿ ಎಂದು. ಆದರೆ ಈ ಸಣ್ಣಪುಟ್ಟ ಪಟ್ಟಣದಲ್ಲಿಯೂ ಕೂಡ ರೈತರು ಅಲ್ಲಿ ಇರುವುದರಿಂದ, ಹಾಗೆ ಮಾಡಿದರೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ಬಂತು. ಆದ್ದರಿಂದ 1ರಿಂದ 7 ಕ್ಲಾಸ್ ಆಧಾರವಾಗಿಟ್ಟುಕೊಂಡು ಈ 15 ಪರ್ಸೆಂಟ್ ರಿಸರ್ವೇಶನ್ ಕೊಟ್ಟಿದ್ದಾರೆ. ಇದನ್ನು ಈ ಸಾರಿಯಿಂದ 20 ಪರ್ಸೆಂಟ್‌ಗೆ ಏರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಜೊತೆಗೆ 10 ಮಾರ್ಕ್ಸ್ ಅದು ಆ್ಯಡ್ ಆಗಿಯೇ ಆಗುತ್ತಿದೆ. ಇದನ್ನು ನಾವು ಬದಲಾವಣೆ ಮಾಡಿಲ್ಲ. ಅನಂತರ ಇಲ್ಲಿ ಮತ್ತೊಂದು, ಈ ಎಂಪ್ಲಾಯೀಸ್ ಆಫ್ ಯೂನಿವರ್ಸಿಟಿ ಎಂದು ಹೇಳಿ, ಕ್ಷಮಿಸಬೇಕು, ಸ್ವಲ್ಪ ಟೈಮ್ ತೆಗೆದುಕೊಳ್ಳುತ್ತಿದ್ದೇನೆ. ತಮಗೆ ತೊಂದರೆ ಕೊಡುವುದಕ್ಕೆ ನನಗೆ ಆಸೆ ಇಲ್ಲ. ಆದರೆ ಇದು ಅನಿವಾರ್ಯವಾಗಿದೆ. ಈ ಯೂನಿವರ್ಸಿಟಿ ಎಂಪ್ಲಾಯೀಸ್ ಏನು ಇದ್ದಾರೆ ಇವರ ಬಗ್ಗೆ ಹಿಂದೆ ಒಂದು ತೀರ್ಮಾನ ಅಲ್ಲಿ ಆಗಿಬಿಟ್ಟಿತ್ತು. ಅದೇನೆಂದರೆ ಹತ್ತು ಪರ್ಸೆಂಟ್‌ನಷ್ಟು ಸೀಟುಗಳನ್ನು ತೆಗೆದುಕೊಂಡು ಹೋಗಿ ಎಂಪ್ಲಾಯೀಸ್ ಮಕ್ಕಳಿಗೆ ಕೊಡಬೇಕು ಎಂದು. ನಾನು ಇದನ್ನು ಒಪ್ಪಲಿಲ್ಲ. ಎರಡೂ ಯೂನಿವರ್ಸಿಟಿಗಳ ಇಬ್ಬರು ವೈಸ್‌ಚಾನ್ಸ್‌ಲರ್‌ಗಳನ್ನು ಕರೆದು ಚರ್ಚೆಮಾಡಿ ಇದನ್ನು ವಿತ್‌ಡ್ರಾ ಮಾಡುವುದಕ್ಕೆ ಕೂಡ ತೀರ್ಮಾನ ಮಾಡಿದ್ದೇವೆ. ಇವತ್ತು ಎಂಪ್ಲಾಯೀಸ್ ಆಫ್ ಯೂನಿವರ್ಸಿಟಿ ಎಂದರೆ ಅರ್ಥ ಏನು? Vice-Chancellor of the University also comes under them. Can'you agree for that? ಅವರಿಗೆ ಇಲ್ಲಿ ನೌಕರಿ ಸಿಕ್ಕಿದೆ ಎಂದ ತಕ್ಷಣ ಅವರ ಮಕ್ಕಳಿಗೆ, ಹಿಂದೆ ಬೆಲೆ ಇರಲಿಲ್ಲ. ಯಾರೂ ಸೇರಿಸುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಇವತ್ತು ಬೆಲೆ ಬರ್ತಾ ಇದೆ. ಆಗಲೇ ಪರ್ಸೆಂಟೇಜ್ ಶುರುವಾಗಿಬಿಟ್ಟರೆ, ಅದನ್ನು ನಾನು ಒಪ್ಪುವುದಿಲ್ಲ. ಅದನ್ನು ವಿತ್‌ಡ್ರಾ ಮಾಡಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದೇವೆ. ಅಂತಿಮವಾಗಿ ಫೈನಲ್ ಆರ್ಡರ್ ಆಗಬೇಕಾಗಿದೆ. ಅಷ್ಟೆ. ಇದು ಬೆಂಗಳೂರು ಯೂನಿವರ್ಸಿಟಿಯಲ್ಲಿ ಆಗಿರುವಂಥಾದ್ದು. ಧಾರವಾಡದಲ್ಲಿ ಇದು ಆಗಿಲ್ಲ. ಅನಂತರ ಅವರೆಲ್ಲಾ ಬಂದಿದ್ದರು ಸ್ವಾಮಿ, ನಾವು ಎಂಪ್ಲಾಯೀಸ್ ಇದ್ದೇವೆ. ಇದನ್ನು ತೆಗೆದುಬಿಟ್ಟರೆ ಕಷ್ಟವಾಗುತ್ತದೆ" ಎಂದು ಅವರು ಹೇಳಿದಾಗ ನಾನು ಕೇಳಿದೆ 'ಯಾವ ಎಂಪ್ಲಾಯೀಸ್ ನೀವುಗಳು?'

ಎಂದು 'ನಾವೆಲ್ಲ ಗುಮಾಸ್ತರು' ಎಂದರು. ನಾನು ಹೇಳಿದೆ ನೋಡಿ ಕಸ ಹೊಡೆಯುವವನು, ನಿಜ ಹೇಳಬೇಕೆಂದರೆ 20-25 ವರ್ಷಗಳಿಂದ ಅವರು ಕಸ ತೆಗೆಯುತ್ತಿದ್ದಾರೆ. ಅನಿಮಲ್ ಹಸ್ಬೆಂಡರಿಯಲ್ಲಿರ ತಕ್ಕಂಥವರು, ಸಿರಿಕಲ್ಚರ್‌ನಲ್ಲಿರತಕ್ಕಂಥವರು, ಆಮೇಲೆ ಜೇನು ಸಾಕಣೆ ಮಾಡತಕ್ಕಂಥವರು, ಮಾವಿನಗಿಡ ನೆಡುವವರು, ಇವರೆಲ್ಲರೂ ಇದ್ದಾರೆ. ಹಾರ್ಟಿಕಲ್ಚರ್ ವಿಚಾರವನ್ನು ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಆಮೇಲೆ,ಬಹಳ ಒಳ್ಳೆಯ ಮಾವಿನ ತಳಿ ಪ್ರಾರಂಭ ಮಾಡಿದ್ದೇವೆ. ಕೋಳಿ ಸಾಕಣೆಯಲ್ಲಿ ಗಿರಿರಾಜ ಅಂತ ಒಂದು ತಳಿ ಅದನ್ನು ನೋಡಿದರೆ...

ಅಧ್ಯಕ್ಷರು:- ಅದನ್ನು ನೋಡಿಬಿಟ್ಟರೆ ಭಾಷಣವನ್ನು ಇಲ್ಲಿಗೇ ಮುಗಿಸಿ ಹೋಗಬೇಕು ಅಂತ ಅನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನೋಡಿದ್ದೀರೋ ಅಥವಾ ತಾವು ಅದನ್ನು ತಿಂದಿದ್ದೀರೋ? ಗಿರಿರಾಜ ಹೇಗಿದೆ ಅಂತ? ಚೆನ್ನಾಗಿದೆಯೋ?

ಶ್ರೀ ಎಸ್. ಬಂಗಾರಪ್ಪ:- ನನಗೆ ಇದು ಸಂತೋಷದ ವಿಚಾರ. ನಮ್ಮ ಹೊಸ ತಳಿ 'ಗಿರಿರಾಜ' ಕೋಳಿ ವಿಚಾರ ಕೇಳಿ ನಾಗರಾಜ್ ಅವರ ಬಾಯಲ್ಲಿ ನೀರು ಬಂತಲ್ಲ ಎಂದು ನನಗೆ ಬಹಳ ಸಂತೋಷವಾಗಿದೆ. ಗಿರಿರಾಜ ಹೆಸರಿಗೆ ತಕ್ಕ ಹಾಗೆ ಇದೆ ಬಹಳ ಚೆನ್ನಾಗಿ ಇದೆ. ಇವತ್ತು ನಮ್ಮ ಯೂನಿವರ್ಸಿಟಿ ಇಷ್ಟೆಲ್ಲ ಮಾಡಲಿಕ್ಕೆ ಬಹಳ ಕಷ್ಟಪಟ್ಟು ನಮ್ಮ ವಿಜ್ಞಾನಿಗಳು ಕೆಲಸ ಮಾಡಿದ್ದಾರೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. Hats off to our Scientists in Universities. ಅವರಿಗೆ ಇನ್ಸ್‌ಂಟೀವ್ಸ್ ಕೊಡಬೇಕು, ಹೆಚ್ಚು ಉತ್ತೇಜನ ಕೊಡಬೇಕು. ಇದನ್ನು ಮಾಡುತ್ತೇವೆ. ಈ ಸಂದರ್ಭದಲ್ಲಿ ಎಂಪ್ಲಾಯೀಸ್ ಮಕ್ಕಳು ಎಂದರೆ ವೈಸ್‌ಚಾನ್ಸಲರ್ ಮಕ್ಕಳಿಗೆ, ಪ್ರೊಫೆಸರ್ ಮಕ್ಕಳು, ಫ್ಯಾಕಲ್ಟಿ ಹೆಡ್ಸ್ ಅವರ ಮಕ್ಕಳಿಗೂ ಕೊಡಬೇಕು. ಕಸ ಗುಡಿಸುವವರು 25-30 ವರ್ಷಗಳಿಂದ ಇದ್ದಾರೆ. ನಾನು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ ಅವರನ್ನು ಖಾಯಂ ಮಾಡಿಸಬೇಕೆಂದು ಮಾಡಿ ಒಂದುಸೆಟ್ ಖಾಯಂ ಆಯಿತು. ದನಗಳು ಇದ್ದರೆ ಸಗಣಿ ತೆಗೆಯುವವರು ಬೇಕಲ್ಲ ಖಾಯಂ ಆಗಿ? ಇಲ್ಲದಿದ್ದರೆ ಅನಿಮಲ್ ಹಸ್ಬಂಡರಿ ವಿಚಾರದಲ್ಲಿ ದನಗಳನ್ನು ಮನೆಗೆ ಕಳಿಸಿಬಿಟ್ಟು ಸಬ್ಜೆಕ್ಟ್‌ನ್ನು ತೆಗೆದುಹಾಕಬೇಕಾಗುತ್ತದೆ. ಎಲ್ಲಿಯುವರೆಗೆ ಈ ಸಬ್ಜೆಕ್ಟ್ ಇರುತ್ತದೋ, ಅಲ್ಲಿಯುವರೆಗೆ ಸಗಣಿ ತೆಗೆಯುವವರು, ಬೇಕೇ ಬೇಕು. ಆದ್ದರಿಂದ ಯಾರು ಇವರೆಲ್ಲ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ, ಸುಪ್ರೀಂ ಕೋರ್ಟಿನಿಂದ ಜಡ್ಜ್‌ಮೆಂಟ್ ಆಗಿದೆ, ಎರಡೂ ಯೂನಿವರ್ಸಿಟಿಗಳಲ್ಲಿ ಯಾರ್‍ಯಾರು ಕೆಲಸ ಮಾಡುತ್ತಿದ್ದಾರೆ ಅವರನ್ನು ಖಾಯಂ ಮಾಡಬೇಕು ಎಂದು ಈ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಅವರ ಮಕ್ಕಳೂ ಇವತ್ತು ಎಂಪ್ಲಾಯೀಸ್ ಎಂದರೆ, ನಿಜವಾಗಿಯೂ ಬಡವರು ಬಿ.ಎಸ್.ಸಿ. (ಎ.ಜಿ) ನಲ್ಲಿ ಸೀಟು ಸಿಕ್ಕುವುದಿಲ್ಲವೆಂದು ಹೇಳಿದರೆ ಒಪ್ಪಬಹುದು. ನಾನು ಹೇಳಿದೆ, ನೀವು ಯೋಚನೆ ಮಾಡುವುದು ಬೇಡ, ನಿಮ್ಮ ಮಕ್ಕಳೂ ಬರಲಿ, ಸೀಟು ಕೊಡುವ ವ್ಯವಸ್ಥೆ ಮಾಡೋಣ, ಆದರೆ ಕಾನೂನು ಮಾಡಿ, ನಿಮ್ಮ ಹೆಸರಿನಲ್ಲಿ ಯಾರು ಯಾರೋ ಸೀಟು ತೆಗೆದುಕೊಳ್ಳುವುದು ಯಾರೂ ಒಪ್ಪುವುದಿಲ್ಲ, ಸರ್ಕಾರ ಮಾನ್ಯತೆ ಮಾಡುವುದಿಲ್ಲ, ಶಾಸನ ಸಭೆ ಒಪ್ಪುವುದಿಲ್ಲ, ಜನ ಒಪ್ಪುವುದಿಲ್ಲ, ವಿಧಾನಪರಿಷತ್ ಒಪ್ಪುವುದಿಲ್ಲವೆಂದು ನಾವು ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ತೀರ್ಮಾನ ಮಾಡಿದ್ದೇವೆ. ಇದೇ ಸಂದರ್ಭಲ್ಲಿ ನಾನು ಒಂದು ವಿಚಾರವನ್ನು ಪ್ರಕಟ ಮಾಡುತ್ತಿದ್ದೇನೆ. ಸರ್ಕಾರದವರು ತೀರ್ಮಾನ ಮಾಡಿದ್ದೇವೆ, ಎರಡು ಯೂನಿವರ್ಸಿಟಿಗಳಲ್ಲಿ, ಈಗಿರತಕ್ಕ ಬೆಂಗಳೂರಿನ ಹೆಬ್ಬಾಳ ಯೂನಿವರ್ಸಿಟಿಯಲ್ಲಿ ಅಗ್ರಿಕಲ್ಚರ್ ಕಾಲೇಜು ಇರುವುದನ್ನು ತಾವೂ ನೋಡಿದ್ದೀರಿ. ಹಾಗೆಯೇ ಧಾರವಾಡದಲ್ಲಿ ಅಗ್ರಿಕಲ್ಚರಲ್ ಇಂಜನಿಯರಿಂಗ್ ಕಾಲೇಜು ಇದೆ. ನಾನು ಅಗ್ರಿಕಲ್ಚರಲ್ ಮಿನಿಸ್ಟರಾಗಿ 1980ರಲ್ಲಿ ಇದ್ದಾಗ ಮೂರು ಕಾಲೇಜುಗಳನ್ನು ಪ್ರಕಟ ಮಾಡಿದ್ದೆನು. ಕುಶಾಲನಗರ, ಶಿವಮೊಗ್ಗ ಮತ್ತು ರಾಯಚೂರು. But only one college at Raichur came through. ಆಮೇಲೆ ಮಾಡಲೇ ಇಲ್ಲ. 8ನೇ ಫೈವ್ ಇಯರ್ ಪ್ಲಾನ್ ಪೀರಿಯಡ್‌ನಲ್ಲಿ ನಾವು ಡಿಮ್ಯಾಂಡ್ ಮೀಟ್ ಮಾಡಬೇಕೆಂದು ಇದ್ದರೆ, ನಾವು ಬಿ.ಎಸ್.ಸಿ.

ಅಗ್ರಿಕಲ್ಚರ್ ರೆಡಿ ಮಾಡಬೇಕಾಗುತ್ತದೆ. ಈ ಕಾಲೇಜುಗಳು ಅತಿ ಅವಶ್ಯ ಇದೆ. ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಯಾವ ರೀತಿಯಾಗಿ ಇಷ್ಟು ಜನಕ್ಕೆ ಒಬ್ಬ ಡಾಕ್ಟರು, ಇಷ್ಟು ಜನಕ್ಕೆ ಒಬ್ಬರು ಇಂಜನಿಯರು ಎಂದು ಮಾಡುತ್ತಿದ್ದೇವೆ. ಆದೇ ರೀತಿಯಾಗಿ ಒಬ್ಬ ಬಿ.ಎಸ್.ಸಿ. ಅಗ್ರಿಕಲ್ಚರ್ ಬರಲಿ. ನಾವು ಎಲ್ಲರಿಗೂ ನೌಕರಿ ಕೊಡುವ ಪ್ರಶ್ನೆ ಅಲ್ಲ. ಇವರನ್ನು ತನ್ನ ಭೂಮಿಯಲ್ಲಿ, ಒಳ್ಳೆಯ ಬೆಳೆ ತೆಗೆಯುವುದಕ್ಕೆ ವಿದ್ಯಾವಂತರನ್ನಾಗಿ ಮಾಡಿ ಕಳುಹಿಸೋಣ, ಕೃಷಿ ಕ್ಷೇತ್ರಕ್ಕೆ ಕಳುಹಿಸೋಣ ಎಂಬತಕ್ಕಂಥ ಒಂದು ವಿಚಾರಧಾರೆ. ಮೊನ್ನೆ ಈ ಸದನದಲ್ಲಿ, ಆ ಸದನದಲ್ಲಿ ಪ್ರಶ್ನೆಗಳು ಬಂದಾಗ, ಜಿ.ವಿ.ಕೆ.ರಾವ್ ಕಮಿಟಿ ವರದಿ ಮತ್ತು ಮೊನ್ನೆ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಇದ್ದಾಗ, ಕೊಟ್ಟ ವರದನ್ ಸಮಿತಿಯ ವರದಿಯನ್ನು ಅನುಸರಿಸಿ, ಬಿಜಾಪುರ, ಶಿವಮೊಗ್ಗ, ಮಂಡ್ಯ ಈ ಮೂರು ಕಡೆಗಳಲ್ಲಿ ಬಿ.ಎಸ್.ಸಿ.ಎ.ಜಿ. ಕಾಲೇಜುಗಳು ಆಗಬೇಕೆಂದು ಈ ವರದಿಯಲ್ಲಿ ಹೇಳಿದ್ದಾರೆ. ಮೂಡಿಗೆರೆ ಬಿ.ಎಸ್.ಸಿ. ಆರ್ಟಿಕಲ್ಚರ್ ಆಗಬೇಕೆಂದೂ ಈ 4 ಕಾಲೇಜುಗಳಿಗೆ ಈ ಎರಡು ಸಮಿತಿಗಳೂ ಶಿಫಾರಸ್ ಮಾಡಿವೆ. ಕುಶಾಲನಗರಕ್ಕೆ 10 ವರ್ಷಗಳ ಮುಂಚೆ ಆಗಬೇಕೆಂದು ಹೇಳಿದ್ದರೂ ಕೂಡ ಇದನ್ನು ಅನಂತರ ಮಾಡಬೇಕೆಂದೂ, ಹೇಳಿದ್ದಾರೆ. ಇದಕ್ಕೆ ಅನೇಕಸವಲತ್ತುಗಳು ಬೇಕಾಗಿದೆ. ನಾವು ಈ ವರ್ಷದ ಪ್ಲಾನ್‌ನಲ್ಲಿ, ಕಾಲೇಜುಗಳನ್ನು ಪ್ರಾರಂಭ ಮಾಡುವುದು, ಹೊಸದಾಗಿ ಪ್ರಕಟಣೆ ಮಾಡುವುದು ಇವುಗಳಿಗೆ ನಿಜವಾಗಿಯೂ ಹಣ ಇಟ್ಟಿಲ್ಲ. ಈಗ ನಾವು ಏನು ಮಾಡಿದ್ದೇವೆಂದರೆ, out of the Planned outlay ನಮ್ಮ ಮುಖ್ಯಮಂತ್ರಿಗಳನ್ನೂ ಹಾಗೂ ಹಣಕಾಸಿನ ಸಚಿವರವರನ್ನೂ ಒಪ್ಪಿಸಿದ್ದೇವೆ. ನೀವು ಒಪ್ಪುವುದಿಲ್ಲವೆಂದು ಹೇಳುತ್ತಿದ್ದೀರಿ. 4 ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಸಿದ್ಧತೆಗಳನ್ನು ಮಾಡಿದ್ದು, ಎರಡು ಯೂನಿವರ್ಸಿಟಿ ವೈಸ್ ಚಾನ್ಸಲರ್ ಅವರಿಗೆ ನಾವು ಈಗಾಗಲೇ ತಿಳಿಸಿದ್ದೇವೆ. ಹಣಕಾಸಿನ ಮುಗ್ಗಟ್ಟು ಇರುವುದರಿಂದ 4 ಕಾಲೇಜುಗಳನ್ನೂ ಪ್ರಾರಂಭ ಮಾಡುವುದಕ್ಕೆ ಆಗುತ್ತಿಲ್ಲ. ಈ ವರ್ಷ ಎರಡು ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಈಗಾಗಲೇ ಅಡ್ಮಿಷನ್ ಪ್ರಾರಂಭ ಮಾಡಲಾಗಿದೆ. ಧಾರವಾಡ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಬಂಧಿಸಿದಂತೆ, ಬಿಜಾಪುರದಲ್ಲಿ ಒಂದು ಈ ವರ್ಷವೇ ಪ್ರಾರಂಭ ಮಾಡಬೇಕೆಂದು ಈಗಾಗಲೇ ಸೂಕ್ತ ಆದೇಶವನ್ನು ಅಲ್ಲಿಯ ವೈಸ್‌ಚಾನ್ಸಲರಿಗೆ ಕಳುಹಿಸಿದ್ದೇವೆ. ಮತ್ತೊಂದು ಶಿವಮೊಗ್ಗ ಕಾಲೇಜು, 10 ವರ್ಷದ ಮುಂಚೆ ಆದದ್ದು. ಬಿಜಾಪುರ ಕಾಲೇಜಿನವರೆಗೆ 500-600 ಎಕರೆ ಭೂಮಿ ರೆಡಿ ಇದೆ, ಶಿವಮೊಗ್ಗದವರಿಗೆ ಒಂದು, ಒಂದೂವರೆ ಸಾವಿರ ಎಕರೆ ಷುಗರ್ ಫ್ಯಾಕ್ಟರಿ ಜಾಗ ಇದೆ. ಶಿವಮೊಗ್ಗದಲ್ಲಿ ಪಾಮೊಯಿಲ್ ರೀಸರ್ಚ್ ಸ್ಟೇಷನ್ ಬಂದಿದೆ. ಆಮೇಲೆ ನ್ಯಾಷನಲ್ ಅಗ್ರಿಕಲ್ಚರಲ್ ರೀಸರ್ಚ್ ಪ್ರಾಜೆಕ್ಟ್ ನಾರ್ತ್ 1, ನಾರ್ತ್ 2 ಪ್ರಾಜೆಕ್ಟ್‌ಗಳಲ್ಲಿ ಕೆಲವು ಬಿಲ್ಡಿಂಗ್ ಬರುತ್ತವೆ. ಇವುಗಳನ್ನೂ ಎಜುಕೇಷನ್ ಉದ್ದೇಶಕ್ಕಾಗಿ ಉಪಯೋಗಿಸಬಹುದು. ಈ ರೀತಿಯಲ್ಲಿ ನಾರ್ತ್ ಪ್ರಾಜೆಕ್ಟ್‌ನ್ನೂ ಇಟ್ಟುಕೊಂಡಿದ್ದೇವೆ. ನಿಜ ಹೇಳಬೇಕೆಂದರೆ, ತಮ್ಮ ಮಂಡ್ಯಾದಲ್ಲೂ ಫಾರಂ ಇದೆ, ಕೆಲವು ಬಿಲ್ಡಿಂಗ್ ಸಹ ಇದೆ. ಎಲ್ಲಾ ರೆಡಿ ಇದೆ, ಆದರೆ ಹಣಕಾಸಿನ ಮುಗ್ಗಟ್ಟಿನಿಂದ, ಕ್ಷಮಿಸಬೇಕು ತಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡುವುದಕ್ಕಾಗುತ್ತಿಲ್ಲ. ಮುಂದಿನ ವರ್ಷ ಪ್ಲಾನ್ ಔಟ್‌ಲೇಗೆ ತಂದು ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಅದೇ ರೀತಿ ಹಾರ್ಟಿಕಲ್ಚರ್ ಬಿ.ಎಸ್.ಸಿ. ಮೂಡಿಗೆರೆಯಲ್ಲಿ ಮುಂದಿನ ವರ್ಷ ಪ್ರಾರಂಭ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಈ ವರ್ಷದಿಂದ ಬಿಜಾಪುರ ಧಾರವಾಡ ಯೂನಿವರ್ಸಿಟಿ, ಬೆಂಗಳೂರು ಯೂನಿವರ್ಸಿಟಿಗೆ ಸೇರಿದಂತೆ, ಶಿವಮೊಗ್ಗ ಈ ಕಾಲೇಜುಗಳಲ್ಲಿ ಈ ವರ್ಷ ಪ್ರಾರಂಭ ಮಾಡಬೇಕೆಂದು ಯೂನಿವರ್ಸಿಟಿ ವೈಸ್‌ಚಾನ್ಸ್‌ಲರಿಗೆ ತಿಳಿಸಿದ್ದೇವೆ. ಈ ವರ್ಷದಿಂದಲೇ ಮಕ್ಕಳನ್ನು ಅಡ್ಮಿಷನ್ ಮಾಡುವುದಕ್ಕೆ ತಿಳಿಸಿ, ಒಂದೊಂದು ಕಾಲೇಜಿಗೆ 50-50 ಜನ ವಿದ್ಯಾರ್ಥಿಗಳನ್ನು ಸೇರಿಸಬೇಕೆಂದು,ವರದನ್ ಸಮಿತಿಯ ವರದಿಯಲ್ಲಿ ಬರತಕ್ಕ ವಿಚಾರ ಇರುವುದರಿಂದ, ಇದರ ಪ್ರಕಾರ ತಿಳಿಸಿದ್ದೇವೆ.

ಈಗಾಗಲೇ ಆಯಾ ಜಾಗದಲ್ಲಿ ಪ್ರಾರಂಭ ಮಾಡಿ, ಬಿಜಾಪುರದಲ್ಲಿ ಮತ್ತು ಶಿವಮೊಗ್ಗದಲ್ಲೇ ಖಾಯಂ ಆಗಿ ಮಾಡಬೇಕು, ಎಂದು ಹೇಳಿದ್ದೇವೆ, ಅದಕ್ಕಾಗಿ ಕಟ್ಟಡವನ್ನೂ ನೋಡಿ ಇಟ್ಟಿದ್ದೇವೆ. ಸುಮಾರಾಗಿ ಅದನ್ನು ಅಲ್ಲೇ ಪ್ರಾರಂಭ ಮಾಡುತ್ತೇವೆ. ಕೊನೆಯದಾಗಿ ಮುಖ್ಯವಾಗಿರತಕ್ಕಂಥ ನಮ್ಮ ಬೋರ್ಡ್ಸ್ ಮತ್ತು ಕಾರ್ಪೊರೇಷನ್ಸ್ ವಿಚಾರದಲ್ಲಿ ಹೇಳಬೇಕೆಂದರೆ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಐದು ನಿಮಿಷದಲ್ಲಿ ಮುಗಿಸುತ್ತೇನೆ. ಅಲ್ಲಿ ಬಹಳ ಲಾಸ್ ಆಗಿದೆ. ಅದಕ್ಕೆ ಹಲವಾರು ಕಾರಣಗಳು ಇವೆ. ಕೆಲವು ಅಲ್ಲಿ ಆಗಿರುವ ತಪ್ಪುಗಳಿಂದ ಆದರೆ, ಇನ್ನು ಕೆಲವು ಅನಿವಾರ್ಯ ಕಾರಣಗಳಿಂದ ಆಗಿದೆ. ಅದನ್ನು ನಾನು ನೋಡಿದ್ದೇನೆ. ವಿವರಗಳನ್ನು ಪರಿಶೀಲನೆ ಮಾಡುವುದಕ್ಕೆ ಕಾಲ ಸಾಕಷ್ಟುಬೇಕಾಗಿದೆ. ಅಲ್ಲಿರತಕ್ಕಂಥ ಟ್ರಾಕ್ಟರ್ಸ್ ಇರಬಹುದು, ಬುಲ್ಡೋಜರ್ಸ್ ಇರಬಹುದು, ವಿಪರೀತವಾಗಿರತಕ್ಕಂಥ ಸಾಮಗ್ರಿಗಳ ವಿಚಾರ ಇರಬಹುದು ಅದನ್ನೆಲ್ಲಾ ನೋಡಬೇಕಾಗಿದೆ. ಪ್ರಾಮುಖ್ಯವಾಗಿ ಒಂದು ಮಾತನ್ನು ತಿಳಿಸಿದ್ದೀರಿ. ಅಲ್ಲಿ ಸಾವಿರಗಟ್ಟಲೆ ಪಂಪ್‌ಸೆಟ್ಸ್ ಇದೆ, ಅದನ್ನು ಖರೀದಿ ಮಾಡುವ ಅಧಿಕಾರವನ್ನು ಎಲ್ಲಾ ಜಿಲ್ಲೆಗಳಿಗೆ ಕೊಟ್ಟಿದ್ದೀರಿ ಒಂದೊಂದು ಜಿಲ್ಲೆಯವರೂ ಒಂದೊಂದು ರೀತಿಯ 'ಮೇಕ್ಸ್' ತೆಗೆದುಕೊಂಡು ಮನಸ್ಸಿಗೆ ಬಂದಹಾಗೆ ಮಾಡಿಬಿಟ್ಟಿದ್ದಾರೆ ಎಂಬ ವಿಚಾರವನ್ನು ಶ್ರೀ ಖಮರುಲ್ ಇಸ್ಲಾಂರವರು ಶಿವಮೂರ್ತಿಯವರು ಇನ್ನೂ ಮೂರು ನಾಲ್ಕು ಜನ ಸದಸ್ಯರು ಹೇಳಿದರು. ಅದನ್ನು ಡೀಸೆಂಟ್ರಲೈಸ್ ಮಾಡಿದ್ದರಿಂದ ಈ ರೀತಿ ಆಗುತ್ತಿದೆ ಅದನ್ನು ಸೆಂಟ್ರಲೈಸ್ ಮಾಡಿ ಕೆ.ಎಸ್.ಎ.ಸಿ. ಯಿಂದ ಡೈರೆಕ್ಟ್ ಆಗಿ ಮಾಡಿದರೆ ಈ ರೀತಿ ಆಗುವುದಿಲ್ಲ ಎಂದರು. ಪಂಪ್‌ಸೆಟ್ ಕಳಪೆ ಒಂದೂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾರ್ಡ್‌ಲಿ ಟೆನ್ ಪರ್ಸೆಂಟ್ ಕೆಲಸ ಮಾಡುತ್ತಿದೆ ಎಂಬ ಆಪಾದನೆ ಮಾಡಿದ್ದಾರೆ. ಅದಕ್ಕಾಗಿ ನಾವು ಒಂದು ತೀರ್ಮಾನ ಮಾಡಿದ್ದೇವೆ. ಆದಷ್ಟು ಕೆ.ಎಸ್.ಎ.ಸಿ. ಯಿಂದ ಮಾಡಬೇಕು ಇಲ್ಲಿಂದಲೇ ಖರೀದಿ ಮಾಡಿ ಜಿಲ್ಲೆಗೆ ಕೊಡಬೇಕು ರೇಟ್ ಆಫ್ ಕಾಂಟ್ರಾಕ್ಟ್ ಲಿಸ್ಟ್ ಇದೆ ರೇಟ್ ಫಿಕ್ಸ್ ಆಗಿರತಕ್ಕಂಥಾದ್ದು ಇದೆ ಅಲ್ಲಿಂದ ಅವುಗಳನ್ನು ತೆಗೆದುಕೊಂಡು ಇಲ್ಲಿಂದಲೇ ಡೈರೆಕ್ಟ್ ಆಗಿ ತೆಗೆದುಕೊಂಡು ಹೋಗಿ ಕೊಡಬೇಕೆಂಬ ತೀರ್ಮಾನ ನಾವು ಮಾಡಿದ್ದೇವೆ. ಅದೇ ರೀತಿ ಈ ಸಂದರ್ಭದಲ್ಲಿ ಉಳಿದಿರತಕ್ಕಂಥ ಕೆ.ಎಸ್.ಎ.ಸಿ. ಚರಿತ್ರೆಗೆ ಹೋಗುವುದಕ್ಕೆ ಕಾಲದ ಅಭಾವದಿಂದ ಸಾಧ್ಯವಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಉಳಿದಿರತಕ್ಕಂಥ ಬೋರ್ಡ್ಸ್ ಕಾರ್ಪೊರೇಷನ್ಸ್ ವಿಚಾರದಲ್ಲಿ ಒಂದು ಮಾತಿನಲ್ಲಿ ಹೇಳುತ್ತೇನೆ. ಕರ್ನಾಟಕ ಕೋ ಆಪರೇಟೀವ್ ಆಯಿಲ್ ಸೀಡ್ಸ್ ಗ್ರೋಯರ್ಸ್ ಕೋ ಆಪರೇಟೀವ್ ಫೆಡರೇಷನ್ ಇದರ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ಸದಸ್ಯರಿಗೆ ಕಾಲದ ಅಭಾವದಿಂದ ಸಾಧ್ಯವಾಗಲಿಲ್ಲ. ನಿಜ ಹೇಳಬೇಕೆಂದರೆ ಇದು ಬಹಳ ಒಳ್ಳೆಯ ಫೆಡರೇಷನ್. ಅದರ ವಿವರಕ್ಕೆ ನಾನು ಹೋಗುವುದಕ್ಕೆ ಸಾಧ್ಯವಿಲ್ಲ. ವಿವರಗಳು ಬೇಕಾದಷ್ಟು ಇವೆ. ಇನ್ನು ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಬಹಳ ಮುಖ್ಯವಾದುದು. ಅಮೇಲೆ ಕರ್ನಾಟಕ ಸ್ಟೇಟ್ ಸೀಡ್ಸ್ ಸರ್ಟಿಫಿಕೇಟ್ ಏಜೆನ್ಸಿ ಇದೊಂದು ಸ್ಮಾಲ್ ಏಜೆನ್ಸಿ. ಕೆಲವು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡು ಒಳ್ಳೊಳ್ಳೆಯ ಎಕ್ಸ್‌ಪರ್ಟ್ಸ್ ಕಳುಹಿಸಿ ಸೀಡ್ಸ್ ಇನ್‌ಸ್ಪೆಕ್ಷನ್ ಮಾಡತಕ್ಕದ್ದು ಇದರ ಕೆಲಸ. ಕರ್ನಾಟಕ ಸೀಡ್ಸ್ ಕಾರ್ಪೊರೇಷನ್ ವಿಚಾರ ಹೇಳಿದ್ದಾರೆ. ಇನ್ನು ಕರ್ನಾಟಕ ಕಾಂಪೋಸ್ಟ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇದು ಕೆ.ಎಸ್.ಎ.ಸಿ.ಯ ಸಬ್‌ಸಿಡಿಯರಿ. ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಂಡಿರುವುದು. ಗಾರ್ಬೇಜನ್ನು ಕಾಂಪೋಸ್ಟ್ ಮಾಡತಕ್ಕದ್ದು ಅಲ್ಲಿರತಕ್ಕಂಥ ವರ್ಕ್ಸರ್ಸ್‌ಗೆ ಸಂಬಳ ಇಲ್ಲ ತೊಂದರೆಯಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಾವೆಲ್ಲಾ ಕ್ರಮ ತೆಗೆದುಕೊಂಡಿದ್ದೇವೆ ಕಾರ್ಯದರ್ಶಿಗಳು ಅಧಿಕಾರಿಗಳ ಮಟ್ಟದಲ್ಲಿ ಮಾತನಾಡಿ ಅಲ್ಲಿ ಯಾವ ರೀತಿ ತೊಂದರೆ ಇದೆ ನೋಡತಕ್ಕ ಕೆಲಸ ಮಾಡಿದ್ದೇವೆ. ಬೆಂಗಳೂರು ನಗರವನ್ನು ಶುಚಿಯಾಗಿ ಇಡಬೇಕು. ಗೊಬ್ಬರ ತಯಾರು ಮಾಡಬೇಕೆಂಬ ಅಭಿಪ್ರಾಯದಿಂದ ನಾವು ಮಾಡುತ್ತಿದ್ದೇವೆ.

ಇನ್ನೂ ಅನೇಕ ವಿಚಾರಗಳು ಇದ್ದರೂ ಕೂಡಾ ಕಾಲದ ಅಭಾವದಿಂದ ಹೇಳುವುದಕ್ಕೆ ಸಾಧ್ಯವಾಗಿಲ್ಲ. ಕೊನೆಯದಾಗಿ ಹಾರ್ಟಿಕಲ್ಚರ್ ಬಗ್ಗೆ ಹೇಳುತ್ತೇನೆ. ಹಾಪ್‌ಕಾನ್ಸ್ ವಿಚಾರದಲ್ಲಿ ಸಿಂಧ್ಯಾರವರು ಹೇಳಿದ್ದಾರೆ. ಹಾರ್ಟಿಕಲ್ಚರ್ ಬಗ್ಗೆ ಎರಡು ನಿಮಿಷ ಅಲ್ಲ ಎರಡು ಘಂಟೆಯಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. ಆದರೆ ಎರಡು ನಿಮಿಷದಲ್ಲಿ ನಾನು ಇದನ್ನು ಮುಗಿಸುತ್ತೇನೆ. ಮಾನ್ಯ

ಮರೀಗೌಡರನ್ನು ನಾವು ನೆನಸಿಕೊಳ್ಳಬೇಕು. ಒಬ್ಬೊಬ್ಬರ ಸೇವೆಯನ್ನು ನಾವು ಸ್ಮರಣೆ ಮಾಡಬೇಕು. ಎಂಜನಿಯರಿಂಗ್ ಫೀಲ್ಡ್‌ನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರನ್ನು ನಾವು ಇವತ್ತು ಆಧುನಿಕ ಕರ್ನಾಟಕ ರಾಜ್ಯದ ಶಿಲ್ಪಿ ಎಂದು ಹೇಳುತ್ತೇವೆ. ಬಟಾನಿಕಲ್ ಗಾರ್ಡನ್ಸ್ ವಿಚಾರದಲ್ಲಿ ಮಾನ್ಯ ಮರೀಗೌಡರ ಸೇವೆಯನ್ನು ಸ್ಮರಣೆ ಮಾಡಿಕೊಳ್ಳಬೇಕು. ಅವರ ಸೇವೆಯನ್ನು ಮರೆಯುವುದಕ್ಕೆ ಆಗುವುದಿಲ್ಲ. ಅವರು ಹಾರ್ಟಿಕಲ್ಚರಲ್ ಡೆವಲಪ್‌ಮೆಂಟ್‌ಗೋಸ್ಕರ ಫೋರ್ ಲಿಂಬ್ಸ್ ಅಪ್ರೋಚ್ ಮಾಡಿದ್ದಾರೆ. ಅಪಾರವಾದ ಅನುಭವದ ಹಿನ್ನಲೆಯಲ್ಲಿ ಅವರು ಮಾಡಿದ್ದಾರೆ. ನಾನೂ ಅವರು ಇಬ್ಬರೂ ಸೇರಿ ಮಾತನಾಡಿದ್ದೇವೆ. ಗೌರ್ನರ್ ಅಭಿಪ್ರಾಯವನ್ನೂ ನಾವು ತೆಗೆದುಕೊಂಡಿದ್ದೇವೆ. ಅವರೂ ಕೂಡಾ ಒಳ್ಳೆಯ ಹಾರ್ಟಿಕಲ್ಚರಿಸ್ಟ್. ಬಟಾನಿಕಲ್ ಗಾರ್ಡನ್ ವಿಚಾರದಲ್ಲಿ ಲಾಲ್‌ಬಾಗ್ ವಿಚಾರದಲ್ಲಿ ಏನು ಮಾಡಬಹುದಾಗಿದೆ ನೋಡುತ್ತಿದ್ದೇವೆ. ಕೆಲವರು ಅದಕ್ಕೆ ಎಂಟ್ರಿ ಫೀ ಇಡಬೇಕು ಅಲ್ಲಿ ಮರಗಿಡಗಳು ಹಾಳಾಗುತ್ತಿವೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಆದರೆ ಈಗ ನಾವು ಎಲ್ಲರಿಗೂ ಫ್ರೀಯಾಗಿ ಬಿಟ್ಟಿದ್ದೇವೆ. ಬರಲಿ ಓಡಾಡಿಕೊಂಡು ಹೋಗಲಿ ಮಕ್ಕಳು ಮರಿಯನ್ನು ಕಟ್ಟಿಕೊಂಡು ಹೋಗುತ್ತಾರೆ ಮಾರ್ನಿಂಗ್ ವಾಕ್ ಹೋಗುತ್ತಾರೆ ಎಂಧು ಬಿಟ್ಟಿದ್ದೇವೆ. ಕೆಲವರು ಎಂಟ್ರಿ ಫೀ ಇಡಬೇಕೆಂದು ಹೇಳಿದ್ದಾರೆ. ನಾವು ಇದನ್ನು ಇಲ್ಲಿಯವರೆಗೆ ಫ್ರೀಯಾಗಿ ಜನಗಳಿಗೆ ಬಿಟ್ಟಿದ್ದೆವು.ಬಂದು ನೋಡಿಕೊಂಡು ಹೋಗಲಿ ಎಂದು. ಓಡಾಡಲಿ ಎಂದು. ಅದು ಮಾರ್ನಿಂಗ್ ವಾಕ್ ಮಾಡುವುದಕ್ಕೆ ಇರಬಹುದು ಮತ್ತೊಂದಕ್ಕೆ ಇರಬಹುದು ಜನ ಬರುತ್ತಾರೆ ಒಂದು ನಾಮಿನಲ್ ರೇಟ್ ಇಡೀ ಆ ಹಣ ಮೈನ್‌ಟೇನ್ ಮಾಡುವುದಕ್ಕೆ ಬರುತ್ತದೆ ಎಂದು ಹೇಳಿದರು ಆದರೆ ಆದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಇಲ್ಲದೆ ಕಾರ್ಪೊರೇಟರ್ಸ್ ಮೇಯರ್ಸ್ ಅಭಿಪ್ರಾಯ ಇಲ್ಲದೆ ಆಲ್ ಪಾರ್ಟಿ ಮೆಂಬರ್ಸ್ ಅಭಿಪ್ರಾಯ ಇಲ್ಲದೆ ಸೋಷಿಯಲ್ ಆರ್ಗನೈಜೇಶನ್ಸ್‌ನವರ ಅಭಿಪ್ರಾಯ ಇಲ್ಲದೆ ಮಾಡುವುದಿಲ್ಲ. ಇವತ್ತು ಬೆಂಗಳೂರು ನಗರಕ್ಕೆ ಅನೇಕ ಜನ ಪ್ರವಾಸಿಗರು ಬರುತ್ತಾರೆ ಅವರ ಪರವಾಗಿ ಸಹ ನಾವು ಒಂದು ಮಾತನ್ನು ಹೇಳತಕ್ಕಂಥ ವಿಚಾರ ಇದೆ. ಇವರ ಎಲ್ಲರ ಅಭಿಪ್ರಾಯ ಕೇಳದೆ ನಾವು ಯಾವ ಒಂದು ತೀರ್ಮಾನಕ್ಕೂ ಬರಬಾರದು. ಇದರ ಬಗ್ಗೆ ಈಗಾಗಲೇ ಸುಮ್ಮನೆ ಸಲಹೆಗಳು ಬಂದಿವೆ ಎಂದು ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದೆ ಅಷ್ಟೇ. ಈ ಸಂದರ್ಭದಲ್ಲಿ ಅಲ್ಲಿ ಕೆರೆ ಇದೆ. ಮತ್ತೊಂದು ಇದೆ. ಅದೆಲ್ಲವನ್ನೂ ಹಾಳಾಗದಂತೆ ನೋಡಿಕೊಳ್ಳಬೇಕು. ಅಲ್ಲಿಂದ ನೀರು ಹರಿದುಬರುತ್ತದೆ ಎನ್ನತಕ್ಕಂಥ ವಿವರಗಳಿಗೆ ನಾವು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಮತ್ತು ಇದೇ ಸಂದರ್ಭದಲ್ಲಿ ಕಬ್ಬನ್ ಪಾರ್ಕ್ ಇದೆ. ನಮ್ಮ ವಿಧಾನ ಸೌಧದ ಸುತ್ತಮುತ್ತಲು ಗಾರ್ಡನ್ ಇದೆ. ಮಾನ್ಯ ಸಿಂಧ್ಯರವರು ಈ ಬಗ್ಗೆ ಸ್ವಲ್ಪ ಗಮನ ಕೊಡಿ. ಇದೆಲ್ಲವನ್ನು ತೋಟಗಾರಿಕೆ ಇಲಾಖೆಯವರೇ ನೋಡಿಕೊಳ್ಳತಕ್ಕಂಥಾದ್ದು ಇದು ನಮ್ಮ ಜವಾಬ್ದಾರಿ ಇದೆ. ವಿಧಾನ ಸೌಧದ ಕಟ್ಟಡ ಏನಿದೆ ಅದರ ಸುತ್ತಮುತ್ತಲು ಸುಂದರವಾಗಿ ಇರುವಂತೆ ನೋಡಿಕೊಳ್ಳುವ ಸಲುವಾಗಿ ನಾವು ದೀಪ ಕೊಟ್ಟಿದ್ದೇವೆ. ಅಲ್ಲಿಗೆ ಜನ ಸಾಯಂಕಾಲದ ಸಮಯ ಮಕ್ಕಳು ಮರಿಗಳನ್ನು ಕರೆದುಕೊಂಡು ನೋಡಲು ಬರುತ್ತಾರೆ. ಆದರೆ ನಮಗೆ ಬಹಳ ತೊಂದರೆಯಾಗಿದೆ. ಆದರೂ ನಾವು ಒಂದು ಜಿಯೋಫಿಜಿಕಲ್ ಸರ್ವೆ ಮಾಡಿದ್ದೇವೆ. ನಮಗೆ ನೀರಿನ ಕೊರತೆ ಅಸಾಧ್ಯವಾಗಿದೆ. ನಾವು ಬೋರ್‌ವೆಲ್‌ಗಳನ್ನು ಹಾಕಿಸಿದರೂ ಸಹ ಅವೆಲ್ಲಾ ಫೇಲ್ ಆದವು. ಮತ್ತೊಂದು ಭಾಗದಲ್ಲಿ ಆಗಿಲ್ಲವೆನ್ನುವ ವಿಚಾರ ಇದೆ. ಮೊನ್ನೆ ನಾವು ಹೈ ಲೆವೆಲ್ ಕಮಿಟಿ ಸೇರಿದ್ದೆವು. ಆ ಕಮಿಟಿಗೆ ಮುಖ್ಯಕಾರ್ಯದರ್ಶಿಗಳು ನಮ್ಮ ಇಲಾಖಾ ಕಾರ್ಯದರ್ಶಿಗಳು ಮತ್ತು ಜಿಯೋಫಿಜಿಕಲ್ ಡಿಪಾರ್ಟ್‌ಮೆಂಟ್‌ನವರು ಅಗ್ರಿಕಲ್ಚರ್ ಆರ್ಟಿಕಲ್ಚರ್ ಬೇರೆ ಬೇರೆ ಇಲಾಖೆಯವರು ಎಲ್ಲರೂ ಬಂದಿದ್ದರು ಮತ್ತು ಪೋಲೀಸ್ ಕಮಿಷನರ್ ಬಂದಿದ್ದರು. ಇವರೆಲ್ಲರೂ ಹೇಳಿದರು ಇಲ್ಲಿ ಹುಲ್ಲು ಎಲ್ಲಾ ತುಳಿದು ಹಾಳು ಮಾಡುತ್ತಾರೆ. ಇವೆಲ್ಲ ವಿಚಾರಗಳು ಬಂದಾಗ ಹೌದು ಒಂದು ಭಾಗವನ್ನು ನಾವು ತೆಗೆದುಕೊಂಡು ಆ ಭಾಗಕ್ಕೆ ಸಂಪೂರ್ಣವಾಗಿ ಬೇಲಿ ಹಾಕಿಕೊಳ್ಳಬೇಕೆನ್ನುವ ಅಭಿಪ್ರಾಯ ಕೂಡ ಬಂತು. ಈಗ ರೈತ ಸಂಘದವರು ಬಂದು ಅಲ್ಲಿ ಭಾಷಣ ಮಾಡಿದರು. ನಾವು ಇವನ್ನೆಲ್ಲಾ ಗಣನೆಗೆ ತೆಗೆದುಕೊಂಡಿದ್ದೇವೆ. ಅವರು ಇನ್ನು ಎಲ್ಲಿಗೆ ಹೋಗಬೇಕು ಆ ಜನ ಅಲ್ಲಿಗೆ ಬರಬಾರದು ಬೇಲಿ ಹಾಕಿಕೊಳ್ಳುತ್ತೇವೆಂದರೆ ಆ ಬೇಲಿಮುರಿದು ಬಂದರೆ ಏನು ಮಾಡುತ್ತೀರಿ ಎನ್ನುವ ಅಭಿಪ್ರಾಯ ಕೂಡ ಅಲ್ಲಿ ಬಂತು. ಅದಕ್ಕೆ ನಾವು ಏನಾದರೊಂದು ಕಾಯಕಲ್ಪ

ಇದಕ್ಕೆ ಮಾಡಲೇಬೇಕು. ಈ ಬಗ್ಗೆ ಸಲಹೆಗಳು ಏನು ಇನ್ನೂ ಬಂದಿಲ್ಲ. ನಾವು ವಿಚಾರ ಮಾಡಿ ಏನು ಮಾಡಬೇಕು ಎನ್ನುವ ಬಗ್ಗೆ ಗಮನ ಕೊಡುತ್ತಿದ್ದೇವೆ. ಮತ್ತೊಮ್ಮೆ ಒಂದು ಸಭೆ ಕರೆದು ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ಕೆಲವು ಭಾಗಗಳನ್ನು ಬಿಟ್ಟರೆ ಉಳಿದ ಭಾಗಗಳನ್ನು ಸುಂದರ ಮಾಡಬೇಕು ಎನ್ನುವ ತೀರ್ಮಾನವನ್ನು ನಾವು ಮಾಡಿದ್ದೇವೆ. ಈಗ ವಿಧಾನ ಸೌಧದ ಸುತ್ತಮುತ್ತಲು ಇರುವ ಗಾರ್ಡನ್‌ಗೆ ನಾವು ನೀರನ್ನು ಬೇರೆ ಕಡೆಯಿಂದ ತರಬೇಕು. ನಾವು ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನಿಂದ ನೀರನ್ನು ಏತಕ್ಕೆ ತರಬಾರದು ಎಂದು ಯೋಚನೆ ಮಾಡಿದಾಗ ನಮಗೆ ಜಾಸ್ತಿ ಕಾಸ್ಟ್ ಬರುತ್ತದೆ. ಮತ್ತೊಂದು ತೊಂದರೆ ಏನೆಂದರೆ ಕುಡಿಯುವ ನೀರಿಗೆ ತೊಂದರೆ ಇರುವಾಗ ಇವರು ಆ ನೀರನ್ನು ಗಿಡಗಳಿಗೆ ಹಾಕುತ್ತಾರೆ ಎಂದು ಕಾರ್ಪೊರೇಷನ್‌ನಲ್ಲಿ ಭಾಷಣ ಮಾಡುತ್ತಾರೆ. ಆದರೆ ಮಾನ್ಯ ಅಧ್ಯಕ್ಷರೇ ಇವೆಲ್ಲಾ ನಮಗೆ ಗ್ರೇಟ್ ಅಸ್ಸೆಟ್ಸ್. ಇದು ನಮಗೆ ಟಿಪ್ಪು ಸುಲ್ತಾನ್ ಮತ್ತು ಹೈದರಾಲಿ ಕಾಲದಿಂದ ಬಂದಿರತಕ್ಕಂಥಾವು 50-60 ಎಕರೆ ಲಾಲ್‌ಬಾಗ್ ಇದೆ. ಕಬ್ಬನ್ ಪಾರ್ಕ್ ಇದೆ. ಇವೆಲ್ಲಾ ನಮಗೆ ಒಂದು ದೊಡ್ಡ ಅಸ್ಸೆಟ್ಸ್. ನಾವು ಇವುಗಳನ್ನು ಕಳೆದುಕೊಳ್ಳಬಾರದು. ಮತ್ತೆ ನಾವು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಕಬ್ಬನ್ ಪಾರ್ಕಿನಲ್ಲಿ ಹೋಟೆಲ್ ಬಂದಿದೆ. ಅದು ಬಿಟ್ಟರೆ ಕೆಲವು ಬಿಲ್ಡಿಂಗ್‌ಗಳು ಬಂದಿವೆ. ಈಗ ನಮ್ಮ ಕೆ.ಜಿ.ಎಸ್. ಕ್ಲಬ್ ಇದೆ. ಅಲ್ಲಿಗೆ ನಾನು ಪ್ರತಿ ದಿವಸ ಬೆಳಿಗ್ಗೆ ಷಟಲ್ ಬ್ಯಾಟ್‌ಮಿಂಟನ್ ಆಟ ಆಡುವುದಕ್ಕೆ ಹೋಗುತ್ತೇನೆ, ಅದು ನಮ್ಮ ಎಂ.ಎಸ್. ಬಿಲ್ಡಿಂಗ್‌ಗೆ ಎದುರುಗಡೆ ಬರುತ್ತದೆ. ಅಲ್ಲಿ ಒಂದು ರಸ್ತೆ ಕೂಡ ಬರುತ್ತದೆ. ಏನೇ ಆದರೂ ಈಗ ಇರತಕ್ಕಂಥ ಜಾಗವನ್ನು ನಾವು ಕಳೆದುಕೊಳ್ಳುವುದಕ್ಕೆ ಹೋಗಬಾರದು. ಅಲ್ಲಿಗೆ ಎಲ್ಲಿಂದಲಾದರೂ ನೀರು ತಂದು ಇದನ್ನು ಸುಂದರ ಮಾಡಬೇಕೆನ್ನುವ ವಿಚಾರ ನಾವು ಇಟ್ಟುಕೊಂಡಿದ್ದೇವೆ. ಇನ್ನು ವಿಧಾನಸೌಧದ ಸುತ್ತಮುತ್ತಲು ಇರುವ ಗಾರ್ಡನ್ ಅನ್ನು ನೋಡಿಕೊಳ್ಳಲು ನೀರು ಬಂದರೆ ಜಿಯೋಫಿಜಿಕಲ್ ಸರ್ವೆ ಮಾಡಿ ಯಾವ ರೀತಿಯಲ್ಲಿ ತರಬೇಕೆಂದು ಯೋಚನೆ ಮಾಡಿ ನೀರು ತರುವ ಪ್ರಯತ್ನ ಮಾಡುತ್ತೇವೆ. ಇನ್ನು ಒಂದು ವಿಚಾರ ಎಂದರೆ ಹಾಪ್‌ಕಾಮ್ಸ್ ವಿಚಾರದಲ್ಲಿ ಮಾನ್ಯ ಸಿಂಧ್ಯರವರು ಮತ್ತು ಬೇರೆ ಬೇರೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಹಾಪ್‌ಕಾಮ್ಸ್ ಬಗ್ಗೆ ನಿಜ ಹೇಳಬೇಕೆಂದರೆ it is an asset; it is a crown to the Horticulture Department. I thank the officers for having bestowed their time, mind and everything. They have worked hard for the success of this HOPCOMS and so also the Director. ಈ ಕೆಲಸವನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಅವರು ತಮ್ಮ ಶಕ್ತಿ ಮೀರಿ ಮಾಡಿದ್ದಾರೆ. ಅದಕ್ಕೆ ನಾನು ಹೇಗೆ ಅಭಿನಂದನೆಗಳನ್ನು ಸಲ್ಲಿಸಿದ್ದೇನೋ ಹಾಗೆಯೇ ಇವರಿಗೂ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಲ್ಲಿ ತಾವು ನೋಡಿದ್ದೀರಿ. ಲಾಲ್‌ಬಾಗ್ ಈ ಕಡೆಗೆ ಇರತಕ್ಕಂಥ ಸರ್ಕಲ್ ಹತ್ತಿರ ಇರತಕ್ಕಂಥ ಜಾಗದಲ್ಲಿ ಇದೆ. ಅಲ್ಲಿ ರೈತರು 5 ಕೆಜಿ 10 ಕೆಜಿ ಬೆಂಡೆಕಾಯಿ ತಂದರೂ ಆರಾಮವಾಗಿ ಮಾರಿ ಕೊಂಡು ಹೋಗುತ್ತಾರೆ. ಮಧ್ಯಸ್ಥಗಾರರ ಹತ್ತಿರ ಹೋದಾಗ ಬುಟ್ಟಿ ತೆಗೆದು ಎಸೆಯುವುದು ಮತ್ತೊಂದು ಮಾಡುತ್ತಾರೆ. ನಿಜ ಹೇಳಬೇಕಾದರೆ ಟೋಮಾಟೋ ಹಣ್ಣಿನ ಒಂದು ವೆರೈಟಿ ಇದೆ. ಅದು ಡೈಲಿ ಡೆಲ್ಲಿಗೆ ಹೋಗುತ್ತಿದೆ. ತೆಂಗಿನ ಕಾಯಿ ಮತ್ತೊಂದು ವಿಚಾರ ಬಿಟ್ಟರೆ ಉಳಿದವನ್ನೆಲ್ಲಾ ತೂಕ ಮಾಡಿ ತೆಗೆದುಕೊಳ್ಳುತ್ತೇವೆ. ಕರಾರುವಕ್ಕಾದ ತೂಕ ರೇಟ್ ರಸೀದಿ ಹಣಪಾವತಿ ಆಗುತ್ತಿದೆ. ರೈತರು ತಡಮಾಡುವ ಹಾಗೆಯೇ ಇಲ್ಲ. ಬಂದತಕ್ಷಣ ಹಣ ಕೊಟ್ಟು ಕಳುಹಿಸುತ್ತಾರೆ. ನಮ್ಮ ವೆಹಿಕಲ್ಸ್ ಇವೆ. ಈಗ ಐದು ಜಿಲ್ಲೆಗೆ ಇಟ್ಟುಕೊಂಡಿದ್ದೇವೆ. ಇದನ್ನು 19 ಜಿಲ್ಲೆಗೂ ವಿಸ್ತರಿಸಬೇಕೆಂದು ಮಾನ್ಯ ನಂಜುಂಡಸ್ವಾಮಿಯವರು ಸಿಂಧ್ಯಾರವರು ಹೇಳಿದ್ದಾರೆ. ಅದೇ ನಮ್ಮ ಆಸೆ. ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಸೊಸೈಟೀಸ್ ಎಂದು ನಾವು ಏನು ಇಟ್ಟುಕೊಂಡಿದ್ದೇವೆ ಅದು ಏನೇನೂ ಕೆಲಸ ಮಾಡುತ್ತಿಲ್ಲ. ಉಪಯೋಗ ಇಲ್ಲ. ಈಗ ಇದು ಮೈಸೂರು ಕೋಲಾರ ತುಮಕೂರು ಬೆಂಗಳೂರು ಹೀಗೆ ಒಂದು ಐದು ಜಿಲ್ಲೆ ಬಿಟ್ಟರೆ ಬೇರೆ ಕಡೆ ಇಲ್ಲ. ನಾವು ಹಾಫ್‌ಕಾಮ್ಸ್ ಬ್ರಾಂಚ್‌ಗಳನ್ನು ಕರ್ನಾಟಕ ರಾಜ್ಯದ ಎಲ್ಲಾ 19 ಜಿಲ್ಲೆಗೆ ತೆಗೆದುಕೊಂಡು ಹೋಗಬೇಕೆಂಬ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಸಿದ್ಧತೆಗಳು ಬಹಳ ಬೇಕು. ಆ

ಯೋಜನೆ ಕೂಡಾ ಸಿದ್ಧವಾಗಿದೆ. ನ್ಯಾಷನಲ್ ಹಾರ್ಟಿಕಲ್ಚರಲ್ ಬೋರ್ಡ್‌ನವರೂ ಕೂಡಾ ಇದೊಂದು ಯೋಜನೆಯನ್ನು ಅಪ್ರೂವ್ ಮಾಡಿದ್ದಾರೆ.

ಶ್ರೀ ಎಂ..ವಿ. ವೆಂಕಟಪ್ಪ (ಮುಳಬಾಗಿಲು):- ಸ್ವಾಮಿ ಬೆಂಗಳೂರು ಕೋಲಾರ ಜಿಲ್ಲೆಯಲ್ಲಿ ಹಾರ್ಟಿಕಲ್ಚರಲ್ ಪ್ರಾಡಕ್ಟ್ಸ್ ಏನಿದೆ ಅದನ್ನು ಡೆವಲಪ್ ಮಾಡುವುದಕ್ಕೆ ಕೋಲ್ಡ್ ಸ್ಟೋರೇಜ್ ಪ್ರೋಸಸಿಂಗ್ ಯೂನಿಟ್ ಮಾಡುವುದಕ್ಕೆ ಇಂಡೋಡೇನಿಷ್ ಪ್ರಾಜೆಕ್ಟ್‌ನಲ್ಲಿ 8 ಕೋಟಿ ರೂಪಾಯಿಗಳ ಯೋಜನೆ ಇತ್ತು ಎಂದು ಜ್ಞಾಪಕ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ ಆ ರೀತಿಯ ಯೋಜನೆಗಳು ಇದೆ. ಅದು ಏನು ಎನ್ನತಕ್ಕಂಥ ವಿವರಗಳನ್ನು ಹೇಳುವುದಕ್ಕೆ ಸಾಧ್ಯ ಇಲ್ಲ. ಅಂತಿಮ ತೀರ್ಮಾನ ಬರಬೇಕಾಗಿದೆ. ಆದರೆ ಯೋಜನೆ ಇದೆ ಎಂದು ಕಾಣುತ್ತದೆ. ಈ ರೀತಿ ಬರತಕ್ಕಂಥ ಹಣ್ಣು ತರಕಾರಿಗಳನ್ನು ಎಲ್ಲಾ ಕಡೆಗೆ ನಾವು ಕಳುಹಿಸಿಕೊಡಬೇಕು. ಹಾಳಾಗಬಾರದು. ಹಣ್ಣು ಮತ್ತು ತರಕಾರಿ ಎಲ್ಲಾ ಪೆರಿಷಬಲ್ ಆರ್ಟಿಕಲ್ಸ್. ಕೋಲ್ಡ್ ಸ್ಟೋರೇಜ್ ಫೆಸಿಲಿಟೀಸ್ ಹೆಚ್ಚು ಇಡಬೇಕು ಎಂಬ ಮಾತನ್ನು ಸಿಂಧ್ಯಾರವರು ಹೇಳಿದರು. ಲಾರಿಯಲ್ಲಿ ಕಳುಹಿಸಿದರೂ ಕೂಡಾ ಅಲ್ಲೂ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟೇ ಕಳುಹಿಸಿಬೇಕಾಗುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ದ್ರಾಕ್ಷಿ, ದಾಳಿಂಬೆ ಬಹಳ ಬರುತ್ತಿದೆ. ಅಲ್ಲಿಯ ಒಣ ಹವೆಯಲ್ಲಿ ಅದು ಬಹಳ ಫಾಸ್ಟ್ ಆಗಿ ಬರುತ್ತಿದೆ. ಇದಕ್ಕೆ ಎಲ್ಲಾ ವ್ಯವಸ್ಥೆ ಮಾಡಲು ಒಂದು ಯೋಜನೆ ಅಪ್ರೂವ್ ಆಗಿದೆ. ಅದನ್ನು ವ್ಯಾಪಕ ಮಾಡುವುದಕ್ಕೆ ಹಣ ಸಾಲದು. ಇದಕ್ಕೆ ವರ್ಲ್ಡ್ ಬ್ಯಾಂಕ್ ಏಡೇಡ್ ಪ್ರಾಜೆಕ್ಟ್ಸ್ ಸೆಂಟ್ರಲ್ ಗೌರ್ನ್‌ಮೆಂಟ್ ಸ್ಕೀಮ್‌ಗಳನ್ನು ನಾವು ತರಬೇಕಾಗುತ್ತದೆ. ನಮ್ಮ ರಾಜ್ಯ ಸರಕಾರದ ಪಾಲನ್ನೂ ಇಟ್ಟುಕೊಂಡು ಮುಂದಕ್ಕೆ ಹೋಗಬೇಕಾಗುತ್ತದೆ. ರೈತರಿಗೆ ನಾವು ಹಣ್ಣು ತರಕಾರಿ ಮಾರಾಟ ಮಾಡುವ ಸೌಲಭ್ಯ ಅಷ್ಟೇ ಮಾಡುವುದಿಲ್ಲ. ಅವರಿಗೆ ಬೇಕಾದ ಇನ್‌ಪುಟ್ಸ್, ಪೆಸ್ಟಿಸೈಡ್ಸ್ ಫರ್ಟಿಲೈಜರ್ಸ್ ಸೀಡ್ಸ್ ಇವುಗಳನ್ನೂ ಕೂಡಾ ಹಾಪ್‌ಕಾಮ್ಸ್ ಮುಖಾಂತರ ಕೊಡುತ್ತಿದ್ದೇವೆ. ಬ್ರಾಂಚಸ್ ತೆಗೆದಿದ್ದೇವೆ. ಜನ ಎಷ್ಟು ಖುಷಿಯಾಗಿದ್ದಾರೆ ಎಂದರೆ ಲೇಡೀಸ್ ಜೆಂಟ್ಸ್ ಮಕ್ಕಳು ಎಲ್ಲಾ ಬಂದು ತೆಗೆದುಕೊಂಡು ಹೋಗುತ್ತಿದ್ದಾರೆ. ನೀತಿಯಿಂದ ವ್ಯಾಪಾರವಾಗುತ್ತಿದೆ. ಮೋಸ ನಡೆಯುವುದಕ್ಕೆ ಅಧಿಕಾರಿಗಳು ಬಿಡುತ್ತಿಲ್ಲ. ಒಳ್ಳೆಯ ಸೂಪರ್‌ವಿಷನ್ ಇದೆ. ಎಲ್ಲಾದರೂ ಸಣ್ಣ ಪುಟ್ಟ ಲೋಪದೋಷಗಳು ಇದ್ದರೆ ಅದನ್ನು ತಿದ್ದಿಕೊಂಡು ಮುಂದಕ್ಕೆ ಹೋಗುತ್ತೇವೆ. ಹಾಪ್‌ಕಾಮ್ಸ್ ಮುಖಾಂತರ ಕರ್ನಾಟಕ ರಾಜ್ಯದ ಹಾರ್ಟಿಕಲ್ಚರಲ್ ವ್ಯಾಪ್ತಿಯಲ್ಲಿ ಬರತಕ್ಕಂಥ ಬೆಳೆಗಾರರು ಯಾರಿದ್ದಾರೆ ನಾನು ಅವರಿಗೆ ಒಂದು ಮಾತನ್ನು ಹೇಳುತ್ತೇನೆ. ಧೈರ್ಯದಿಂದ ಬೆಳೆಯಿರಿ. ನಮ್ಮ ರಾಜ್ಯದ ಕ್ಲೈಮಾಟಿಕ್ ಕಂಡೀಷನ್ಸ್ ಏನಿದೆ ಇದು ಹಾರ್ಟಿಕಲ್ಚರಲ್ ಔಟ್‌ಪುಟ್ಸ್‌ಗೆ ಹೈಲಿ ಸೂಟಬಲ್ ಆಗಿದೆ. ಆದುದರಿಂದ ದಯವಿಟ್ಟು ನೀವು ಬೆಳೆಯಿರಿ. ಇದರ ಬಗ್ಗೆ ವ್ಯವಸ್ಥೆ ಮಾಡತಕ್ಕಂಥ ಜವಾಬ್ದಾರಿ ನಾವು ತೆಗೆದುಕೊಳ್ಳುತ್ತೇವೆ. ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅನೇಕ ವಿವರಗಳು ಬೇಕಾದಷ್ಟು ಇದ್ದರೂ ಘಂಟೆಗಟ್ಟಲೆ ಹೇಳುವುದಕ್ಕೆ ಸಾಧ್ಯ ಇದ್ದರೂ ಕಾಲದ ಅಭಾವದಿಂದ ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನನ್ನ ಒಂದೇ ಇಲಾಖೆಗೆ ಉತ್ತರ ಹೇಳಲು ಅವಕಾಶ ಸಿಕ್ಕಿದುದರಿಂದ ಇಷ್ಟು ಹೊತ್ತಾದರೂ ಅವಕಾಶ ಸಿಕ್ಕಿತು. ನಾನು ಅದಕ್ಕಾಗಿ ಮುಖ್ಯವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ತಮ್ಮ ಮುಖಾಂತರ ಸದನದ ಎಲ್ಲಾ ಮಾನ್ಯ ಸದಸ್ಯರನ್ನೂ ಅಭಿನಂದಿಸಬೇಕು.

ಮಾನ್ಯ ವೆಂಕಟಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಬಂದಿದೆ. ನಿಮ್ಮ ಮನಸ್ಸಿನಲ್ಲಿ ಇರತಕ್ಕಂಥಾದ್ದು ಇಂಡೋ ಬಲ್ಗೇರಿಯನ್ ಪ್ರಾಜೆಕ್ಟ್. ಟೊಮ್ಯಾಟೋ ಮತ್ತು ಟೊಮ್ಯಾಟೋ ಪ್ರಾಡಕ್ಟ್ಸ್‌ನ್ನು ಎಕ್ಸ್‌ಪೋರ್ಟ್ ಮಾಡಬೇಕೆಂದು ಇತ್ತು. That project did not take off because the Bulgarians backed out later on. ಅದು ಬೇಡ ಎನ್ನತಕ್ಕಂಥ ದೃಷ್ಟಿಯಿಂದ ಅವರು ಕೈಬಿಟ್ಟರು ಎಂಬ ಅಂಶವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಅದು ಬೇಡವೆಂದು ಅವರೇ ಕೈಬಿಟ್ಟರು. ಇಷ್ಟು ವಿಚಾರ ಈ ಸಂದರ್ಭದಲ್ಲಿ ಹೇಳಿ ಕರ್ನಾಟಕದ ರೈತರಿಗೆ ಈ ಸಾರಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನಮ್ಮ ಕೃಷಿ ಇಲಾಖೆಯಿಂದ ಹೆಚ್ಚಿನ ಜವಾಬ್ದಾರಿ ವಹಿಸಿ ಪ್ರಮಾಣಿಕವಾಗಿ ನಿಮ್ಮನ್ನು ಪ್ರೀತಿ ವಿಶ್ವಾಸದಿಂದ ಕಾಣುವ ಪ್ರಯತ್ನ ಮಾಡುತ್ತೇವೆ ನಮ್ಮ

ಅಧಿಕಾರಿಗಳು ಎಲ್ಲೇ ಆದರೂ ತಪ್ಪು ಮಾಡಿದರೆ ಅದನ್ನು ಅವರ ಮೇಲಿನ ಅಧಿಕಾರಿಗಳಿಗೆ ಅಥವಾ ನನ್ನ ಗಮನಕ್ಕೆ ತರಬೇಕು ಅದರ ಬಗ್ಗೆ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಹಾಗೂ ನಮ್ಮ ಇಲಾಖಾ ಪತಿಯ ಜ್ಞಾನವನ್ನು ಧಾರಾಳವಾಗಿ ಅವರು ಪಡೆಯಬಹುದು. ಈ ವರ್ಷ ಬಿತ್ತನೆ ಕೆಲವು ಭಾಗ ಬಿಟ್ಟರೆ ಬೇರೆ ಎಲ್ಲಾ ಕಡೆ ಚೆನ್ನಾಗಿ ಆಗಿದೆ. ಬೆಳೆ ಚೆನ್ನಾಗಿ ಆಗಲಿ ರೈತರಿಗೆ ಹರ್ಷ ತರಲಿ ನಮ್ಮ ಇಲಾಖೆ ಮೂಲಕ ಮುಂದಿನ 8ನೇ ಪಂಚವಾರ್ಷಿಕ ಯೋಜನೆಗೆ 90-91ರ ಟಾರ್ಗೆಟ್ ಏನಿದೆ ಅದನ್ನು ಸಾಧಿಸುವ ಮಟ್ಟಕ್ಕೆ ಹೋಗೋಣ ಕರ್ನಾಟಕದ ರೈತರ ಬೆಂಬಲವಿಲ್ಲದೆ ಈ ಗುರಿ ಸಾಧಿಸಲು ನಮ್ಮ ಇಲಾಖೆಗೆ ಸಾಧ್ಯವಿಲ್ಲ. ಆದ್ದರಿಂದ ಈ ಸದನದ ಮೂಲಕ ವಿನಂತಿಸಿಕೊಳ್ಳುತ್ತೇನೆ ಒಳ್ಳೆಯ ಬೆಳೆ ಬೆಳೆದು ಈ ವರ್ಷ ಒಂದು ಸಾಧನೆ ಆಯಿತು ಎಂದು ಹೇಳುವ ಮಟ್ಟಕ್ಕೆ ತಲುಪ್ಪೋಣ ಎಂದು ಶುಭ ಹಾರೈಸಿ ದೇವರನ್ನು ಪ್ರಾರ್ಥನೆ ಮಾಡಿ ಒಳ್ಳೆಯ ಮಳೆ ನಮಗೆ ಕೊಡಲಿ. ಅಧ್ಯಕ್ಷರೇ ತಮಗೆ ಅಭಿನಂದನೆಗಳು ಬಹಳ ಹೊತ್ತಿನವರೆಗೆ ನನ್ನ ವಿಚಾರಧಾರೆಯನ್ನು ಉತ್ತರ ರೂಪದಲ್ಲಿ ಹೇಳಲು ಅವಕಾಶ ಮಾಡಿಕೊಟ್ಟಿದ್ದೀರಿ ಹಾಗೂ ಸದನದ ಎಲ್ಲಾ ಸದಸ್ಯರಿಗೂ ಅಭಿನಂದಿಸುತ್ತೇನೆ. ತಮ್ಮ ಸಲಹೆ ಸಹಕಾರಗಳನ್ನು ನಾನು ಮುಂದೆ ಬರುವ ದಿನಗಳಲ್ಲಿ ಎದುರು ನೋಡುತ್ತೇನೆ. ಯಾವುದೇ ಸಂದರ್ಭದಲ್ಲೂ ಕೂಡ ತಮ್ಮ ಕ್ಷೇತ್ರದ ಸೇವೆಗಾಗಿ ನನ್ನನ್ನು ಸಂಪರ್ಕಿಸಿದರೆ ನಾನು ತಮ್ಮ ಜನರ ಸೇವೆಗೆ ಸದಾ ಸಿದ್ಧ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ:- ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರು ಬಹಳ ಜನರಿದ್ದಾರೆ ಸಚಿವರು ಹೇಳಿದರು ಈ ಕೃಷಿ ಕೂಲಿಗಾರರಿಗೆ ಭೂ ನ್ಯಾಯಮಂಡಲಿಗೆ ಅರ್ಜಿ ಹಾಕುವುದಕ್ಕೆ ಅವಕಾಶ ಸಿಗಬೇಕೆಂದು. ಎಷ್ಟೋ ಸಾವಿರ ಜನ ನಿವೇಶನವಿಲ್ಲದೆ ಬಹಳ ಬೇಜಾರಿನಲ್ಲಿದ್ದಾರೆ ಈ ಬಗ್ಗೆ ಅನೇಕ ಸಲ ಕೇಳಿದೆವು 6 ತಿಂಗಳ ಮಟ್ಟಿಗೆ ಅವಕಾಶ ಕೊಡಿ ಎಂದು ಅದನ್ನು ಕೊಡಬೇಕು ಮತ್ತು ರೈತಾಪಿ ಜನರು ವೃದ್ಧರಾದ ಮೇಲೆ ಮಾಸಾಶನ ಕೊಡುವುದು ಕೇರಳದಲ್ಲಿದೆ. ಆ ತರಹ ಇಲ್ಲೂ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪಃ- ಕನಿಷ್ಟ ಕೂಲಿ ದರ ಕೊಡುವಂಥಾದ್ದೇ ಒಂದು ವಿಚಾರಧಾರೆ ಮಾಸಾಶನ ಕೊಡುವುದು ಪಾಲಿಸಿ ವಿಷಯ, ಸರ್ಕಾರ ಇದನ್ನು ಪರಿಶೀಲಿಸುತ್ತದೆ.

ಶ್ರೀ ಬಸವರಾಜ ಅಟ್ಟೂರುಃ- ಕರ್ನಾಟಕ ಆಗ್ರೋ ಕಾರ್ಪೊರೇಷನ್ ಮೂಲಕ ಹಣ್ಣಿನ ರಸದ ಪ್ಯಾಕೆಟ್‌ಗಳನ್ನು ಮಾರುತ್ತಿರುವುದು ಸರಿಯಷ್ಟೆ. ಇಲ್ಲಿ ಹಣ್ಣಿನ ರಸ ಸಂಗ್ರಹಿಸಿ ಅದನ್ನು ಆಂಧ್ರಕ್ಕೆ ಕಳಿಸಿ ಅಲ್ಲಿ ಪ್ಯಾಕೆಟ್ ಮಾಡಿಸಿಕೊಂಡು ಬಂದು ಮಾರುವ ವ್ಯವಸ್ಥೆ ಈಗಿರುವುದು. ಇದರಿಂದ ಕರ್ನಾಟಕಕ್ಕೆ ದೊಡ್ಡ ಹಾನಿಯಾಗುವುದು ಆದ್ದರಿಂದ ಪ್ಯಾಕೆಟ್ ಮಾಡುವ ಪ್ಲಾಂಟನ್ನು ಕರ್ನಾಟಕದಲ್ಲೇ ಸ್ಥಾಪಿಸಿ ಈ ಕೆಲಸವನ್ನು ಇಲ್ಲೇ ಮಾಡಬೇಕು. ಎರಡನೆಯದಾಗಿ ಬೀದರ್‌ನಲ್ಲಿ ಮೂರು ವರ್ಷಗಳಲ್ಲಿ ಪಶು ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಲಾಗಿದೆ. ಇಡೀ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಅಲ್ಲೇ ಸ್ಥಾಪನೆಯಾಗಿರೋದು. ಇದಕ್ಕೆ ಸಾಕಷ್ಟು ಹಣವಿಲ್ಲದೆ ಕಟ್ಟಡ ಕಟ್ಟಲಿಕ್ಕೆ ಕೆಲಸ ಮಾಡಲಿಕ್ಕೆ ದುಡ್ಡಿನ ಕೊರತೆಯಾಗಿದೆ ಹೋದವರ್ಷ ಬಜೆಟ್‌ನಲ್ಲಿ ಹಣ ಬಿಡುಗಡೆ ಆಗಲಿಲ್ಲ. ಈ ವರ್ಷವಾದರೂ ಲಕ್ಷ್ಯ ಕೊಟ್ಟು ಬಿಲ್ಡಿಂಗ್ ಕಡೆ ಗಮನಕೊಡಬೇಕು.

MR. SPEAKER:- Is it a fact? Is it being done?

ಶ್ರೀ ಎಸ್. ಬಂಗಾರಪ್ಪಃ- ಪ್ಯಾಕೇಜಿಂಗ್ ವಿಷಯದಲ್ಲಿ we have stopped this cool drinks. ಗಾಲ ಅಂತ ಇತ್ತು ಈಗ ಅದನ್ನು ಬಿಟ್ಟಿದ್ದೇವೆ. ಎರಡನೆಯದು ಕಟ್ಟಡ ಕಟ್ಟುವ ವಿಚಾರ. ಅದನ್ನು ಹಣಕಾಸಿನ ದೃಷ್ಟಿಯಿಂದ ಗಮನದಲ್ಲಿಡುತ್ತೇನೆ.

ಶ್ರೀ ಬಸವರಾಜ ಅಟ್ಟೂರುಃ- ಪ್ಯಾಕೇಜ್ ಯೂನಿಟ್ ಮಾಡಲು ಜಾಸ್ತಿ ದುಡ್ಡು ಬೇಕಾಗಿರಲಿಲ್ಲ.

ಅಧ್ಯಕ್ಷರುಃ- ಕುಡಿಯಲು ಬೇರೆ ಬೇರೆ ವಸ್ತುಗಳು ಸಿಗುವುದರಿಂದ ಜನರು ಬಹುಶಃ ಅದನ್ನು ಕುಡಿದಿಲ್ಲ.

ಶ್ರೀ ಪಾಟೀಲ್ ಬಸವನಗೌಡ ಸೋಮನಗೌಡ:- ಬಿಜಾಪುರ ಜಿಲ್ಲೆಗೆ ಬಹಳ ವರ್ಷಗಳಿಂದ ಬೇಡಿಕೆ ಆಗಿದ್ದ ಒಕ್ಕಲುತನ ಕಾಲೇಜನ್ನು ಕೊಟ್ಟಿರುವ ಆಶ್ವಾಸನೆ ಸಿಕ್ಕಿರುವುದರಿಂದ ಸಚಿವರಿಗೆ ತುಂಬು ಹೃದಯದ ಅಭಿನಂದನೆ ಸಲ್ಲಿಸುತ್ತೇನೆ. ಆಮೇಲೆ ಎಲ್ಲಾ ಜಿಲ್ಲೆಗಳಲ್ಲೂ ಮಣ್ಣು ಪರೀಕ್ಷಾ ಕೇಂದ್ರ ತೆರೆಯಲಾಗಿದೆ ಎಂದರು, ಆದರೆ ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಅಂತಹ ಕೇಂದ್ರ ಆಗಿಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಮಾಡುವ ಮೊದಲು ಜಿಲ್ಲಾ ಸ್ಥಳವಾದ ಬಿಜಾಪುರಕ್ಕೆ ಮೊದಲು ಕೊಡಿ. ತೋಟಗಾರಿಕೆಗೆ ಬೇಕಾದ ಮಣ್ಣು ನೀರು ಪರೀಕ್ಷಾ ಮಾಡುವ ಕೇಂದ್ರ ಅಲ್ಲಿ ಸ್ಥಾಪನೆಯಾಗ ಬೇಕು.ಮಂತ್ರಿಗಳು ಹೇಳಿದಂತೆ ಬಿಜಾಪುರ ಜಿಲ್ಲೆ ತೋಟಗಾರಿಕೆಗೆ ಬೇಕಾದ ಮಣ್ಣು ನೀರುಗಳನುಳ್ಳ ಜಿಲ್ಲೆ. ಅಲ್ಲಿ ಬಹಳ ಪ್ರಸಿದ್ಧವಾದ ಹಣ್ಣು ಬೆಳೆಯಲಾಗುತ್ತಿದೆ. ಹವೆಯೂ ಅದಕ್ಕೆ ಅನುಕೂಲಕರವಾಗಿಯೇ ಇದೆ. ಹೋದ ಸಲ ಒಂದು ಪ್ರಶ್ನೆ ಈ ಬಗ್ಗೆ ಕೇಳಿದಾಗ ಕೋಲ್ಡ್ ಸ್ಟೋರೇಜ್ ಮಾಡಲು ಅಲ್ಲಿಗೆ ಮೂರು ಲಕ್ಷ ರೂಪಾಯಿ ಅದಕ್ಕಾಗಿ ಬಿಡುಗಡೆ ಮಾಡಲಾಗಿದೆ ಎಂದು ಆಶ್ವಾಸನೆ ಬಂತು. ಅದು ಬರೀ ಆಶ್ವಾಸನೆಯೋ ಅಥವಾ ದುಡ್ಡು ಏನಾದರೂ ಬಿಡುಗಡೆ ಮಾಡಲಾಗಿದೆಯೋ ತಿಳಿಸಬೇಕು ಅಲ್ಲಿಗೆ ಕೋಲ್ಡ್ ಸ್ಟೋರೇಜ್ ಬಹಳ ಅವಶ್ಯಕ ಇದೆ ಅದನ್ನು ಕಟ್ಟಲಿಕ್ಕೆ ಮಂಜೂರಾತಿ ಕೊಡಬೇಕು. ನಮ್ಮ ಬಿಜಾಪುರ ಜಿಲ್ಲೆ ಹಣ್ಣುಗಳಿಗೆ ಪ್ರಸಿದ್ಧ. ಅಲ್ಲಿನ ದಾಳಿಂಬೆ ಉತ್ತಮ ರೀತಿಯಲ್ಲಿ ಬರುತ್ತಿದೆ. ಆದರೆ ಬೆಂಗಳೂರು ಬಜಾರಿಗೆ ಅದು ಬಂದಾಗ ಇಂಡೆಂಟ್ ಹಾಕಿಲ್ಲ ಎಂದು ತಿರಸ್ಕರಿಸುತ್ತಾರೆ. 600-700 ಕಿಮೀಗಳಿಂದ ಹಣ್ಣು ತಂದಾಗ ಅದನ್ನು ಹಿಂದಕ್ಕೆ ಕಳಿಸದಂತೆ, ರೈತರಿಗೆ ಲುಕ್ಸಾನಾಗದಂತೆ ಬೇರೆ ಏನಾದರೂ ವ್ಯವಸ್ಥೆ, ಮಾಡಿ ಬಂದಿರುವ ಹಣ್ಣನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳತಕ್ಕಂಥ ಕೊನೆಯ ಒಂದು ವಿಚಾರವನ್ನು ತೀವ್ರವಾಗಿ ಪರಿಶೀಲನೆ ಮಾಡಿ ಎಂದು ಅಧಿಕಾರಿಗಳಿಗೆ ನಾನು ತಿಳಿಸುತ್ತೇನೆ. ಎರಡನೆಯದು ಈ ವಿಚಾರ ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ವಿಚಾರದಲ್ಲಿ ಏನು ಹೇಳಿದ್ದಾರೆ, there is one laboratory at Jamakhandi. ಅದು ಬಿಜಾಪುರ ಜಿಲ್ಲೆಯಲ್ಲಿದೆ. ಜಿಲ್ಲೆಯ ಹೆಡ್ ಕ್ವಾರ್ಟರ್‌ನಲ್ಲಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು:– ನಿನ್ನೆ ಪ್ರಶ್ನೆ ಬಂದಿತ್ತು.....

ಶ್ರೀ ಎಸ್. ಬಂಗಾರಪ್ಪ:- ಹೆಡ್ ಕ್ವಾರ್ಟರ್‌ನಲ್ಲಿ ಇಲ್ಲ. ಜಮಖಂಡಿಯಲ್ಲಿ ಇದೆ.

ಅಧ್ಯಕ್ಷರು:- ಹಾಗಾದರೆ ಬಿಜಾಪುರಕ್ಕೂ ಹಾಕುತ್ತೀರಿ......

ಶ್ರೀ ಎಸ್. ಬಂಗಾರಪ್ಪ:- ಹಾಕಿಯೇ ಹಾಕುತ್ತೇವೆ. ಮತ್ತೊಂದು ವಿಚಾರ ಈಗ ಕೋಲ್ಡ್ ಸ್ಟೋರೇಜ್ ವಿಚಾರದಲ್ಲಿ ಅವರು ಏನು ಹೇಳಿದರು, ಅವರು ಅದಲ್ಲದೇ ಮತ್ತೊಂದು it is included in District Plan for 1990-91. We will have this technically sanctioned and implemented during this year only. ಇದೇ ವರ್ಷದಲ್ಲಿ ನಾವು ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ, ಈ ಶೈತ್ಯಾಗಾರದ ವಿಚಾರದಲ್ಲಿ. ಅನಂತರ ಕಾಲೇಜು ವಿಚಾರದಲ್ಲಿ ಅವರು ಏನು ಹೇಳಿದರು, ಅದಕ್ಕೆ ಅಭಿನಂದನೆ ಇಲ್ಲ. It is a part of our duty. ಕರ್ನಾಟಕ ರಾಜ್ಯದ ರೈತರಿಗೆ ನಮ್ಮ ಕರ್ತವ್ಯ ಇದೆ, ಕರ್ತವ್ಯ ದೃಷ್ಟಿಯಿಂದ ನಾವು ಅದನ್ನು ಮಾಡಿದ್ದೇವೆ.

ಅಧ್ಯಕ್ಷರು:- ಅವರ ಅಭಿನಂದನೆ ಆಯಿತು, ಈಗ ಸ್ವಾಮಿರಾವ್ ಅಭಿನಂದನೆಯನ್ನು ಕೇಳಿ.

ಶ್ರೀ ಬಿ. ಸ್ವಾಮಿರಾವ್:- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡಿದ್ದಕ್ಕೋಸ್ಕರ ನಾನು ಮಾನ್ಯ ಮಂತ್ರಿಗಳಿಗೆ ಮತ್ತು ಸರ್ಕಾರವನ್ನು ಕೂಡಾ ಅಭಿನಂದಿಸುತ್ತೇನೆ. ಆ ಸಂದರ್ಭದಲ್ಲಿ ನಾನು ಮಾತನಾಡಲಿಕ್ಕೆ ನನಗೆ ಅವಕಾಶ ಆಗಲಿಲ್ಲ. ಅವಕಾಶ ಸಿಗದೇ ಹೋದರೂ ಕೂಡಾ ಮಂತ್ರಿಗಳು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಆಮೇಲೆ ಒಂದೇ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮೊದಲನೆಯ ಪ್ರಶ್ನೆ ಏನು ಇದೆ ಅದಕ್ಕೆಲ್ಲಾ ಉತ್ತರ ಅಚ್ಚಾಗಿದೆ. ಬಿಜಾಪುರಕ್ಕೆ ಅಚ್ಚಾಗಿ ಅಭಿನಂದನೆಗೆ ಕಳುಹಿಸಿದ್ದೇವೆಲ್ಲಾ, ಅದೇ ರೀತಿ ಉತ್ತರವನ್ನು ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಬಿ. ಸ್ವಾಮಿರಾವ್:- ಇನ್ನೊಂದು ವಿಚಾರ ಈ ಭತ್ತದ ಬೀಜಗಳನ್ನು ಸರ್ಕಾರ ಸಪ್ಲೈ ಮಾಡುವಾಗ ಎಷ್ಟೋ ಸಾರಿ ನಮ್ಮಂಥ ರಾಜಕಾರಣಗಳಿಂದ ಪಡೆದು ಸುಮಾರು ಒಂದು ಕ್ವಿಂಟಾಲ್ 200 ರೂಪಾಯಿಗೆ ಮೇಲ್ಪಟ್ಟು 250 ರೂಪಾಯಿ ರೇಟ್ ಇದ್ದರೆ 550 ರೂಪಾಯಿಗೆ ಭತ್ತವನ್ನು ನಮ್ಮ ರೈತರಿಗೆ ಕೊಡತಕ್ಕಂಥ ವ್ಯವಸ್ಥೆ ಇದೆ. ಅದನ್ನು ಕಡಿಮೆ ದರದಲ್ಲಿ ಕೊಡಬೇಕು ಮತ್ತು ಒಳ್ಳೆಯ ಬೀಜವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅದು ಚೆನ್ನಾಗಿ ಕೂಡಾ ಇರುವುದಿಲ್ಲ. ರೈತರೇ ಬೆಳೆದಿರತಕ್ಕಂಥ ಬೀಜವನ್ನು ಮತ್ತೊಂದು ಕಡೆಗೆ ಒಬ್ಬರಿಂದ ಒಬ್ಬರಿಗೆ ತೆಗೆದುಕೊಂಡು ಹೋಗಿ ಕೊಡುವಾಗ ಸುಮಾರು 200 ರೂಪಾಯಿಗಿಂತ ಜಾಸ್ತಿಯಾಗುತ್ತದೆ, ಅದನ್ನು ಕಡಿಮೆ ಮಾಡಿ, ಅವನ್ನು ಹತೋಟಿ ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಅದನ್ನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ:- ಕೋಲಾರ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕೆರೆಗಳು ಇವೆ. ಅವು ಚೋಳರಾಜರ ಕಾಲದಲ್ಲಿ, ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿರತಕ್ಕಂಥ ಕೆರೆಗಳು. ಆಲ್‌ಮೋಸ್ಟ್ ಎಲ್ಲಾ ಈಗ ಹೂತುಹೋಗಿವೆ. ನಮ್ಮ ಜಿಲ್ಲೆಯಲ್ಲಿ ಸರ್ಕಾರದವರು ಯಾವ ಪ್ರಾಜೆಕ್ಟ್‌ನ್ನು ಕೊಡುವುದಿಲ್ಲ. ಆಟ್‌ಲೀಸ್ಟ್ ಹೂಳು ಎತ್ತುವ ಪ್ರಾಜೆಕ್ಟ್ ಏನು ಇದೆ ಅದನ್ನು ನಮ್ಮ ಕೋಲಾರ ಜಿಲ್ಲೆಯಿಂದ ಕಮೆನ್ಸ್ ಮಾಡಿ ಮುಂದಿನ ಬೇಸಿಗಗೆ 1991ನೇ ಬೇಸಿಗೆಗೆ ಮುಗಿಸಬೇಕು ಏಕೆಂದರೆ ಈಗ ಮಳೆಗಾಲ ಬಂತಲ್ಲ, ನೀರು ಬಂದುಬಿಡುತ್ತದೆ. 91ನೇ ಬೇಸಿಗೆಯಲ್ಲಾದರೂ ಪ್ರಾರಂಭ ಮಾಡಿ ಕನಿಷ್ಟ 500 ಕೆರೆಗಾದರೂ ಮುಂದಿನ ವರ್ಷ ಪ್ರಾರಂಭ ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ತಾವು ಮೊದಲೇ ಹೇಳಿದ ಹಾಗೆ ಕೆರೆಗಳು ಅಲ್ಲಿ ಇವೆ. ಅದು ಚೋಳರಾಜರ ಕಾಲದಲ್ಲಿ ಕಟ್ಟಿಸಿರತಕ್ಕಂಥ ಕೆರೆಗಳು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಚೋಳರಾಜರು ಅವರು ದಿವಂಗತರಾದರೂ ಅವರಿಗೆ ನಾವು ಅಭಿವಂದನೆಯನ್ನು ಸಲ್ಲಿಸುತ್ತೇವೆ. ಮಣ್ಣು ಎತ್ತುವುದಕ್ಕೆ, ಹೂಳನ್ನು ಎತ್ತುವುದಕ್ಕೆ ಅದಕ್ಕೆ ಆದರೂ ಅವಕಾಶ ಇದರಲ್ಲಿ ಬೇಕು ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬಂದರೆ ನಾವು ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಇದಕ್ಕೆ ಯಾವುದಾದರೂ ಅಸಿಸ್ಟೆನ್ಸ್ ಬರುತ್ತದೆಯೇ ಹೇಗೆ ಎಂದು ನೋಡಬೇಕಾಗುತ್ತದೆ. ಒಂದು ವೇಳೆ ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರದಿದ್ದರೆ ಎಲ್ಲಾ ಕಡೆ ಕೆರೆಗಳು ತುಂಬಾ ಇರುವುದರಿಂದ ಸಾವಿರಾರು ಕೆರೆಗಳು ಇರುವುದರಿಂದ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೂ ಬರುತ್ತದೆ. ಅವರುಗಳ ಜೊತೆಯಲ್ಲಿ ವ್ಯವಹಾರ ಮಾಡಿ ಹೂಳನ್ನು ಎತ್ತತಕ್ಕಂಥ ವಿಚಾರದಲ್ಲಿ ಸರ್ಕಾರದ ಒಂದು ನೀತಿಯಾಗಿ ಪ್ರಕಟಣೆ ಮಾಡಿದರೆ ಬಹಳ ಒಳ್ಳೆಯದು. ಆ ಒಂದು ದೊಡ್ಡ ಮಟ್ಟದಲ್ಲಿ ತೆಗೆದುಕೊಳ್ಳತಕ್ಕಂಥ ವಿಚಾರವನ್ನು ಕೈಗೊಳ್ಳುತ್ತೇವೆ.

ಶ್ರೀ ಎ.ಎಸ್. ಸರ್‌ನಾಯಕ್:- ಮಾನ್ಯ ಅಧ್ಯಕ್ಷರೇ, ಈಗ ಬಿಜಾಪುರ ಜಿಲ್ಲೆಯಲ್ಲಿ ಡ್ರಿಪ್ ಇರಿಗೇಷನ್ ಸಬ್ಸಿಡಿ ಸ್ಕೀಮ್ ಎಂದು ಅಳವಡಿಸಲಾಗಿದೆ. ಅದು ಬರೀ ನಾಲ್ಕು ತಾಲ್ಲೂಕುಗಳಿಗೆ ಸಬ್ಸಿಡಿ ಸ್ಕೀಮ್ ಆಗುತ್ತದೆ ಎಂದು ತಾವು ಈಗಾಗಲೇ ಹೇಳಿದ್ದೀರಿ. ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಪೊಟೆನ್‌ಷಿಯಲ್ ಇದೆ. ಡ್ರಿಪ್ ಇರಿಗೇಷನ್ ಸಬ್ಸಿಡಿ ಸ್ಕೀಮ್‌ನ್ನು ಇಡೀ ಬಿಜಾಪುರ ಜಿಲ್ಲೆಗೆ ಅಳವಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಇವೆಲ್ಲಾ ಕೆಲವು ಕಾರ್ಯಕ್ರಮಗಳನ್ನು ಸರ್ಕಾರ ಯೋಜನೆಯಲ್ಲಿ ಹಾಕಿದರೂ ಸಹ ಕರ್ನಾಟಕಕ್ಕೆ ವ್ಯಾಪಕವಾಗಿ ತೆಗೆದುಕೊಳ್ಳತಕ್ಕದ್ದಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಹನಿ ನೀರಾವರಿ ಅಂದರೆ, ಡ್ರಿಪ್ ಇರಿಗೇಷನ್ ಸ್ಕೀಮ್, ಲೇಟೆಸ್ಟ್ ಟ್ರಿಪ್ ಇರಿಗೇಷನ್. ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಇದು ಕಡಿಮೆ ನೀರಿನಿಂದ ಹೆಚ್ಚು ಬೆಳೆಯನ್ನು ತೆಗೆಯತಕ್ಕ ವಿಧಾನ. ಕೆಲವು

ಪ್ರಯೋಗಾತ್ಮಕವಾಗಿ ತೆಗೆಯುತ್ತಾ ಇರುವುದು, ಅದು ಉಪಯುಕ್ತ ಎಂದು ಅನೇಕ ಕಡೆ ಕಂಡು ಬಂದಿದೆ. ಹಣಕಾಸಿನ ಸ್ಥಿತಿಯನ್ನು ಆಧರಿಸಿ ಆದಷ್ಟು ಕಡೆ ಅದನ್ನು ವಿಸ್ತರಣೆ ಮಾಡತಕ್ಕ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ.ಎಸ್. ಪಾಟೀಲ್:- ಕರ್ನಾಟಕ ರಾಜ್ಯ ಬೀಜ ನಿಗಮದಲ್ಲಿ ಸುಮಾರು ರಾಜ್ಯದ ಎರಡು ನೂರು, ಮೂರು ನೂರು ಶೇರುಗಳನ್ನು ಮುಟ್ಟುಗೋಲು ಹಾಕಿದ್ದಾರೆ. ಅದಕ್ಕಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ರೈತರಿಗೆ ಆದ ಅನ್ಯಾಯವನ್ನು ಮತ್ತೊಮ್ಮೆ ಅವರಿಗೆ ಅವಕಾಶ ಕಲ್ಪಿಸಿಕೊಟ್ಟು ಶೇರ್ ಹಣವನ್ನು ತುಂಬಿಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ತಮಗೆ ಗೊತ್ತಿರುವ ಹಾಗೆ, ಸೀಡ್ ಕಾರ್ಪೊರೇಷನ್ ಹೇಗೆ ಆಯಿತು, ಏನು ಎಂಬ ವಿಚಾರ, ನಾನು ವಿವರಗಳಿಗೆ ಹೋಗಲಿಲ್ಲ. ಯಾರು ಯಾರು ಸದಸ್ಯರು, ಮೀಟಿಂಗ್ಸ್ ಆಯಿತೇ ಹೇಗೆ ಎನ್ನತಕ್ಕದ್ದರ ಬಗ್ಗೆ ಹೋಗಲಿಲ್ಲ. ಮುಟ್ಟುಗೋಲು ಹಾಕಿರತಕ್ಕದ್ದು ಯಾವುದು ಏನು ಎಂದು ನೋಡುತ್ತೇನೆ. ಏಕೆಂದರೆ, ಮುಟ್ಟುಗೋಲು ಹಾಕುವುದಕ್ಕೆ ಕೆಲವು ಕಾರಣಗಳು ಬಂದರೆ ಹಾಕಿಕೊಳ್ಳಬೇಕಾಗುತ್ತದೆ. ನಾನು ವಿವರವಾಗಿ ಅದನ್ನು ನೋಡುತ್ತೇನೆ. ಕೆಲವು ಕಾರಣಗಳಿಂದ ಮುಟ್ಟುಗೋಲು ಹಾಕಿಕೊಳ್ಳಬೇಕಾಗಿರುತ್ತದೆ. ಜೆರ್ಮಿನೇಷನ್ ಪರ್ಸೆಂಟೇಜಿನಲ್ಲಿ ಒಂದು ಸ್ವಲ್ಪ ವ್ಯತ್ಯಾಸ ಇದ್ದರೂ ಅದನ್ನು ತೆಗೆದುಕೊಳ್ಳಬೇಡಿ ಎಂದು ನಾನು ರೈತರಿಗೆ ಹೇಳಿದ್ದೇನೆ. ಏಕೆಂದರೆ ಅಂಥ ಬೀಜಗಳನ್ನು ತೆಗೆದು ಕೊಂಡು ಹೋಗಿ ಅವು ಹುಟ್ಟಲಿಲ್ಲ ಎಂದರೆ ಇಡೀ ವರ್ಷ ರೈತರು ತಲೆ ಬೋಳಿಸಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಯಾರಿಗೋ ಸಮಾಧಾನ ಮಾಡುವುದಕ್ಕೋಸ್ಕರ ತೆಗೆದುಕೊಳ್ಳತಕ್ಕ ಪ್ರಶ್ನೆ ಇಲ್ಲ. ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ ಅನ್ನು ನಾವು ಸೀಡ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಇಲಾಖೆಗಳಿಗೆ ಕೊಟ್ಟಿದ್ದೇನೆ. ಇದು ಅನಿವಾರ್ಯವಾಗಿ ಮಾಡಬೇಕು. ನಿಮ್ಮವರು ಮಾಡಿದ್ದಾರೆ ಎಂದಲ್ಲ.

ಶ್ರೀ ಜಿ.ಎಸ್. ಪಾಟೀಲ್:- ಸೀಡ್ ಕಾರ್ಪೊರೇಷನ್‌ನಿಂದ ಹೆಚ್ಚಿಗೆ ಶೇರ್ಸ್ ಅಲಾಟ್‌ಮೆಂಟ್ ಮಾಡಿದ್ದಾರೆ. ಅವರಿಗೆ ಟೈಮ್‌ನಲ್ಲಿ ಹಣ ತುಂಬಿಕೊಡಲಾರದ್ದಕ್ಕೆ ಈ ಹಿಂದೆ ಕೆಲವು ಸಾರಿ ಬಿಲ್‌ಗಳಲ್ಲಿ ಶೇರ್ ಅಮೌಂಟನ್ನು ಮುರಿದಿದ್ದೀರಿ. ಆದರೆ ಆ ಪ್ರಸಂಗದಲ್ಲಿ ಯಾವ ರೈತರು ತಮ್ಮ ಹತ್ತಿ ಬೀಜದ ರಕಮ್ ನಿಗಮದಲ್ಲಿ ಇದ್ದಾಗ ಕೂಡ ಹಣವನ್ನು ತಾವು ಮುರಿದ್ದೀರಿ. ಆಮೇಲೆ ಬಂದ ಶೇರ್ ಹಣ ಸಹ ಮುರಿದಿದ್ದೀರಿ. ಇಂತಹ ರೈತರ ಸಂಪೂರ್ಣ ಶೇರ್ ಅಮೌಂಟನ್ನು ಮುಟ್ಟುಗೋಲು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ತಮ್ಮಿಂದ ಎಲ್ಲಾ ವಿವರವನ್ನು ಪಡೆದು ಯಾವ ರೀತಿ ಅದನ್ನು ತೀರ್ಮಾನ ಮಾಡಬೇಕೋ, ನಾನು ಆ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ. ದಯುವಿಟ್ಟು ವಿವರವನ್ನು ಕೊಡಿ......

ಅಧ್ಯಕ್ಷರು:- ಪಾಟೀಲ್‌ರವರೇ ತಾವು ಕಾಗದ ಬರೆಯಿರಿ.

ಶ್ರೀ ಮನೋಹರ ತಹಶೀಲ್ದಾರ್:- ನನಗೆ ಮಾತನಾಡಲು ಅವಕಾಶ ಸಿಕ್ಕಲಿಲ್ಲ. 3-4 ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡಿ. ಹಿಂದಿನ ವರ್ಷ ಬರಗಾಲದಿಂದ ಬಹಳ ಲುಕ್ಸಾನು ಆಯಿತು. ಅದಕ್ಕೆ ಬೆಲೆ ವಿಮಾ ಯೋಜನೆಯಡಿಯಲ್ಲಿ ಬರಬೇಕಾದಂಥ ಬೆಳೆ ವಿಮಾ ಹಣ ರೈತರಿಗೆ ಬಂದಿಲ್ಲ. ಆದ್ದರಿಂದ ಅದನ್ನು ಬೇಗ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೀರಾ? ಎರಡನೆಯದು ಹಾನಗಲ್ ತಾಲ್ಲೂಕು ಮತ್ತು ಧಾರವಾಡ ಜಿಲ್ಲೆಯ ಹುನಗುಂದ, ಕಲಗಟಗಿ ತಾಲ್ಲೂಕುಗಳಲ್ಲಿ ಭತ್ತ ಬೆಳೆಯುವ ತಾಲ್ಲೂಕುಗಳೆಂದು ಪರಿಹಾರ ಯೋಜನೆಯಲ್ಲಿ ಸೇರಿಸಲು ಹಲವು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೀರಿ. ಆದರೆ ಇದುವರೆಗೆ ಅದು ಇಂಪ್ಲಿಮೆಂಟ್ ಆಗಿಲ್ಲ. ಆದ್ದರಿಂದ ಮನೆಗೆ ಒಂದು ಕೊಳವೆ ಬಾವಿಗಳನ್ನು ತೆಗೆಸುವಂತಹ ಯೋಜನೆಯಡಿಯಲ್ಲಿ ಇದನ್ನು ಸೇರಿಸಿ ಭತ್ತ ಬೆಳೆಯುವುದಕ್ಕೆ ಪರಿಹಾರ ಕೊಡುತ್ತೀರಾ ಎಂದು ಹೇಳಬೇಕು. ಮೂರನೆಯದು ಕ್ರೆಡಿಟ್ ಕಾರ್ಡ್ ರೈತರಿಗೆ ಕೊಡವ

೮.೦೫ ಪಿ.ಎಂ.

ವಿಚಾರ, ಇದು ಸರ್ಕಾರದ ಒಂದು ವಿಚಾರ ಆಗಿತ್ತು. ಆದರೆ ಇದುವರೆಗೆ ರೈತರಿಗೆ ಕ್ರೆಡಿಟ್ ಕಾರ್ಡ್ ಕೊಡುವಂತಹ ವ್ಯವಸ್ಥೆ ಆಗಿಲ್ಲ. ದಯವಿಟ್ಟು ಇದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ನಾಲ್ಕನೆಯದು, ಬಂಗಾರಪ್ಪನವರ ವರದಿಯನ್ನು ಜಾರಿಗೆ ತರುತ್ತೀರ. ಏಕೆಂದರೆ, ಅವರು ಈಗ ಮಂತ್ರಿಗಳಾಗಿದ್ದಾರೆ. ಮೊದಲು ವರದಿ ಕೊಟ್ಟರು ಮತ್ತು ರಾಷ್ಟ್ರಮಟ್ಟದ ಒಂದು ಸಮಿತಿಯಲ್ಲಿ ಕೂಡ ಇದ್ದರು. ಆದುದರಿಂದ ಬಂಗಾರಪ್ಪ ವರದಿಯನ್ನು ಜಾರಿಗೆ ಕೊಡುತ್ತೀರ? ಇಷ್ಟು ವಿಷಯಗಳಿಗೆ ಉತ್ತರ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ನಾಲ್ಕೇ ಪ್ರಶ್ನೆಗಳಿಗೆ ಸೀಮಿತಗೊಳಿಸಿದ್ದರಿಂದ ಮಾನ್ಯ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ಹಾನಗಲ್ ಜಿಲ್ಲೆಯಾದರೂ ಅವರದು ನನ್ನ ಪಕ್ಕದ ತಾಲ್ಲೂಕು. ಅಲ್ಲೂ ಕೂಡ ಬರಗಾಲದ ದವಡೆಗೆ ಸಿಕ್ಕಿರತಕ್ಕಂಥ ಅನೇಕ ಪ್ರದೇಶಗಳಿವೆ. ಅಲ್ಲಿ ಧರ್ಮ ಯೋಜನೆ ಎಂದು ಒಂದು ಚಿಕ್ಕ ಯೋಜನೆ ಇದೆ, ಅದರಲ್ಲಿ ಸರಿಯಾಗಿ ನೀರು ತುಂಬುವುದಿಲ್ಲ, ನೀರು ಬರುವುದಿಲ್ಲ, ಜನರಿಗೆ ಅದು ಉಪಯೋಗ ಕೂಡ ಆಗುತ್ತಾ ಇಲ್ಲ. ಬೆಳೆ ವಿಮಾ ವಿಚಾರದಲ್ಲಿ ನನಗೆ ನೆನಪು ಮಾಡಿಕೊಟ್ಟಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಇದನ್ನು ಪ್ರಾಯೋಗಿಕವಾಗಿ ಮಾಡಬೇಕೆಂದು ರಾಷ್ಟ್ರದ ಅನೇಕ ಭಾಗಗಳಲ್ಲಿ ವಿಚಾರ ನಡೆಯುತ್ತಾ ಇದೆ. ಈಗ ಕೋ ಆಪರೇಟೀವ್ ಸೆಕ್ಟಾರ್‌ನಲ್ಲಿರತಕ್ಕಂಥ ಕಮರ್ಷಿಯಲ್ ಬ್ಯಾಂಕ್ಸ್ ಗವರ್ನ್‌ಮೆಂಟ್ ಆಫ್ ಇಂಡಿಯ, ರಾಜ್ಯ ಸರ್ಕಾರ ಇಲಾಖೆಗಳ ಮುಖಾಂತರ ಪ್ರಯತ್ನಮಾಡಿ ಬೆಳೆ ವಿಮೆಯನ್ನು ಆದಷ್ಟು ಚುರುಕುಗೊಳಿಸಬೇಕು ಆಮೇಲೆ ಪೆರಿಸ್ಟ್ರಿಕ್ಟಾಗಿ ಯಾರ್ಡ್‌ಸ್ಟಿಕ್ ಫಿಕ್ಸ್‌ಮಾಡಬೇಕು. ಏಕೆಂದರೆ ಇದನ್ನು ಮಾಡುತ್ತಾ ಹೋದರೆ ಯಾವ ಇನ್‌ಶೂರೆನ್ಸ್ ಕಂಪನಿಗಳು ಉಳಿಯುವುದಿಲ್ಲ, ಬಹಳ ಕಷ್ಟ ಎಂದು ಇವೆಲ್ಲಾ ಪ್ರಶ್ನೆಗಳಿವೆ. ಆದುಧರಿಂದ ನಾವು ಈಗ ಕೆಲವು ಭಾಗದಲ್ಲಿ ಪೈಲಟ್ ಪ್ರಾಜೆಕ್ಟ್‌ನ್ನಾಗಿ ತೆಗೆದುಕೊಳ್ಳತಕ್ಕಂಥ ಒಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಈಗ ಕರ್ನಾಟಕ ರಾಜ್ಯದಲ್ಲಿ ನಾವು ಕೆಲವು ಕಡೆಯಲ್ಲಿ ಮಾಡಿದ್ದೇವೆ, ರೈತರು ಇದರಿಂದ ಸಮಾಧಾನವಾಗಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಯಾವ ರೀತಿ ಅದನ್ನು ವಿಸ್ತೃತಗೊಳಿಸಬೇಕು, ಬೆಳೆಸಬೇಕು ಎಂದು ನಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ ಅಂತಿಮ ತೀರ್ಮಾನಕ್ಕೆ ಬರಬೇಕು ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಇನ್ನು ಕೆಲವು ಕಡೆಗಳಲ್ಲಿ ಅಂದರೆ ಹಾನಗಲ್, ಕಲಘಟಗಿ ತಾಲ್ಲೂಕು ವಿಚಾರದಲ್ಲಿ ನನಗೆ ಭತ್ತದ ಬಗ್ಗೆ ನನಗೆ ಗೊತ್ತಿದೆ. ಅದರಲ್ಲಿ ಭತ್ತ ಬೆಳೆಯು ತಕ್ಕಂಥ ಪ್ರದೇಶ ಸೆಮಿ ಮಲೆನಾಡು ಪ್ರದೇಶಕ್ಕೆ ಬರುತ್ತದೆ. ಆಮೇಲೆ ಹಿರೇಕೆರೂರು ತಾಲ್ಲೂಕಿನಲ್ಲಿ ಕೆಲವು ಭಾಗ ಬರುತ್ತದೆ. ಆದರೆ ಭತ್ತ ಬೆಳೆಯುತಕ್ಕಂಥ ವಿಚಾರದಲ್ಲಿ ಯಾವರೀತಿ ಬೀಜಬೇಕು ಏನು ಬೇಕಾದರೂ ನಮ್ಮ ಹತ್ತಿರ ರೆಡಿ ಇದೆ. ಅದನ್ನು ಕಳಿಸಿಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಯಾವ ಬೀಜಬೇಕು ಏನು ಬೇಕು ಎನ್ನತಕ್ಕಂಥ ವಿವರಗಳನ್ನು ಪತ್ರ ಬರೆದರೆ ನಾನು ಕಳಿಸಿಕೊಡುತ್ತೇನೆ. ಆದರೆ ಈಗಾಗಲೇ ಬಿತ್ತತಕ್ಕಂಥ ಕಾಲ ಮುಗಿದು ಹೋಗಿದೆ. ಧರ್ಮ ಯೋಜನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶದಲ್ಲಿ ನಾಟಿ ಮಾಡುವುದಕ್ಕೆ ನಿಮಗೆ ಯಾವ ಬೀಜ ಬೇಕು ಎಂಬುದನ್ನು ಪತ್ರ ಬರೆದು ತಿಳಿಸಿದರೆ ನಮ್ಮ ಇಲಾಖೆ ಅಥವಾ ಯೂನಿವರ್ಸಿಟಿ ಲೆವೆಲ್‌ನಲ್ಲಿ ಸಿಗತಕ್ಕಂಥಾದ್ದನ್ನು ಕಳಿಸಿಕೊಡತಕ್ಕಂಥ ವ್ಯವಸ್ಥೆ ಕೂಡ ಮಾಡುತ್ತೇವೆ. ನಿಜ ಹೇಳಬೇಕಾದರೆ ಮೊನ್ನೆ ಮಾನ್ಯ ಹುಚ್ಚ ಮಾಸ್ತಿಗೌಡರು ಇಲ್ಲಿ ಬಹಳ ಪ್ರಯತ್ನ ಮಾಡಿದರು. ಕುಣಿಗಲ್ ತಾಲ್ಲೂಕಿಗೆ ನೂರಾರು ಲೋಡ್ ಗೊಬ್ಬರಬೇಕು ಎಂದು. ಆಗ ನಾವು ತಕ್ಷಣ ಕಾರ್ಯಕ್ರಮ ಹಾಕಿ, ನಾವು ನಮ್ಮ ಕಾರ್ಯದರ್ಶಿಯವರು ನಮ್ಮ ಕೆ.ಎ.ಎ.ಹೆಚ್ ಮ್ಯಾನೇಜಿಂಗ್ ಡೈರೆಕ್ಟರ್ ಸಹಿತ ತಕ್ಷಣ ಅಲ್ಲಿಗೆ ಕಳಿಸಿಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಗುಬ್ಬಿ ತಾಲ್ಲೂಕಿಗೂ ಕಳಿಸಿಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಅವರು ಇದು ಸಾಲದು ಎಂದು ಹೇಳಿದ್ದಾರೆ. ನಾವು ಇನ್ನೂ ಕಳಿಸಿಕೊಡತಕ್ಕ ಪ್ರಯತ್ನವನ್ನು ಮಾಡುತ್ತೇವೆ, ನಮ್ಮ ಯಾವುಯಾವುವು ಗೊಬ್ಬರದ ಕಂಪನಿಗಳಿವೆ, ಫ್ಯಾಕ್ಟರೀಸ್ ಇವೆ

ಅಲ್ಲಿಂದ ನಾವು ಪ್ರಯತ್ನ ಮಾಡುತ್ತೇವೆ. ಅದೇ ರೀತಿ ನಿಮಗೂ ಪ್ರಯತ್ನ ಮಾಡುತ್ತೇವೆ. ಆಮೇಲೆ ಕ್ರೆಡಿಟ್ ಕಾರ್ಡ್ ಬಗ್ಗೆ ಹೇಳಿದರು, ಅದು ನನಗೆ ಅರ್ಥವಾಗಲಿಲ್ಲ. ಅದೇನು ಕೊ ಆಪರೇಟೀವ್ ಸೊಸೈಟಿ ಕ್ರೆಡಿಟ್ ಕಾರ್ಡ್ ಏನು ಎಂದು ನನಗೆ ಅರ್ಥವಾಗಿಲ್ಲ.

ಶ್ರೀ ಮನೋಹರ ತಹಸೀಲ್ದಾರ್:- ಕ್ರೆಡಿಟ್ ಕಾರ್ಡ್ ಅಂದರೆ ಅದರಲ್ಲಿ ಎಲ್ಲಾ ವಿವರ ಇರುತ್ತದೆ. ಬ್ಯಾಂಕ್‌ನಲ್ಲಿ ಅಥವಾ ಸೊಸೈಟಿಯಲ್ಲಿ ಸಾಲ ಸೌಲಭ್ಯ ಎಷ್ಟು ಸಿಗಬೇಕು, ನಿಗದಿತ ಕಾಲಕ್ಕೆ ಬೀಜ, ಗೊಬ್ಬರ, ಔಷಧಿ, ಹಣ ಸಿಗಬೇಕು ಎನ್ನುವ ವಿವರ ಇರುತ್ತದೆ. ಅದನ್ನು ನೋಡಿದ ತಕ್ಷಣ ಅವರಿಗೆ ತಿಳಿಯುತ್ತದೆ, ಅದರಲ್ಲಿ ಎಲ್ಲಾ ಮಾಹಿತಿ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ:- ಅದು ಹೆಚ್ಚಾಗಿ ಕಂದಾಯ ಇಲಾಖೆಗೆ ಬರುತ್ತದೆ. ಆಮೇಲೆ ಮಣ್ಣಿನ ಗುಣದ ಬಗ್ಗೆ ಕಾರ್ಡುಗಳನ್ನು ಕಳಿಸಿಕೊಡುತ್ತಾರೆಂದು ಹೇಳಿದೆ. ಸರ್ವೆ ನಂಬರ್ ಯಾವುದು ಏನು ಎನ್ನುವುದೆಲ್ಲ ಕಂದಾಯ ಇಲಾಖೆಯಲ್ಲಿ ಬರುವುದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗಿಲ್ಲ. ಇನ್ನು ಬಂಗಾರಪ್ಪ ಸಮಿತಿ ಬಗ್ಗೆ, ನನ್ನ ಸಮಿತಿ ವರದಿ ಬಗ್ಗೆ ಹೇಳಿದರು ಇದರಲ್ಲಿ ಬೆಳೆ ವಿಚಾರ ಬರುತ್ತದೆ. ಬೆಳೆಗಳಿಗೆ ನ್ಯಾಯವಾದ ಬೆಲೆ ಸಿಗತಕ್ಕಂಥಾದ್ದು. ಪ್ರೊಫೆಸರ್ ನಂಜುಂಡಸ್ವಾಮಿಯವರು ಆ ವಿಚಾರವನ್ನು ಪ್ರಸ್ತಾಪ ಮಾಡಿದರು. ಎ.ಪಿ.ಸಿ. ಜೊತೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಗವರ್ನ್‌ಮೆಂಟ್ ಆಫ್ ಇಂಡಿಯ ಜೊತೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾವ ಸ್ಟಾಂಡರ್ಡ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಆ ವಿಚಾರದಲ್ಲಿ ನಾವು ಬದ್ಧರಾಗಿದ್ದೇವೆ. ನಿಜ ಹೇಳಬೇಕು ಅಂದರೆ, ಬೆಳೆಗಳಿಗೆ ನ್ಯಾಯವಾದ ಬೆಲೆ ನಿಗದಿ ಮಾಡುವ ವಿಚಾರದಲ್ಲಿ ಅದು ಪ್ರಾಯೋಗಿಕವಾಗಿ ಕೇಂದ್ರಮಟ್ಟದಲ್ಲಿದೆ ಎಂದು ನನ್ನ ಭಾವನೆ. ಅದು ಸರಿಯಲ್ಲ, ಅದನ್ನು ಮಾಡದೇ ಹೋದರೆ ನಾವು ಬೆಳೆ ತೆಗೆಯುವುದಕ್ಕಾಗುವುದಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಕನ್‌ಸ್ಯೂಮರ್ ಸೈಟಿನಿಂದ ನೋಡತಕ್ಕಂಥ ವಿಚಾರ, ಸಬ್ಸಿಡಿ ಮುಂತಾದ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಾವು ಮಾಡಬೇಕು. ಆದರೆ ಬೆಳೆಗಳಿಗೆ ಉತ್ತೇಜನಕಾರಿಯಾದ ಬೆಲೆ ಇಲ್ಲದೆ ಇದ್ದರೆ ಟೋಟಲ್ ಪ್ರೊಡಕ್ಷನ್‌ಗೆ ಪೆಟ್ಟಾಗುತ್ತದೆ ಎನ್ನುವುದು ಬಂಗಾರಪ್ಪ ಸಮಿತಿ ವರದಿಯ ತಿರುಳು. ಅದನ್ನು ಗಮನದಲ್ಲಿಟ್ಟುಕೊಂಡೇ ಉತ್ತರ ಕೊಡಬೇಕಾದರೆ ನಾನು ಆ ಮಾತನ್ನು ಮೊದಲೇ ಹೇಳಿದ್ದೇನೆ.

ಶ್ರೀ ಕೆ.ಪಿ. ರವೀಂದ್ರನಾಥ ಬಾಬು:- ನಮ್ಮ ಜಿಲ್ಲೆಯಲ್ಲಿ ಕಾಲೇಜಾದರೂ ಆದರೆ ಒಳ್ಳೆಯದು. ಏಕೆಂದರೆ ತರಕಾರಿ ನೋಡುವುದಕ್ಕೇ ಕಷ್ಟವಾಗಿದೆ. ಕಾಲೇಜನ್ನು ಪ್ರಾರಂಭ ಮಾಡಿದರೆ ಪುಸ್ತಕದಲ್ಲಿಯಾದರೂ ನೋಡೋಣ ಎಂದು. ಆದ್ದರಿಂದ ಕೃಷಿ ಕಾಲೇಜಾದರೂ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ನಾನು ಕೇಳಿಕೊಳ್ಳುತ್ತೇನೆ. ಮೂರು ಗಂಟೆ ಇದ್ದರೂ ಸಹ ಬಳ್ಳಾರಿ ಬಗ್ಗೆ ಒಂದು ಶಬ್ದ ಸಹ ಇಲ್ಲ.

ಅಧ್ಯಕ್ಷರು:- ಸಧ್ಯಕ್ಕೆ ಒಂದು ಲೈಬ್ರರಿ ಮಾಡಿಸಿಕೊಡಿ.

ಶ್ರೀ ಕೆ.ಲಕ್ಕಣ್ಣ:- ಬರೀ ಪುಸ್ತಕ ನೋಡಿದರೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಬಹಳ ಯೋಗ್ಯ ಸಲಹೆ ಕೊಟ್ಟಿದ್ದಾರೆ. ನಾನು ಅವರಿಗೆ ಅಭಿನಂದಿಸುತ್ತೇನೆ.

ಶ್ರೀ ಮಂಜುನಾಥ ಕುನ್ನೂರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರ ಕೊಡುತ್ತಾ ಹಾನಗಲ್ ಮತ್ತು ಕಲಗಟಗಿ ತಾಲ್ಲೂಕುಗಳು ಭತ್ತ ಬೆಳೆಯುತ್ತಿವೆ ಎಂದು ಹೇಳಿದ್ದಾರೆ. ಆದರೆ ಸಿದ್ದಾಪುರ ತಾಲ್ಲೂಕಿನಲ್ಲಿ ಕೂಡ 48 ಹಳ್ಳಿಗಳಲ್ಲಿ ಭತ್ತದ ಬೆಳೆ ಬೆಳೆಯುವುದಕ್ಕೆ ಅವಕಾಶ ಇದ್ದರೂ ಈ ವರ್ಷ ಬೆಳೆ ಮಾಡುವುದಕ್ಕೆ ಆಗಲಿಲ್ಲ. ಆದ್ದರಿಂದ ಮಾನ್ಯ ಸಚಿವರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ರೈತರು ಬೆಳೆದ ಬೆಳೆಗೆ ಯೋಗ್ಯವಾದ ಸರಿಯಾದ ದರ ಸಿಗುತ್ತಾ ಇಲ್ಲ ಎನ್ನತಕ್ಕಂಥದ್ದರ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಈ ವಿಷಯದಲ್ಲಿ ಬಹಳಷ್ಟು ಮಾತನಾಡಬೇಕು ಎಂದು ವಿಚಾರ ಮಾಡಿದ್ದೆ. ಆದರೂ ಕೂಡ ಎರಡು ಮಾತುಗಳಲ್ಲಿ ಹೇಳುತ್ತೇನೆ. ಇವೊತ್ತು ಆಸ್ಟ್ರೇಲಿಯಾ ಮತ್ತು ಕೆನಡಾ ದೇಶದಲ್ಲಿ ಆರ್ಥಿಕ ತಜ್ಞರ ಜೊತೆ

ಮಾತನಾಡಿದಾಗ ಅಲ್ಲೂ ಕೂಡ ಫೀಡ್ ಬೋರ್ಡ್ ಮತ್ತು ವುಲ್ ಬೋರ್ಡ್‌ಗಳು ಬಂದಿವೆ. ಶುಗರ್ ಬೋರ್ಡ್ ಇತ್ಯಾದಿ ಹಲವಾರು ಕಮಾಡಿಟಿ ಗೂಡ್ಸ್‌ಗಳ ಬೋರ್ಡ್‌ಗಳು ಬಂದಿದ್ದಾವೆ. ನಮ್ಮ ಮಾನ್ಯ ಮಂತ್ರಿಗಳಿಗೂ ಸಹ ಹೇಳಿದರು. ನಮ್ಮ ದೇಶದಲ್ಲಿ ಟೊಬ್ಯಾಕೋ ಬೋರ್ಡ್, ಆಗಿದೆ. ರಬ್ಬರ್ ಬೋರ್ಡ್ ಆಗಿದೆ, ಕಮೊಡಿಟಿ ಬೋರ್ಡ್ ಆಗಿದೆ, ಕಾಫೀ ಬೋರ್ಡ್ ಆಗಿದೆ. ಅಲ್ಲಿ ಪ್ಲಾಂಟರ್ಸ್‌ಗಳಿಗೆ ಸರಿಯಾದ ಬೆಲೆಗಳು ಸಿಕ್ಕಿದೆ, ಅದೇ ರೀತಿ ಮಾನ್ಯ ಮಂತ್ರಿಗಳು ಹೇಳಿದ್ದಂತೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಮಾಡಿಟಿಗಳನ್ನು ಬೆಳೆಯುತ್ತಿದ್ದೇವೆ ಇದರ ಜೊತೆಗೆ ಕಾಟನ್ ಕೂಡ ಬರುತ್ತದೆ. ಹಾಗೆಯೇ ಕಮರ್ಷಿಯಲ್ ಕ್ರಾಪ್ಸ್‌ಗಳು ಏನು ಇದ್ದಾವೆ,ಅದೇ ರೀತಿ ಕಮಾಡಿಟೀಸ್ ಬೋರ್ಡ್ ಗಳೆಂದು ಮಾಡಿ ಅದರಲ್ಲಿ ಫಾರ್ಮರ್ಸ್ ಪಾರ್ಟಿಸಿಪೇಷನ್ ಮತ್ತು ಗವರ್ನ್‌ಮೆಂಟ್ ಇನ್‌ವಾಲ್ವ್‌ಮೆಂಟ್ ಈ ರೀತಿ ಸೇರಿಕೊಂಡರೆ ಅಲ್ಲಿ ಸ್ಟೋರೇಜ್ ಮಾಡತಕ್ಕದ್ದಕ್ಕೆ ಆಗಲಿ, ಪ್ರೇಡಿಂಗ್ ಮಾಡ ತಕ್ಕದ್ದಕ್ಕೆ ಆಗಲಿ, ಮಾರ್ಕೆಟಿಂಗ್‌ಗೆ ಆಗಲಿ ವ್ಯವಸ್ಥೆ ಮಾಡಿದರೆ ನಮ್ಮ ರೈತರಿಗೆ ಯೋಗ್ಯ ಬೆಲೆ ಸಿಗುತ್ತದೆ. ಈ ರೀತಿ ಕಮಾಡಿಟೀಸ್ ಬೋರ್ಡ್‌ಗಳನ್ನು ಅವರು ಮಾಡ ಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಮಹಾರಾಷ್ಟ್ರ ರಾಜ್ಯದಲ್ಲಿ ಮಾಡಿ ಇವೊತ್ತು ಶುಗರ್ ಫಾಕ್ಟರಿಯಲ್ಲಿ ಅವರಿಗೆ ಯೋಗ ಬೆಲೆ ಸಿಕ್ಕಿದ್ದರಿಂದ ಅವರು ಮುಂಚೆ ಬಂದಿದ್ದಾರೆ. ಆ ಮಾದರಿಯಲ್ಲಿ ನೀವು ಕೂಡ ಇದನ್ನು ನೆನಪಿಡಬೇಕಾಗಿದೆ. ಈ ದೃಷ್ಟಿಯಿಂದ ಈ ದಿಸೆಯಲ್ಲಿ ತಾವು ಯೋಗ್ಯ ಸಹಾಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.....

ಶ್ರೀ ಎಸ್. ಬಂಗಾರಪ್ಪ:- ನಾನು ಮಾತನಾಡುವಾಗ ಶಿಗ್ಗಾವ್ ತಾಲ್ಲೂಕು ಮರೆತಿದ್ದೇನೆ. ಹಾನಗಲ್, ಶಿಗ್ಗಾಂ ತಾಲ್ಲೂಕು ಇವೆಲ್ಲಾ ಸೆಮಿ ಮಲೆನಾಡು ಬೆಲ್ಟ್ ಏರಿಯಾ. ಇವು ಕೂಡ ಇದರಲ್ಲಿ ಸೇರಿಕೊಳ್ಳುತ್ತದೆ. ಈಗ ಕೆಲವು ಹಳ್ಳಿಗಳು ಅಲ್ಲಿ ಬರುತ್ತವೆ. ನಾನು ಕೆಲವು ಕಡೆ ಹೋಗಿ ನೋಡಿದ್ದೇನೆ. ಈಗ ಭತ್ತದ ವಿಚಾರ ಹಾನಗಲ್ ಸದಸ್ಯರಿಗೆ ಏನು ಹೇಳಿದ್ದೇನೆ ಅದೇ ಉತ್ತರ ಕೂಡ ಇವರಿಗೆ ಅನ್ವಯವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಶಾರ್ಟೇಜ್, ವಗೈರೆ ಮತ್ತಿತರ ವಿಷಯಗಳಿಗೆ ತಿಳಿಸಿದ್ದಾರೆ. ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಮೆಣಸಿನಕಾಯಿ ವಿಚಾರದಲ್ಲಿ ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಶನ್ ವಿಚಾರ ಏನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸರಕಾರ ಸಚಿವರ ಜೊತೆ ಮಾತನಾಡಿ ಈ ವಿಚಾರವನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ. ಮಾರ್ಕೆಟ್ ಯಾರ್ಡ್ ಮಾಡಬೇಕು ಎನ್ನತಕ್ಕ ವಿಚಾರ ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಬಲ್ಲೆ. ವಿನಹ ಮಾರ್ಕೆಟಿಂಗ್ ಮಾಡದೇ ಇದ್ದರೆ ಕಷ್ಟವಾಗುತ್ತದೆ. ಸರಿಯಾಗಿ ರೈತರಿಗೆ ಪ್ರೈಸ್ ಸಿಕ್ಕದೆ ಕಷ್ಟವಾಗುತ್ತದೆ ಪ್ರೊಡಕ್ಷನ್‌ಗೆ ಪೆಟ್ಟು ಆಗುತ್ತದೆಂದು ಸೀಮಿತಕ್ಕೆ ಒಳಪಡಿಸಿ ನಾನು ಮಾತನಾಡಿದೆ. ಆದರೆ ಮಾರ್ಕೆಟಿಂಗ್ ಮಾಡತಕ್ಕ ತೀರ್ಮಾನ ಮಾಡತಕ್ಕದ್ದು ನಾನಲ್ಲ. ನನ್ನ ಸಹೋದ್ಯೋಗಿ ಮಂತ್ರಿಗಳವರ ಜೊತೆ ಮಾತನಾಡಿ ಆ ಕಾರ್ಯಕ್ರಮ ಹಾಕಿ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ನಾರಾಯಣ್:- ಅಧ್ಯಕ್ಷರೆ, ನಾನು ಕೇಳಬೇಕಾದ ಎಲ್ಲಾ ಕ್ಲಾರಿಫಿಕೇಷನ್ ನನ್ನ ಸ್ನೇಹಿತರು ಕೇಳಿದ್ದಾರೆ. ಮಾನ್ಯ ಮಂತ್ರಿಗಳ ಹತ್ತಿರ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮುಂಚೆ. ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಈಗ ನಾನು ಒಂದು ವಿಷಯ ಟಚ್ ಮಾಡದೇ ಇರುವುದನ್ನು ಕೇಳಬೇಕಾಗಿದೆ. ಅಗ್ರಿಕಲ್ಚರ್ ರಿಸರ್ಚ್ ಬಗ್ಗೆ ಟಚ್ ಮಾಡಿಲ್ಲ. ನಮ್ಮ ಕ್ಷೇತ್ರ ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ಪಡವಲಹಳ್ಳಿಗ್ರಾಮದಲ್ಲಿ ಸುಮಾರು 6 ಸಾವಿರ ಎಕರೆ ಕಾವಲು ಜಮೀನಿನಲ್ಲಿ ಅಗ್ರಿಕಲ್ಚರ್ ರಿಸರ್ಚ್ .ಸೆಂಟರ್ ಮಾಡಬೇಕೆಂದು ಪ್ರಯತ್ನ ನಡೆದಿದೆ ಎಂದು ತಿಳಿದಿದ್ದೇನೆ, ಅದರ ಬಗ್ಗೆ ಮಾಹಿತಿ ಕೊಡಬೇಕು. ಇನ್ನೊಂದು ಪ್ರಮುಖವಾದ ಪ್ರಶ್ನೆ ಅಂದರೆ, ನಮ್ಮ ಸಮಾಜದಲ್ಲಿ ರೈತನ ಸ್ಥಾನಮಾನದ ಬಗ್ಗೆ ಬಹುಶಃ ನಮಗೆ ಉತ್ತರ ಸಿಕ್ಕಿಲ್ಲ. ಸಮಂಜಸವಾದಂಥ ಉತ್ತರ ಬರತಕ್ಕಂಥ ಕಾಲ ಆಗಿದೆ ಎಂದು ತಿಳಿದಿದ್ದೇನೆ. ಮಾನ್ಯ ಬಂಗಾರಪ್ಪನವರು ಏನು ಒಂದು ಕ್ರಾಂತಿಕಾರಕ ವಿಚಾರಗಳು ಮತ್ತು ಅವರು ರೈತ ಸಮುದಾಯಕ್ಕೆ

ಕೊಟ್ಟಿರತಕ್ಕಂಥ ಭರವಸೆಯಿಂದ ಬಹುಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ರೈತರ ಹೊಸ ಶಕ ಆರಂಭವಾಗುತ್ತಿದೆ ಎಂದು ನಾನು ನಂಬಿದ್ದೇನೆ. ರಿಸರ್ಚ್ ಸೆಂಟರ್ ಬಗ್ಗೆ ಮತ್ತು ಸಮಾಜದಲ್ಲಿ ರೈತನ ಸ್ಥಾನಮಾನ ಇವೆರಡರ ಬಗ್ಗೆ ತಾವು ಹೇಳಬೇಕು. ಇವೊತ್ತು ರೈತ ಅಂದರೆ ಕೆಲಸಕ್ಕೆ ಬಾರದ ರೈತ ಎನ್ನುವ ಭಾವನೆ ಸಮಾಜದಲ್ಲಿ ಉಂಟು ಮಾಡಿದ್ದಾರೆ. ಆತನ ಬಗ್ಗೆ ಅನ್ನದಾತ ಎಂದು ಹೇಳುತ್ತೇವೆಯೇ ಹೊರತು, ಸಮಾಜದಲ್ಲಿ ಪೂರ್ತಿ ಗೌರವ ಸ್ಥಾನ ಕೊಟ್ಟಿಲ್ಲ. ಆದ್ದರಿಂದ, ಅದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯರು ಕೊಟ್ಟಿರತಕ್ಕ ಮಾತುಗಳಿಂದ ನನ್ನ ಇಲಾಖೆ ಮತ್ತು ನಾವು ಶಕ್ತಿಯನ್ನು ಹೆಚ್ಚಾಗಿ ಪಡೆದಿದ್ದೇವೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಅಗ್ರಿಕಲ್ಚರ್ ರಿಸರ್ಚ್ ಸೆಂಟರ್ ವಿಚಾರದಲ್ಲಿ ಸುಮಾರು 6 ಸಾವಿರ ಎಕರೆ ಇರತಕ್ಕ ಕಾವಲು ಜಮೀನು ವಿಚಾರ ಏನು ಹೇಳಿದ್ದಾರೆ, ಆ ವಿಚಾರದಲ್ಲಿ ನಾನು ವಿವರಗಳನ್ನು ಪಡೆಯದೇ ಕೂಡಲೇ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಹೇಳಲಿಕ್ಕೆ ಆಗುವುದಿಲ್ಲ. ವಿವರಗಳು ಇಲ್ಲದೆ ಉತ್ತರ ಕೊಡುವುದು ಈ ಸಂದರ್ಭದಲ್ಲಿ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಅವರಿಗೆ ಹೇಳಬೇಕಾಗಿದೆ. ತಾವು ವಿವರಗಳನ್ನು ತೆಗೆದುಕೊಂಡು ಬನ್ನಿ ಕುಳಿತುಕೊಂಡು ಮಾತನಾಡೋಣ. ಯಾವರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ವಿಚಾರದಲ್ಲಿ ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳತಕ್ಕಂತಾದ್ದಕ್ಕೆ ನಾನು ಗಮನ ಹರಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿದ ಸಂದರ್ಭದಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲಿಲ್ಲ. ತೆಂಗು ಬೆಳೆದಿರತಕ್ಕ ಪ್ರದೇಶದಲ್ಲಿ ಕಪ್ಪುತಲೆ ರೋಗ ಏನು ಹರಡುತ್ತಿದೆ ಅದನ್ನು ತಡೆಗಟ್ಟಲಿಕ್ಕೆ ಡಿಪಾರ್ಟ್‌ಮೆಂಟ್‌ನಿಂದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೆ, ಅದು ಒಂದು. ಎರಡನೆಯದು ದ್ರಾಕ್ಷಿ ಬೆಳೆಯುತಕ್ಕ ಜನರಿಗೆ ಫಂಗಿಸೈಟಸ್ ಅಂಡ್ ಇನ್‌ಸೆಕ್ಟಿಸೈಡ್ಸ್ ಬೇಕು ಅದಕ್ಕೆ ಇಂಪೋರ್ಟ್ಸ್ ಲೈಸೆನ್ಸ್ ಆಪ್ಷಾನ್ ತೆಗೆದುಕೊಳ್ಳಬೇಕೆಂದು ಸಜೆಷನ್ ಮಾಡಿದ್ದೆ, ಇನ್ನು ನಮ್ಮ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಹೊಸವಾಗಿ ನಾವು ಇದ್ದಾಗ ಒಂದು ಕೋರ್ಸ್ ಇಂಟ್ರಡ್ಯೂಸ್ ಮಾಡಿದ್ದೆವು. ಬಿ.ಎಸ್.ಸಿ. ಇನ್ ಫಾರೆಸ್ಟ್ ಅವರೆಲ್ಲರೂ ಗ್ರಾಜ್ಯುಯೇಟ್ಸ್ ಆಗಿ ಬಂದಿದ್ದಾರೆ. ಅವರುಗಳಿಗೆ ರೇಂಜ್ ಫಾರೆಸ್ಟ್ ಆಫೀಸರ್ ಆಗಿ ರೆಕ್ರೂಟ್‌ಮೆಂಟ್ ಮಾಡಬೇಕು ಅದಕ್ಕೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ ಆರ್.ಎಫ್.ಒ ಗಳನ್ನು ರೆಕ್ರೂಟ್ ಮಾಡಿಕೊಳ್ಳಲಿಕ್ಕೆ ಇರತಕ್ಕ ಸಿ ಅಂಡ್ ಆರ್ ರೂಲ್ ಚೇಂಜ್ ಮಾಡಬೇಕಾಗುತ್ತದೆ ಅದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ಈ ಒಂದು ಫಾರೆಸ್ಟ್ ವಿಚಾರದಲ್ಲಿ ಕೂಡಲೇ ಉತ್ತರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ,ಅದು ಡಿಪಿಎಆರ್‌ಗೆ ಬರತಕ್ಕಂಥ ವಿಚಾರ ಹೌದು, ಅದಕ್ಕೆ ಸಂಬಂಧಪಟ್ಟ ಸಚಿವರು ಇದ್ದಾರೆ, ಜಿ ಎ ಡಿ ಮಾನ್ಯ ಮುಖ್ಯಮಂತ್ರಿಗಳ ಕಡೆ ಬರುತ್ತದೆ, ಅದರ ಬಗ್ಗೆ ವಿಚಾರ ಮಾಡಿ ಯಾವ ರೀತಿ ಮಾಡಬೇಕು ಅದನ್ನು ನೋಡಿ ಮಾಡಬೇಕಾಗುತ್ತದೆ, ಈಗ ಸಿರಿಕಲ್ಚರ್ ವಿಚಾರ, ಈಗ ಬೆಂಗಳೂರು ಯೂನಿವರ್ಸಿಟಿ ಇದೆ, ಇಲ್ಲಿ ಪ್ರತ್ಯೇಕವಾಗಿ ಡಿಗ್ರಿ ಕೂಡ ಕೊಡತಕ್ಕಂತಾದ್ದು ಇದೆ. ನಿಮ್ಮ ಯೂನಿವರ್ಸಿಟಿಯಲ್ಲಿ ಅದು ಬೇರೆ ಇದೆ. ಕರ್ನಾಟಕ ಲೋಕಸೇವಾ ಆಯೋಗದವರು ಒಂದು ತರಹ ಹೇಳುತ್ತಾರೆ. ಹೇಗೆ ಮಾಡಬೇಕೆಂದರೆ ಅದನ್ನು ಏನಾದರೂ ಮಾಡಿಯೆಂದು ಹೇಳುತ್ತಾರೆ. ಯಾವುದು ಸರಿ ಮಾಡಬೇಕೆನ್ನುವ ವಿಚಾರವಿದೆ. ಫಾರೆಸ್ಟ್‌ನ ವಿಚಾರದಲ್ಲಿ ಹೇಳಿದರು. ಸಿರಿಕಲ್ಚರ್ ಮತ್ತೊಂದು ಅವುಗಳನ್ನು ನೋಡಿಕೊಂಡು ಸರಿಮಾಡತಕ್ಕ ವಿಚಾರ. ಅದನ್ನು ನಾನು ಸಂಬಂಧಪಟ್ಟ ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಅದನ್ನು ಅವರೊಂದಿಗೆ ತೆಗೆದುಕೊಳ್ಳುತ್ತೇವೆ. ಇನ್‌ಸೆಕ್ಟಿಸೈಡ್ ವಿಚಾರದಲ್ಲಿ ಹೇಳಿದರು, ಅದನ್ನು ನಾವು ಮಾಡದಿದ್ದರೆ ರೋಗಗಳನ್ನು ತಡೆಗಟ್ಟಲಿಕ್ಕೆ ಬಹಳ ಕಷ್ಟವಾಗುತ್ತದೆ, ಕಪ್ಪುತಲೆ ಹುಳದ ರೋಗ ಏನಿದೆ ಅದರ ಬಗ್ಗೆ ನಾವು ಈಗಾಗಲೇ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಲಾಗುತ್ತಿದೆ. ಆದರೂ ಅದು ಇನ್ನು ಕಂಟ್ರೋಲ್‌ಗೆ ಬಂದಿಲ್ಲ.

ಅವರೂ ಸಹ ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ತಾವು ಸಲಹೆ ಹೇಳಿದ್ದೀರಿ ಅದಕ್ಕಾಗಿ ತಮಗೆ ಅಭಿನಂದನೆಗಳು. ಅದರ ಬಗ್ಗೆ ಹೆಚ್ಚಿನ ನಿಗಾವಣೆಯನ್ನು ವಹಿಸಲಿಕ್ಕೆ ಅಗ್ರಿಕಲ್ಚರಲ್ ಸೈನ್ಸ್, ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್ ನಾವೆಲ್ಲರೂ ವ್ಯಾಪಕವಾದ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು. ನನಗೆ ಗೊತ್ತಿದೆ ನಾಲ್ಕೈದು ಜಿಲ್ಲೆಗಳಲ್ಲಿ ಇದಕ್ಕೆ ಹೆಚ್ಚು ಪೆಟ್ಟು ಬೀಳುತ್ತಿದೆ. ಇದರಿಂದ ತೆಂಗು ಉತ್ಪಾದನೆಗೆ ಪೆಟ್ಟಾಗಿದೆ. ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮವನ್ನು ಹಾಕಿಕೊಳುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:- ಇದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಕೆಲವು ಜಿಲ್ಲೆಗಳಲ್ಲಿ ಮಾಡಲಾಗುತ್ತಿದೆ. ಯೋಜನೆ ಮಂಜೂರಾತಿಗಾಗಿ ಕಾಯ್ದು ಕುಳಿತಿದೆ. ತಮ್ಮ ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟರೆ ಈ ವರ್ಷದಿಂದಲೇ ಆ ಯೋಜನೆ ಜಾರಿಗೆ ತರುತ್ತಾರೆ.

ಶ್ರೀ ಎಸ್. ಬಂಗಾರಪ್ಪ:- ಈ ಯೋಜನೆ ಜಪಾನ್ ಏಡೆಡ್ ಪ್ರೋಗ್ರಾಂ ಇದೆ. ನಾನು ಆಗಲೇ ಹೇಳಿದೆ, ಇದು 190 ಕೋಟಿ ರೂಪಾಯಿ ಯೋಜನೆ. ಕೇಂದ್ರಸರ್ಕಾರದವರು ಇದನ್ನು ಮಾಡಬೇಕೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟು, ನಮ್ಮ ಅಭಿಪ್ರಾಯಕ್ಕೆ ಪದೇ ಪದೇ ಒತ್ತಾಯ ಮಾಡಿದ್ದಾರೆ, ಅದು ನಿಜ. ಕೇಂದ್ರಸರ್ಕಾರದವರು ಒತ್ತಾಯ ಮಾಡಿದ್ದರೂ ನಮ್ಮ ಸರ್ಕಾರಕ್ಕೆ ಬೇರೆ ತೊಂದರೆಗಳು ಇದ್ದುದರಿಂದ ಸದ್ಯಕ್ಕೆ ನಿಧಾನವಾಗಿದೆ.

ಅಧ್ಯಕ್ಷರು:- ಬೇರೆ ತೊಂದರೆಗಳೇನು?

ಶ್ರೀ ಎಸ್. ಬಂಗಾರಪ್ಪ:- ನನ್ನ ಅಭಿಪ್ರಾಯ ಕೂಡ ಮಾನ್ಯ ಸಭಾಧ್ಯಕ್ಷರ ಅಭಿಪ್ರಾಯ. ನಾನು ಇಲ್ಲಿ ಬಂದು ನೋಡಿದಾಗ ಆ ಸ್ಟೇಜಿನಲ್ಲಿತ್ತು. ಅದಕ್ಕೋಸ್ಕರ ನಾನು ಹೇಳಿದೆ ವಿವರಗಳಿಗೆ ಹೋಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಅದನ್ನು ಜಾರಿ ಮಾಡುತ್ತೇವೆಂದು ಹೇಳಿದರೆ ಸಾಕು.

ಶ್ರೀ ಎಸ್. ಬಂಗಾರಪ್ಪ:- ಈ ಸಂದರ್ಭದಲ್ಲಿ ಬೇಡವೆಂದು ಹೇಳಿದ ಮೇಲೆ, ಕೇಂದ್ರ ಸರ್ಕಾರದವರು ಏನು ಮಾಡಿದ್ದಾರೆ ಎನ್ನುವುದನ್ನು ನೋಡದೆ, ಅವರನ್ನು ಕೇಳದೆ ಮಾಡುವುದು ಸರಿಯಲ್ಲ.

SRI H. EKANTHAIAH:- Half by the Government of India and another half by the Japan Government.

SRI S. BANGARAPPA:- I think at one stage a reply was sent to Government of India. ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿದ ಮೇಲೆ ಏನಾಗಿದೆ ಎಂಬುದನ್ನು ನೋಡ ಬೇಕಾಗಿದೆ.

MR. SPEAKER:- No programme aided by a foreign country will wait for you. You will have to grab, otherwise you will miss the bus.

SRI H. EKANTHAIAH:- I think they are awaiting reply from our Government.

SRI S. BANGARAPPA:- The matter is pending between the Government of India and the Japan Government. At what stage it lies I do not know. ಅದನ್ನು ನೋಡದೆ ಸಡನ್ ಆಗಿ ಹೇಳುವುದಕ್ಕೆ ಬರುವುದಿಲ್ಲ. But, I am in favour of implementing and opening that programme.

SRI H. EKANTHAIAH:- He must bring programmes like CLUMP (Comprehensive Land use and Improvement programme)

MR. SPEAKER:- You explore the possibilities.

SRI S. BANGARAPPA:- I am trying to explore the possibilities.

MR. SPEAKER:- If it is not for closed.

SRI S. BANGARAPPA:- If it is not closed, I would like to reopen the matter.

MR. SPEAKER:- You use your good offices to persuade the hon'ble Deputy Prime Minister Sri Devi Lal and enlist the willing co-operation of Sri Sindhya, Sri Ekanthaiah, Sri Bannikod and others.

SRI S. BANGARAPPA:- Sir...

MR. SPEAKER:- Enlist his co-operation also.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ರಾಜಶೇಖರಮೂರ್ತಿಯವರ ಸಹಾಯ ಬೇಕು ಇನ್ನು, ಏನೂ ಉಳಿದಿಲ್ಲ.

SRI S. BANGARAPPA:- I would like to make use of the services of the hon'ble Deputy Leader of the Opposition. If any occasion arises certainly I would like to make use of his services. Please be prepared to extend your co-operation.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ಒಂದು ಮಾತು ಹೇಳಿದೆ. ಆದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಆದಕ್ಕೆ ಹಣಕಾಸಿನ ತೊಂದರೆಯಿಲ್ಲ. ಕರ್ನಾಟಕ ಸ್ಟೇಟ್ ಸೀಡ್ಸ್ ಕಾರ್ಪೋರೇಷನ್‌ರವರು ಯಾವರೀತಿ ರೈತರಿಂದ ಬೀಜಗಳನ್ನು ಪಡೆದುಕೊಂಡು ಅವರು ಸರ್ಟಿಫೈ ಮಾಡುತ್ತಿದ್ದಾರೆ. ರೈತರ ಕಡೆಗೂ ಬೀಜಗಳ ಸ್ಯಾಂಪಲ್ ಕೊಡುತ್ತಿದ್ದಾರೆ. ಅವರ ಪ್ರಯೋಗಶಾಲೆಗಳಲ್ಲಿ ಫೇಲ್ ಆದರೂ ರೈತನ ಕಡೆಗೆ ಸ್ಯಾಂಪಲ್ ಅನ್ನು ಕೊಟ್ಟು ಪ್ರಾತ್ಯಕ್ಷಿಕೆಯ ಮೂಲಕ ಸರ್ಟಿಫೈ ಮಾಡಿ ಮನವರಿಕೆ ಮಾಡಿಕೊಡುತ್ತಿದ್ದಾರೆ. ಎಷ್ಟೋ ಸಾರಿ ಫೇಲಾದ ಬೀಜಗಳು ಸಹ ಸರಿ ಬಂದಿವೆ. ಕೆಲವು ಕಾರಣಗಳಿಂದ ಪ್ರೈವೇಟ್ ಕಂಪನಿಗಳು ಈ ತತ್ವವನ್ನು ಅನುಸರಿಸುವುದಿಲ್ಲ. ಪ್ರೈವೇಟ್ ಕಂಪನಿಗಳು ಮೈಕೋ, ಸ್ಯಾಂಡೋಸ್ ಈ ತರಹ ನೂರೆಂಟು ಕಂಪನಿಗಳು ಏನಿವೆ ಅವು ಈ ನಿಯಮವನ್ನು ಪಾಲಿಸುವುದಿಲ್ಲ. ರೈತರ ಕಡೆಗೆ ಸ್ಯಾಂಪಲ್ ಬೀಜದ ಚೀಲಗಳನ್ನು ಕೊಡುವುದಿಲ್ಲ. ಸರ್ಟಿಫೈಡ್ ಬೀಜ ಇದ್ದರೂ ಸಹಿತ ಅವು ಫೇಲಾಗಿವೆ. ಈ ರೀತಿ ರೈತರ ಕೋಟ್ಯಾಂತರ ರೂಪಾಯಿ ಹಣ ಲೂಟಿಯಾಗುತ್ತಿದೆ. ರಾಣಿಬೆನ್ನೂರಿನಲ್ಲಿ ಪ್ರೈವೇಟ್ ಕಂಪನಿಗಳ ಬಗ್ಗೆ ನಾನು ಜಿಲ್ಲಾ ಕಾರ್ಮಿಕರ ಅಧ್ಯಕ್ಷನಾಗಿದ್ದಾಗ ಸುಮಾರು 3 ಸಾವಿರ ಜನ ಹೋರಾಟ ಮಾಡಿದ್ದೇವೆ. 13 ದಿವಸಗಳ ಕಾಲ ಆ ಪ್ರೈವೇಟ್ ಕಂಪನಿಗಳನ್ನು ಬಂದ್ ಮಾಡಿದ್ದೇವೆ. ಸರ್ಕಾರ ಆ ಬಗ್ಗೆ ಬೀಜ ಉತ್ಪಾದನೆ ಮಾಡತಕ್ಕವರಿಗೆ ಸರ್ಕಾರ ಲೈಸೆನ್ಸ್ ಕೊಡಬೇಕು. ಮಾನ್ಯ ಮಂತ್ರಿಗಳು ಯಾವ ರೀತಿ ಕೆ.ಎಸ್.ಎಸ್.ಸಿ.ಯವರು ಸ್ಯಾಂಪಲ್‌ಗಳನ್ನು ರೈತರ ಕಡೆಗೆ ಕೊಡುತ್ತಾರೆ ಆ ತರಹ ಪ್ರೈವೇಟ್ ಕಂಪನಿಗಳು ಸಹ ಕೊಡಬೇಕು. ಪ್ರೈವೇಟ್ ಕಂಪನಿಗಳಲ್ಲಿರತಕ್ಕ ಬೀಜಗಳನ್ನು ಸರ್ಕಾರಿ ಪ್ರಯೋಗಾಲಯಗಳಲ್ಲಿ ಸರ್ಟಿಫೈ ಮಾಡಬೇಕು. ಸರ್ಕಾರಿ ಪ್ರಯೋಗಾಲಯಗಳಲ್ಲಿ ಪ್ರಯೋಗ ಮಾಡಿಸಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಬೇಕು. ರೈತರು 10 ಸಾವಿರ, 20 ಸಾವಿರ, 50 ಸಾವಿರ ಹಣ ತೊಡಗಿಸಿ ಬೀಜ ಉತ್ಪಾದನೆ ಮಾಡುವಂತಿರಬೇಕು. ಪ್ರೈವೇಟ್ ಕಂಪನಿಗಳವರು ಕೋಟ್ಯಾಂತರ ರೂಪಾಯಿಗಳ ಸಂಪಾದನೆ ಮಾಡುತ್ತಿದ್ದಾರೆ. ರಾಣಿಬೆನ್ನೂರಿನಲ್ಲಿ 5 ಲಕ್ಷ ರೂಪಾಯಿ ಬಂಡವಾಳ ಹಾಕಿ 50 ಕೋಟಿ ರೂಪಾಯಿ ಬಂಡವಾಳ ಮಾಡಿಕೊಂಡಿದ್ದಾರೆ. ಅವರು ರೈತರಿಗೆ ಮೋಸ ಮಾಡುತ್ತಿದ್ದಾರೆ. ಮಾನ್ಯ ಸಚಿವರ ಈ ಬಗ್ಗೆ ಕೂಡಲೇ ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, ಇದು ಬಹಳ ದೊಡ್ಡ ಪ್ರಶ್ನೆ. It is a Central Act, under the Seeds Act of 1956, ಕೆಲವು ಪ್ರೈವೇಟ್ ಡೀಲರ್ಸ್ ಬರುವುದಿಲ್ಲ. ಇದು ಕಾನೂನಿನ ಪ್ರಶ್ನೆ. Ofcourse, certain items are brought under the purview of the essential Commodities Act of 1955. ಮನಸ್ಸಿಗೆ ಬಂದಂತೆಲ್ಲಾ ಮಾಡಿ ಕಳಪೆ ಸೀಡ್ಸನ್ನು

ತೆಗೆದುಕೊಂಡು ಹೋಗಿ ಕೊಟ್ಟೂ ಕೊಟ್ಟೂ ರೈತರಿಗೆ ಮೋಸ ಮಾಡಿದ್ದಾರೆ. ತಾವು ಹೇಳುತ್ತಿರುವ ವಿಚಾರವನ್ನು ನಾವು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದು ಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಕಳಪೆ ಬೀಜಗಳನ್ನು ರೈತರಿಗೆ ಕೊಟ್ಟು ಅನ್ಯಾಯ ಮಾಡಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಕಂಪನಿಯವರು ಕೊಡತಕ್ಕ ಬಿತ್ತನೆ ಬೀಜ ಅಲ್ಲ. ರೈತರಿಗೆ ಬೀಜಗಳನ್ನು ಮಾಡಲಿಕ್ಕೆ ಕೊಟ್ಟು ಅವರು ಮಾಡಿದಂಥ ಬೀಜಗಳನ್ನು ಮತ್ತೆ ಅವರೇ ವಾಪಸ್ಸು ತೆಗೆದು ಕೊಳ್ಳುತ್ತಿದ್ದಾರೆ. ಫೌಂಡೇಷನ್ ಫೀಸ್ ಕೊಟ್ಟು ಅವರು ಖರೀದಿ ಮಾಡತಕ್ಕದ್ದನ್ನು ಕೆ.ಎಸ್.ಸಿ.ಯವರು ಸ್ಯಾಂಪಲ್ಲನ್ನು ರೈತರ ಕಡೆ ಕೊಡುತ್ತಿದ್ದಾರೆ. ಅವರ ಸರ್ಟಿಫಿಕೇಟ್ ಫೇಲ್ ಆದರೆ ರೈತರಿಗೆ ಸೀಲ್ ಮಾಡಿಕೊಟ್ಟಂಥ ಸ್ಯಾಂಪಲ್ಸ್‌ನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿಕೊಡಬೇಕು. ಆದರೆ ಅವರು ರೈತರಿಗೆ ಸ್ಯಾಂಪಲ್ಸ್ ಕೊಡುವುದಿಲ್ಲ. ಕೆ.ಎಸ್.ಸಿ. ನವರು ಯಾವ ರೀತಿ ಸ್ಯಾಂಪಲ್ ಸೀಡ್ಸ್‌ನ್ನು ಕೊಡುತ್ತಿದ್ದಾರೆ. ಅದೇ ರೀತಿ ಪ್ರೈವೇಟ್ ಕಂಪೆನಿಯವರೂ ಕೂಡ ರೈತರಿಗೆ ಸ್ಯಾಂಪಲ್ ಬೀಜಗಳನ್ನು ಕೊಡಬೇಕು. ಅವರ ಕಂಪನಿ ಪ್ರಯೋಗಾಲಯದಲ್ಲಿ ಫೇಲ್ ಆಗಿದೆಯೆಂದು ಕಂಡುಬಂದರೆ ರೈತರ ಹತ್ತಿರ ಇರತಕ್ಕ ಬೀಜದ ಸ್ಯಾಂಪಲ್ಲನ್ನು ಸರ್ಕಾರೀ ಪ್ರಯೋಗಾಲಯದಲ್ಲಿ ಪರೀಕ್ಷೆಮಾಡಿಸಿ ರಿಸಲ್ಟನ್ನು ಕಂಪನಿಯವರೂ ಮತ್ತು ರೈತರೂ ಒಪ್ಪಿಕೊಳ್ಳುವಂತೆ ಮಾಡಬೇಕು.

SRI BANGARAPPA:- It is a very good suggestion for action. Certainly I will keep it in mind. ಇದು ಒಳ್ಳೆಯ ಸಲಹೆ. ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರು ಕೊನೆಯ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್:- ತಾವು ಇಷ್ಟು ಹೊತ್ತು ಕುಳಿತಿರತಕ್ಕದ್ದು ನಿಜವಾಗಿ ಬಹಳ ಸಂತೋಷ., ನೀವು ಇಲ್ಲಿ ಕುಳಿತಿರತಕ್ಕದ್ದು ನಮಗೆ ಉತ್ಸಾಹ ಮತ್ತು ಸ್ಫೂರ್ತಿಯನ್ನು ಕೊಟ್ಟಿದೆ. ಇದುವರೆಗೆ ಎಲ್ಲಾ ಬೇಡಿಕೆಗಳಿಗೂ ಎಲ್ಲಾ ಸಚಿವರೂ ಕೊಟ್ಟಿರತಕ್ಕ ಉತ್ತರಗಳನ್ನು ನಾವು ನೋಡಿದೆವು. ಆದರೆ ಸುಮಾರು 3 ಗಂಟೆ 20 ನಿಮಿಷಕಾಲ ಉತ್ತರವನ್ನು ಕೊಟ್ಟಂಥ ಸಚಿವರು ಯಾರೂ ಇಲ್ಲ. ಬಹುಶಃ ಇದನ್ನು ಗಿನ್ನೀಸ್ ಬುಕ್‌ನಲ್ಲಿ ಸೇರಿಸಬೇಕಾಗುತ್ತದೆ. ಅವರು ಇನ್ನೂ ಹೇಳುವುದು ಬಹಳಷ್ಟಿದೆ. ಮಾನ್ಯ ಬಂಗಾರಪ್ಪನವರೂ ಮತ್ತು ನಾನೂ ಒಟ್ಟಿಗೆ ಹಿಂದೆ ಈ ಕಡೆ ಇದ್ದೆವು. ತಾವೂ ಈ ಕಡೆ ಇದ್ದಿರಿ. ಮಾನ್ಯ ಬಂಗಾರಪ್ಪನವರೂ ಮತ್ತು ನಾನೂ ಸುಮಾರು 20 ವರ್ಷಗಳ ಹಿಂದೆ....

ಶ್ರೀ ಎಸ್. ಬಂಗಾರಪ್ಪ:- ಆ ಕಡೆ ಕುಳಿತಿದ್ದಂಥ ದಿನಗಳನ್ನು ದೌರ್ಭಾಗ್ಯ ದಿನಗಳೆಂದು ನಾನು ಯಾವತ್ತೂ ಭಾವಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದು ನಿಜವಾಗಿಯೂ ಒಂದು ಸುವರ್ಣಯುಗ. ಆವತ್ತು 92 ಜನ ವಿರೋಧ ಪಕ್ಷದಲ್ಲಿದ್ದೆವು. ಮಾನ್ಯ ಚನ್ನಬಸವಪ್ಪನವರೂ, ಮಾನ್ಯ ಸಿದ್ಧವೀರಪ್ಪನವರೂ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ನಾವು ಇದ್ದೆವು. ನಾನೂ, ಬಂಗಾರಪ್ಪನವರೂ, ನಂಜೇಗೌಡರೂ, ಪುಟ್ಟದಾಸ್‌ರವರೂ ಬಹಳ ಹೋರಾಟವನ್ನು ಮಾಡುತ್ತಿದ್ದೆವು. ಆಗ ಮಂತ್ರಿಗಳು ಇವರ ಹೋರಾಟವನ್ನು ನಾವು ನಿಜವಾಗಿಯೂ ತಡೆದುಕೊಳ್ಳುವುದಕ್ಕಾಗುವುದಿಲ್ಲ ಎನ್ನತಕ್ಕ ಮಟ್ಟದಲ್ಲಿ ಹೋರಾಟ ನಡೆಸುತ್ತಿದ್ದೆವು. 1969ರಲ್ಲಿ ನಾನೂ ಮತ್ತು ಮಾನ್ಯ ಬಂಗಾರಪ್ಪನವರೂ ಪಾರ್ಲಿಮೆಂಟ್‌ನ ಮುಂದೆ ಕಪ್ಪು ಭಾವುಟವನ್ನು ಹಿಡಿದು ದಸ್ತಗಿರಿ ಕೂಡ ಆಗಿದ್ದೆವು. ಮಾನ್ಯ ಅಧ್ಯಕ್ಷರೇ ಮಂತ್ರಿಗಳ ಉತ್ತರವನ್ನು ನೋಡಿದರೆ ಒಂದು ರೀತಿ ಕಳಕಳಿ ವ್ಯಕ್ತವಾಗುತ್ತದೆ. ಎರಡೇ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಬೆಂಗಳೂರು ನಗರದಲ್ಲಿ ಈಗಾಗಲೇ ಹೇಳಿದಾರೆ. ಕಬ್ಬನ್‌ಪಾರ್ಕ್ ಉದ್ಯಾನವನ ಮತ್ತು ಕೆಂಪು ತೋಟ ಲಾಲ್‌ಬಾಗ್ ನಲ್ಲಿ ಇಂಗ್ಲೀಷರ ಕಾಲದಲ್ಲಿ ಪ್ರಾರಂಭವಾದ ತೋಟ. ಆದರೆ ಇತ್ತೀಚೆಗೆ ಬೆಂಗಳೂರು ಸುತ್ತಮುತ್ತ ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕಟ್ಟಿದ ದೊಡ್ಡ ದೊಡ್ಡ ಗೋಪುರಗಳು ಇವೆ. ಆ ಗೋಪುರಗಳನ್ನು ಮುಚ್ಚಿಹಾಕತಕ್ಕಂಥ ಅನೇಕಬೇರೆ ಬೇರೆ

ಕಟ್ಟಡಗಳು ಬರುತ್ತಿದೆ. ಅದು ಇತಿಹಾಸಕ್ಕೆ ಅಪಚಾರವಾಗತಕ್ಕಂಥ ಪರಿಸ್ಥಿತಿ ಇದೆ. ಈ ಕೆಂಪೇಗೌಡ ಗೋಪುರ ಉಳಿಯುವುದಕ್ಕೆ ಅದರ ಸುತ್ತಲೂ ಇರತಕ್ಕಂಥ ತೋಟಗಳನ್ನು ಬಹಳ ಸುಂದರವಾಗಿ ಬೆಳೆಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುವುದು ತಮ್ಮ ಒಂದು ಕರ್ತವ್ಯ. ಹಿಂದೆ ಕೆಂಗಲ್ ಹನುಮಂತಯ್ಯನವರು ಈ ಕಬ್ಬನ್ ಉದ್ಯಾನವನ ಏನಿದೆ ಅದರ ಸುತ್ತ ಯಾವುದೇ ಕಟ್ಟಡಗಳು ಬರಬಾರದೆನ್ನತಕ್ಕಂಥ ಅವರ ನಿರ್ಧಾರವಾಗಿತ್ತು. ಬಹುತೇಕ ಹೇಳುವುದಾದರೆ ರಿಸರ್ವ್‌ಬ್ಯಾಂಕ್ ಕೂಡ ಬರಕೂಡದೆಂದುಹೇಳಿದ್ದರು. ಈಗ ಬಹಳವಾಗಿ ಕಟ್ಟಡಗಳನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಯಾವುದೇ ಒತ್ತಡ ಬಂದರೂ ಏನು ಬಂದರೂ ಕಟ್ಟಡಗಳನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು.. ಮತ್ತೆ ಆ ಉದ್ಯಾನವನವು ಸಮಗ್ರವಾಗಿ ಉಳಿದುಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಇನ್ನು ಲಾಲ್‌ಬಾಗ್‌ನಲ್ಲಿ ಗಾಜಿನ ಮನೆ ಏನಿದೆ ಆ ಗಾಜಿನ ಮನೆ ಹೋಗಿ ಈಗ ತಗಡಿನ ಮನೆಯಾಗಿದೆ. 20 ಭಾಗ ಗಾಜು ಇದ್ದು 80 ಭಾಗ ತಗಡಿದೆ. ಒಂದು ಸಿದ್ಧಾಂತದಂತೆ ಆ ಗಾಜಿನ ಮನೆ ಉಳಿಯುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ? ಒಂದು ಇನ್ನು ಕೊನೆಯದಾಗಿ ಹೇಳಿಬಿಡುತ್ತೇನೆ. ಗಿರಿರಾಜ ಕೋಳಿ.

ಶ್ರೀ ಎಸ್. ಬಂಗಾರಪ್ಪ:- ಈಗ 8 ಗಂಟೆಯಾಗುತ್ತಾ ಬಂದಿತು. ನೀವು ಗಿರಿರಾಜ ಬಗ್ಗೆ ಹೇಳುತ್ತೀರಿ ಎನ್ನುವುದು ನನಗೆ ಚೆನ್ನಾಗಿ ಗೊತ್ತಿತ್ತು.

ಶ್ರೀ ವಾಟಾಳ್ ನಾಗರಾಜ್:- ಇದು ತಮಗೆ ಇಚ್ಛೆ, ನನಗೆ ಇಚ್ಛೆ ಇಲ್ಲದಿದ್ದರೂ ಅದರ ವಿಚಾರ ತಿಳಿದುಕೊಳ್ಳೋಣವೆಂದು ಗಿರಿರಾಜ ಅದರ ತೂಕ ಎಷ್ಟು, ಆ ಕೋಳಿಯನ್ನು ಎಷ್ಟು ಜನ ಸಚಿವರು ಉಪಯೋಗಿಸುತ್ತಿದ್ದಾರೆ, ಬೆಳವಣಿಗೆಯಲ್ಲಿ ಇತಿಹಾಸ ಇರತಕ್ಕಂಥಾದ್ದು ಸಚಿವರು ಎಷ್ಟು ಜನರು ಇದನ್ನು ಉಪಯೋಗಿಸುತಿದ್ದಾರೆ. ಎನ್ನುವ ವಿವರ ಬೇಕು. ಅಧಿಕಾರಿಗಳನ್ನು ಬಿಡಿ ಅಧಿಕಾರಿಗಳದ್ದು ಹೇಳಬೇಕಾದರೆ ರಾತ್ರಿಯೆಲ್ಲ ಹೇಳಬೇಕಾಗುತ್ತದೆ. ಮತ್ತು ಇದು ಎಷ್ಟು ಮೊಟ್ಟೆಯನ್ನು ಒಂದು ದಿವಸಕ್ಕೆ ಇರುತ್ತದೆ. ಇದು ಒಂದುಹೊಸ ವಿಚಾರ ಕಂಡುಹಿಡಿದದ್ದು.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೇ ಅದರ ಹೆಸರು ಗಿರಿರಾಜ, ಗಿರಿಯಮ್ಮ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಕೋಳಿ ಎಂದರೆ ಹೆಣ್ಣು ಕೋಳಿ ಗಂಡು ಕೋಳಿ ಎಂದಲ್ಲ ಗಂಡು ಕೋಳಿಯನ್ನು ಕೊಡಿ ಎಂದು ವ್ಯಾಪಾರಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಗಂಡುಕೋಳಿಯನ್ನು ತೆಗೆದುಕೊಂಡರೆ ಮೊಟ್ಟೆ ಇಡುತ್ತದೆಂದು ನಿಮಗೆ ಗೊತ್ತಿದೆಯಲ್ಲ?

ಅಧ್ಯಕ್ಷರು:- ನಿಮ್ಮ ಇಗ್‌ನೋರೆನ್ಸ್ ಇದೆಯಲ್ಲ ಟೋಟಲಿ ವ್ಯಕ್ತವಾಯಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮಂತ್ರಿಗಳು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು.

೮.೩೫ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ:- ಕಬ್ಬನ್ ಪಾರ್ಕ್ ಕಾಣದ ಹಾಗೆ ರಿಸರ್ವ್ ಬ್ಯಾಂಕ್‌ನ ಕಟ್ಟಡ ಮತ್ತೊಂದು ಕಟ್ಟಡ ಅಡ್ಡ ಬಂದಿರತಕ್ಕ ವಿಚಾರವನ್ನು ಆ ಸಮಿತಿಯ ಸಭೆ ಸೇರಿದಾಗ ಆ ವಿಚಾರವನ್ನು ಕೂಡ ಚರ್ಚೆ ಮಾಡುತ್ತೇವೆ. ಆ ಪಾರ್ಕಿನ ಪಕ್ಕದ ರಸ್ತೆಯಲ್ಲಿ ಹೋಗುತ್ತಿರಬೇಕಾದರೆ, ಕಣ್ಣಿಗೆ ಹಸಿರು, ಮರಗಿಡಗಳು, ಹೂವುಗಳು ಇರುವಂತಹದ್ದು ಕಾಣಬೇಕು. ಇದರಿಂದ ಎಷ್ಟೋ ಆನಂದವಾಗುತ್ತದೆ. ಹಲವಾರು ಕಾರಣಗಳಿಂದ, ಹಲವಾರು ರೀತಿಯ ಬಿಲ್ಡಿಂಗ್‌ಗಳು ಬಂದುಬಿಟ್ಟಿದೆ. ಈಗ ಆ ವಿಚಾರವನ್ನು ಚರ್ಚೆ ಮಾಡತಕ್ಕಂಥದ್ದು ಅರ್ಥವಿಲ್ಲದ್ದು. ದಿವಂಗತ ಕೆಂಗಲ್ ಹನುಮಂತಯ್ಯನವರು ಬಹಳ ದೂರದೃಷ್ಟಿಯನ್ನು ಇಟ್ಟುಕೊಂಡು ಅದರ ಸುತ್ತ ಬಿಲ್ಡಿಂಗ್‌ಗಳು ಬರಬಾರದು ಎಂಬ ವಿಚಾರವನ್ನು ಮಾಡಿದ್ದರು. ಆ ಒಂದು ತೀರ್ಮಾನವನ್ನು ಅವರು ತೆಗೆದುಕೊಂಡಿದ್ದರು. ಆದರೆ ಕೆಲವು ಕಟ್ಟಡಗಳು ಅದರ ಒಳಗಡೆಯೂ ಬಂದಿವೆ. ಆ ಪಕ್ಕದ ರಸ್ತೆಯಲ್ಲಿ ಹೋಗಬೇಕಾದರೆ ಏನೂ ಕಾಣುವುದಿಲ್ಲ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ

ಹೋಗುವುದಿಲ್ಲ. ಬೇರೆ ಬೇರೆ ಇಲಾಖೆಗಳ ವಿಚಾರವೂ ಇಲ್ಲಿರುವುದರಿಂದ ಅದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ಕೆಂಪೇಗೌಡರ ಕಾಲದಲ್ಲಿದ್ದಂತೆ ಬೆಂಗಳೂರು ನಗರದ ಸುತ್ತಲೂ ಗೋಪರಗಳು ಸುಂದರವಾಗಿ ತೋಟಗಾರಿಕೆ ಇಲಾಖೆಯವರು ಮಾಡಿ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಲೇ ಆಶ್ವಾಸನೆ ಕೊಡುತ್ತೇನೆ. ನಾವು ಅದಕ್ಕೆ ತಯಾರಾಗಿ ಇದ್ದೇವೆ. ಅದಕ್ಕೆ ಕಾರ್ಪೊರೇಷನ್‌ನವರು, ಸಂಬಂಧಪಟ್ಟ ಇಲಾಖೆಯವರು ಯಾರ್‍ಯಾರು ಇದ್ದಾರೆ ಇದರ ಸಂಪೂರ್ಣ ಜವಾಬ್ದಾರಿಯನ್ನು ನಮಗೆ ಕೊಡಬೇಕು. ಶ್ರೀಮಾನ್ ವೆಂಕಟೇಶ್‌ರವರು ಈಗ ಇಲ್ಲಿ ಇಲ್ಲ. ಕಬಿನಿ ಪ್ರಾಜೆಕ್ಟ್‌ನ ಹಿಂಭಾಗದಲ್ಲಿ ಅದೇ ರೀತಿ ಯು.ಕೆ.ಪಿ. ಪ್ರಾಜೆಕ್ಟ್‌ನ ಹಿಂಭಾಗದಲ್ಲಿ ತೋಟಗಾರಿಕೆ ಇಲಾಖೆಯವರು ಸುಂದರಗೊಳಿಸಿ ಇಲ್ಲ ಬೇರೆಯವರಿಗೆ ಬಿಟ್ಟುಕೊಡಿ ಎಂದು ಹೇಳಿದರು. ನಮಗೆ ಕೊಟ್ಟರೆ ಸುಂದರಗೊಳಿಸುತ್ತೇವೆ. ಅದಕ್ಕಾಗಿ ಸಮಿತಿ ಕೂಡ ರಚನೆಯಾಗಿದೆ. ನೀರಾವರಿ ಯೋಜನೆಗಳು ರಾಜ್ಯ ದಲ್ಲಿ ಎಲ್ಲೆಲ್ಲಿ ಇವೆ, ಅಲ್ಲೆಲ್ಲಾ ತೋಟಗಾರಿಕೆ ಇಲಾಖಾ ವತಿಯಿಂದ ಸುಂದರಗೊಳಿಸಬೇಕೆಂಬ ಯೋಜನೆಯನ್ನು ಮಾಡಿಕೊಂಡಿದ್ದೇವೆ. ಇಲಾಖೆಗೆ ಹಣ ಬರಬೇಕು ಅದರಂತೆ ಕಾಯುವುದಕ್ಕೆ ನಾವು ತಯಾರಾಗಿದ್ದೇವೆ. ಕಾರ್ಪೊರೇಷನ್‌ನವರು ಮಾಡುವುದಾದರೆ ಸಂತೋಷ. ಇಲ್ಲ ಅದರ ಸಂಪೂರ್ಣ ಜವಾಬ್ದಾರಿಯನ್ನು ನಮಗೆ ವಹಿಸಿಕೊಟ್ಟರೆ ಅದನ್ನು ನಾವು ಮಾಡಿಕೊಳ್ಳುತ್ತೇವೆ. ಇದರ ಬಗ್ಗೆ ನಾನು ಮೇಯರ್‌ರವರು ಹಾಗೂ ಕಾರ್ಪೊರೇಟರ್ ಮೊದಲು ನಡೆದಂತಹ ಸಭೆಗೆ ಆಹ್ವಾನಿಸಿ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿದ್ದೆ. ಮತ್ತೆ ಶಾಸಕರನ್ನೂ ಕೂಡ ಆ ಸಭೆಗೆ ಕರೆಯಿಸಿ ಮಾತುಕತೆ ಮಾಡತಕ್ಕ ವಿಚಾರವನ್ನು ಇಟ್ಟುಕೊಳ್ಳುತ್ತೇನೆ. ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಯ ವಿಚಾರವನ್ನು ಹೇಳಿದರು ಮಾನ್ಯ ಸದಸ್ಯರು. ಅಲ್ಲಿ ಅನೇಕ ರಾಜಕೀಯ ಸಮ್ಮೇಳನಗಳು ನಡೆದಿವೆ. ಕೆಲವೊಮ್ಮೆ ಮದುವೆ ರೆಸಿಪ್ಷನ್ ಕೂಡ ನಡೆದಿವೆ. ಆದರೆ ಇದನ್ನು ಚೆನ್ನಾಗಿ ಉಳಿಸಿಕೊಳ್ಳಬೇಕು, ಎಂಬುದಾಗಿ ನಿರ್ಣಯಿಸಿ ಇದೇ ತಿಂಗಳು 15ನೇ ತಾರೀಖಿನಿಂದ ನಾವು ಅದನ್ನು ಯಾವುದೇ ಸಭೆ ಸಮಾರಂಭಗಳಿಗೆ ಕೊಡಬಾರದೆಂದು ಸಚಿವ ಸಂಪುಟದ ತೀರ್ಮಾನವನ್ನೇ ಮಾಡಿದ್ದೇವೆ. ಆದರ ಒಳಗಡೆ ಹೂವನ್ನು ಬೆಳಸಲ್ಪಡುವ ಪ್ರದೇಶವಾಗಬೇಕೆಂಬ ಉದ್ದೇಶದಿಂದ, ಅಲ್ಲಿ ಫಲಪುಷ್ಪ ಪ್ರದರ್ಶನ ನಡೆಯುತ್ತದೆ. ಅದಕ್ಕೂ ರೆಡಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅದನ್ನು ಇನ್ನು ಮುಂದೆ ಯಾವುದೇ ಸಭೆ ಸಮಾರಂಭಗಳನ್ನು ನಡೆಸುವುದಕ್ಕೆ ಕೊಡ ಕೂಡದೆಂಬುದಾಗಿ ಸಚಿವ ಸಂಪುಟದ ತೀರ್ಮಾನವನ್ನು ಮಾಡಿದ್ದೇವೆ. ಇದರಿಂದ ಕೆಲವರಿಗೆ ತೊಂದರೆಯಾಗಬಹುದು. ಅವರ ಕ್ಷಮೆ ಕೋರುತ್ತೇನೆ. ಈ ಒಂದು ನಿರ್ಣಯವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು 80 ಪರ್ಸೆಂಟ್ ತಗಡು ಎನ್ನುವ ಮಾತನ್ನು ಹೇಳಿದ್ದಾರೆ. ಇತ್ತೀಚೆಗೆ ಹೋಗಿ ನೋಡಿದ್ದೀರಾ? ಎಷ್ಟು ವರ್ಷವಾಗಿರಬಹುದು ಅಲ್ಲಿಗೆ ಹೋಗಿ?

ಶ್ರೀ ವಾಟಾಳ್ ನಾಗರಾಜ್:- 6 ತಿಂಗಳು ಆಗಿರಬಹುದು.

ಶ್ರೀ ಎಸ್. ಬಂಗಾರಪ್ಪ:- ಸುಮಾರು 6 ತಿಂಗಳಿಂದೀಚೆಗೆ ಬಹಳ ಬದಲಾವಣೆ ಮಾಡಿದ್ದೇವೆ. ಗಾಜಿನ ಮನೆ ಎಂಬುದಾಗಿ ಅರ್ಥ ವಿಶ್ಲೇಷಣೆ. ಅದಕ್ಕೆ ಸರಿಯಾಗಿರತಕ್ಕ ರೀತಿಯಲ್ಲಿ ಮಾಡಿದ್ದೇವೆ. ಮತ್ತೆ ಇನ್ನೇನನ್ನಾದರೂ ಮಾಡಬೇಕು ಎಂದು ಇದ್ದರೆ ದಯಮಾಡಿ ಸಲಹೆ ಕೊಡಿ. ಆ ಬಗ್ಗೆ ಗಮನ ಕೊಡುತ್ತೇನೆ. ಇನ್ನು ಗಿರಿರಾಜ ಕೋಳಿಯ ಬಗ್ಗೆ ಹೇಳಿದ್ದಾರೆ. ದಿನಕ್ಕೆ ಎಷ್ಟು ಮೊಟ್ಟೆ ಇಡುತ್ತದೆ ಎಂಬುದನ್ನು ಸಧ್ಯಕ್ಕೆ ಕಂಡುಹಿಡಿದಿಲ್ಲ. ಆ ಬಗ್ಗೆ ತಮ್ಮ ಹತ್ತಿರ ಯಾವುದಾದರೂ ಇದ್ದರೆ ಕಳುಹಿಸಿ ಕೊಟ್ಟರೆ ನಾನು ಮೊಟ್ಟೆ ಇಡಿಸುತ್ತೇನೆ. ಎಷ್ಟು ಮೊಟ್ಟೆ ಇಡುತ್ತದೆ ಎಂಬುದನ್ನು ಅನಂತರ ಹೇಳುತ್ತೇನೆಂದು ಅವರೇ ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ನನ್ನನ್ನು ತಪ್ಪು ದಾರಿಗೆ ತಂದವರು ಶ್ರೀಮಾನ್ ವೆಂಕಟಪ್ಪನವರು. ಅವರು ನನ್ನ ಹತ್ತಿರ ಬಂದು ದಿನಕ್ಕೆ ಒಂದು ಕೋಳಿ ಎಷ್ಟು ಮೊಟ್ಟೆ ಇಡುತ್ತದೆಂದು ಕೇಳಿದರು. ಸತ್ಯ ಹೇಳುತ್ತೇನೆ. ಮೊಟ್ಟೆ ಪ್ರಶ್ನೆ ಹಾಕುತ್ತಿರಲಿಲ್ಲ. ನನ್ನ ಹತ್ತಿರ ಬಂದು ಎಷ್ಟು ಮೊಟ್ಟೆ ಇಡುತ್ತದೆಂದು ಕೇಳಿದರು. ಅದಕ್ಕೆ ದಿನಕ್ಕೊಂದು ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ:- ದಿನಕ್ಕೆ ಒಂದು ಬಾರಿ ಕೋಳಿ ಮೊಟ್ಟೆ ಇಟ್ಟರೆ ಅದಕ್ಕೆ ಹೆಸರನ್ನು ಮಾತ್ರ ವಾಟಾಳ್ ನಾಗರಾಜ್ ಅಂತ ಇಡುತ್ತೇನೆ. ಇಷ್ಟಾದ ಮೇಲೆ ಹೆಸರನ್ನು ಇಡಬೇಕಲ್ಲ. ನಾನು ಕೃಷಿ ಸಚಿವನಾಗಿ ನನ್ನ ಜವಾಬ್ದಾರಿ ಇದೆ. ರಾಜ್ಯದ ಎಲ್ಲಾ ಕಡೆ ಪ್ರವಾಸವನ್ನು ಮುಂದಿನ ತಿಂಗಳು ಹಾಕಿಕೊಂಡಿದ್ದೇನೆ. ಎಲ್ಲಾ ಜಿಲ್ಲೆಗಳಿಗೂ ಸಾಧ್ಯವಾದರೆ ಎಲ್ಲಾ ತಾಲ್ಲೂಕುಗಳಿಗೂ ಹೋಗುವುದಕ್ಕೆ ಸಿದ್ಧನಾಗಿದ್ದೇನೆ. ಎಲ್ಲಾ ಜಿಲ್ಲೆಗಳಿಗೆ ಹೋದಾಗ ಅಲ್ಲಿ ಮಳೆ-ಬೆಳೆ ವಿಚಾರದಲ್ಲಿ ಅಲ್ಲಿನ ರೈತರನ್ನು ಭೇಟಿಯಾಗಬೇಕೆಂದಿದ್ದೇನೆ. ಅಧಿಕಾರಿಗಳನ್ನೂ ಕೂಡ ನನ್ನ ಜೊತೆ ಕರೆದುಕೊಂಡು ಹೋಗುವ ದಿಸೆಯಲ್ಲಿ ಪ್ರವಾಸ ಹಾಕಿಕೊಂಡು ಹೋಗುತ್ತಿದ್ದೇನೆ. ತಮ್ಮ ಅಪ್ಪಣೆ ಪಡೆದು ಈ ಒಂದು ವಾಕ್ಯವನ್ನು ಸೇರಿಸಿದ್ದೇನೆ. ತಮ್ಮ ಅಪ್ಪಣೆ ಪಡೆದು ಸೋಮವಾರ ನಾನು ಇರುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಸೋಮವಾರ ದಿನಾಂಕ 16-7-90ರಂದು ಬೆಳಗ್ಗೆ 9-30 ಗಂಟೆಗೆ ಪುನಃ ಸಮಾವೇಶಗೊಳ್ಳುತ್ತದೆ.

(ಸದನವು ರಾತ್ರಿ 8-40ಕ್ಕೆ ಮುಂದೂಡಲ್ಪಟ್ಟು, ಸೋಮವಾರ
ದಿನಾಂಕ 16-7-90 ಬೆಳಗ್ಗೆ 9-30 ಗಂಟೆಗೆ ಪುನಃ
ಸಮಾವೇಶಗೊಳ್ಳಲು ತೀರ್ಮಾನಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

WD-163 LA VOL-XI